ಭಾನುವಾರ, ಅಕ್ಟೋಬರ್ 13, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಓದುಗರ ಗಮನಕ್ಕೆ

ಪ್ರಜಾವಾಣಿಯ ಇಂದಿನ ಸಂಚಿಕೆ ಎರಡು ಭಾಗಗಳಲ್ಲಿ ಪ್ರಕಟವಾಗಿದೆ..

ಕರ್ನಾಟಕ
ಒಂದು ರಾಜ್ಯ, ಹಲವು ಜಗತ್ತುಗಳು.
ಪ್ರವಾಸೋದ್ಯಮ ಇಲಾಖೆ

ಕರ್ನಾಟಕ ಸರ್ಕಾರ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ ಕೆ ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ಜಿಲ್ಲಾಡಳಿತ ಬೆಳಗಾವಿ ಹಾಗೂ ಪ್ರವಾಸೋದ್ಯಮ ಇಲಾಖೆ

ಯಲ್ಲಮ್ಮನ ಗುಡ್ಡದಲ್ಲಿ ಶ್ರೀ ರೇಣುಕಾ ಯಲ್ಲಮ್ಮ ಕ್ಷೇತ್ರ

ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯಿಂದ

ಕೈಗೊಳ್ಳಲಾದ ವಿವಿಧ ಅಭಿವೃದ್ಧಿ ಕಾಮಗಾರಿಗಳ

ಲೋಕಾರ್ಪಣೆ ಸಮಾರಂಭ

ದಿನಾಂಕ : 13-10-2024 ಬೆಳಿಗ್ಗೆ : 11-00 ಗಂಟೆಗೆ | ಸ್ಥಳ : ಶ್ರೀ ಕ್ಷೇತ್ರ ಯಲ್ಲಮ್ಮನ ಗುಡ್ಡ, ತಾ: ಸವದತ್ತಿ, ಬೆಳಗಾವಿ ಜಿಲ್ಲೆ.

ಶ್ರೀ ಎಚ್. ಕೆ. ಪಾಟೀಲ
ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವರು

ಶ್ರೀ ಸತೀಶ ಲ. ಜಾರಕಿಹೊಳಿ
ಮಾನ್ಯ ಲೋಕೋಪಯೋಗಿ ಸಚಿವರು
ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು, ಬೆಳಗಾವಿ

ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವರಾದ **ಶ್ರೀ ಎಚ್. ಕೆ. ಪಾಟೀಲ** ರವರು ಯಲ್ಲಮ್ಮನ ಗುಡ್ಡದಲ್ಲಿ ಶ್ರೀ ರೇಣುಕಾ ಯಲ್ಲಮ್ಮ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಯನ್ನು ವೀಕ್ಷಿಸಿ ಸಮಾಲೋಚಿಸುತ್ತಿರುವುದು.

: ಉದ್ಘಾಟನೆ :

ಶ್ರೀ ಸಿದ್ಧರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

: ಮುಖ್ಯ ಅತಿಥಿಗಳು :

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಶ್ರೀ ಸತೀಶ ಲ. ಜಾರಕಿಹೊಳಿ
ಮಾನ್ಯ ಲೋಕೋಪಯೋಗಿ ಸಚಿವರು
ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಬೆಳಗಾವಿ

ಶ್ರೀ ಎಚ್. ಕೆ. ಪಾಟೀಲ
ಮಾನ್ಯ ಕಾನೂನು, ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವರು

ಶ್ರೀ ರಾಮಲಿಂಗಾ ರೆಡ್ಡಿ
ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳಕರ
ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು

: ಅಧ್ಯಕ್ಷತೆ :

ಶ್ರೀ ವಿಶ್ವಾಸ್ ವ. ವೈದ್ಯ
ಮಾನ್ಯ ಶಾಸಕರು (ವಿಧಾನ ಸಭೆ), ಸವದತ್ತಿ-ಯಲ್ಲಮ್ಮ

: ವಿಶೇಷ ಆಮಂತ್ರಿತರು :

ಶ್ರೀ ಅಶೋಕ ಮ. ಪಟ್ಟಣ
ಮಾನ್ಯ ಸರ್ಕಾರಿ ಮುಖ್ಯ ಸಚೇತಕರು, ಕರ್ನಾಟಕ ವಿಧಾನಸಭೆ

ಶ್ರೀ ಭರಮಗೌಡ ಅ. ಕಾಗೆ
ಮಾನ್ಯ ಅಧ್ಯಕ್ಷರು, ವಾಯವ್ಯ ಸಾರಿಗೆ ನಿಗಮ ನಿಯಮಿತ

ಶ್ರೀ ಪ್ರಕಾಶ ಬಾ. ಹುಕ್ಕೇರಿ
ಕರ್ನಾಟಕ ಸರ್ಕಾರದ ಮಾನ್ಯ ವಿಶೇಷ ಪ್ರತಿನಿಧಿ-2 ನವದೆಹಲಿ

ಶ್ರೀ ಮಹಾಂತೇಶ ಎಸ್. ಕೌಜಲಗಿ
ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

ರಾಜ್ಯದ ಎಲ್ಲಾ ಗೌರವಾನ್ವಿತ ಸಚಿವರು, ಲೋಕಸಭಾ, ರಾಜ್ಯಸಭಾ, ವಿಧಾನಸಭಾ, ವಿಧಾನ ಪರಿಷತ್ ಸದಸ್ಯರುಗಳು, ನಿಗಮ ಮಂಡಳಿಯ ಅಧ್ಯಕ್ಷರುಗಳು ಹಾಗೂ ಎಲ್ಲಾ ಚುನಾಯಿತ ಪ್ರತಿನಿಧಿಗಳು

ಶ್ರೀ ರಾಮಲಿಂಗಾ ರೆಡ್ಡಿ
ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳಕರ
ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಚಿವರು

ಶ್ರೀ ವಿಶ್ವಾಸ್ ವ. ವೈದ್ಯ
ಮಾನ್ಯ ಶಾಸಕರು (ವಿಧಾನ ಸಭೆ), ಸವದತ್ತಿ-ಯಲ್ಲಮ್ಮ ಕ್ಷೇತ್ರ

ಕರ್ನಾಟಕ ರಾಜ್ಯಪತ್ರ

ಕರ್ನಾಟಕದಲ್ಲಿಯೇ ಅತಿ ಹೆಚ್ಚು ಭಕ್ತರನ್ನು ಹೊಂದಿರುವ ಶ್ರದ್ಧಾಕೇಂದ್ರ, ಬೆಳಗಾವಿ ಜಿಲ್ಲೆಯ ಸವದತ್ತಿಯ ರೇಣುಕಾ ಯಲ್ಲಮ್ಮನ ಗುಡ್ಡಕ್ಕೆ ವಾರ್ಷಿಕ 1 ಕೋಟಿ 25 ಲಕ್ಷಕ್ಕೂ ಹೆಚ್ಚು ಜನ ಭಕ್ತರು/ಪ್ರವಾಸಿಗರು ಬೇಟ್ಟಿಕೊಡುತ್ತಾರೆ. ಉತ್ತರ ಕರ್ನಾಟಕದ ಅತ್ಯಂತ ಪ್ರಮುಖ ಶ್ರದ್ಧಾ ಕೇಂದ್ರವಾಗಿರುವ ಯಲ್ಲಮ್ಮನ ಗುಡ್ಡ ಶ್ರಮ ಜೀವಿಗಳು, ರೈತಾಪಿ ವರ್ಗ, ಬೆವರು ಸುರಿಸುವ ಸಮುದಾಯಗಳು ಸೇರಿದಂತೆ ಎಲ್ಲ ಜನತೆಯ ಭಕ್ತಿ ಭಾವದ ಕೇಂದ್ರ. ಸವದತ್ತಿ ರೇಣುಕಾ ಯಲ್ಲಮ್ಮ ಕ್ಷೇತ್ರವನ್ನು ಮತ್ತು ಸುತ್ತಮುತ್ತಲಿನ ಪರಿಸರವನ್ನು ಜಾಗತಿಕ ದರ್ಜೆಯ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲು ರೇಣುಕಾಯಲ್ಲಮ್ಮ ಕ್ಷೇತ್ರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯನ್ನು ಕಾನೂನು ರೂಪಿಸಿ ರಚಿಸಲಾಗಿದೆ.

\- ಎಚ್. ಕೆ. ಪಾಟೀಲ
ಕಾನೂನು, ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವರು

ಸುಕ್ಷೇತ್ರ ಸವದತ್ತಿಯ ಶ್ರೀ ಯಲ್ಲಮ್ಮನ ದೇವಸ್ಥಾನದ ವ್ಯಾಪ್ತಿಯಲ್ಲಿನ ಪ್ರದೇಶದಲ್ಲಿ ಪ್ರವಾಸಿಗರಿಗೆ ಅಗತ್ಯವಾಗಿರುವ ಮೂಲಭೂತ ಸೌಕರ್ಯಗಳಾದ ಕೊಠಡಿಗಳನ್ನು ಒಳಗೊಂಡ ತಂಗುದಾಣಗಳು, ಡಾರ್ಮಿಟರಿ, ಪಾರ್ಕಿಂಗ್ ಸೌಲಭ್ಯ, ಸಾಮೂಹಿಕ ಶೌಚಾಲಯಗಳು ಹಾಗೂ ಸ್ನಾನಗೃಹಗಳು, ಲಗೇಜ್ ಕೊಠಡಿ, ಉದ್ಯಾನವನ, ಇತ್ಯಾದಿ ಸೌಲಭ್ಯಗಳನ್ನು ರೂ.22.45 ಕೋಟಿಗಳಲ್ಲಿ ಅಭಿವೃದ್ಧಿಪಡಿಸಿ ನಾಡಿಗೆ ಲೋಕಾರ್ಪಣೆ ಮಾಡಲಾಗುತ್ತಿದೆ.

ಸರ್ವರಿಗೂ ಆದರದ ಸ್ವಾಗತ

ಶ್ರೀ ವಿಫುಲ್ ಬನ್ಸಾಲ್ ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

ಶ್ರೀಮತಿ ಸಲ್ಮಾ ಕೆ. ಫಾಹಿಮ್ ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಪ್ರವಾಸೋದ್ಯಮ ಇಲಾಖೆ, ಬೆಂಗಳೂರು

ಶ್ರೀ ಸಂಜಯ ಬಿ. ಶೆಟ್ಟೆಣ್ಣವರ
ಪ್ರಾದೇಶಿಕ ಆಯುಕ್ತರು
ಬೆಳಗಾವಿ ವಿಭಾಗ, ಬೆಳಗಾವಿ

ಶ್ರೀ ವಿಕಾಶ್ ಕುಮಾರ್ ವಿಕಾಶ್ ಭಾ.ಪೊ.ಸೇ.
ಪೊಲೀಸ್ ಮಹಾನಿರೀಕ್ಷಕರು
ಉತ್ತರ ವಲಯ, ಬೆಳಗಾವಿ

ಡಾ. ರಾಜೇಂದ್ರ ಕೆ. ವಿ. ಭಾ.ಆ.ಸೇ.
ನಿರ್ದೇಶಕರು
ಪ್ರವಾಸೋದ್ಯಮ ಇಲಾಖೆ, ಬೆಂಗಳೂರು

ಶ್ರೀ ಮೊಹಮ್ಮದ್ ರೋಷನ್ ಭಾ.ಆ.ಸೇ.
ಜಿಲ್ಲಾಧಿಕಾರಿಗಳು
ಬೆಳಗಾವಿ

ಡಾ: ಭೀಮಾಶಂಕರ ಎಸ್. ಗುಳೇದ ಭಾ.ಪೊ.ಸೇ.
ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು
ಬೆಳಗಾವಿ

ಶ್ರೀ ರಾಹುಲ್ ಶಿಂಧೆ ಭಾ.ಆ.ಸೇ.
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ, ಬೆಳಗಾವಿ

ಶ್ರೀಮತಿ ಸೌಮ್ಯ ಎಂ. ಬಾಪಟ
ಜಂಟಿ ನಿರ್ದೇಶಕರು
ಪ್ರವಾಸೋದ್ಯಮ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ

ಈ ಬಸವರಾಜ ಕುರಿಹುಲಿ
ಉಪ ನಿರ್ದೇಶಕರು (ಪ್ರಭಾರ)
ಪ್ರವಾಸೋದ್ಯಮ ಇಲಾಖೆ, ಬೆಳಗಾವಿ

ಶ್ರೀ ಎಸ್.ಪಿ.ಬಿ. ಮಹೇಶ
ಕಾರ್ಯದರ್ಶಿಗಳು
ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ

ಶ್ರೀಮತಿ ಗೀತಾ ಕೌಲಗಿ ಕ.ಆ.ಸೇ.
ಆಯುಕ್ತರು
ಶ್ರೀ ರೇಣುಕಾ ಯಲ್ಲಮ್ಮ ಕ್ಷೇತ್ರ, ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ

ನುಡಿದಂತೆ ನಡೆದಿದ್ದೇವೆ...

ಶಕ್ತಿ
ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ

ಅನ್ನಭಾಗ್ಯ
ಬಡವರಿಗೆ ಪ್ರತಿ ತಿಂಗಳು 10 kg
5 ಕೆಜಿ ಆಹಾರಧಾನ್ಯ ಬದಲಿಗೆ ರೂ. 170

ಗೃಹ ಜ್ಯೋತಿ
ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ

ಗೃಹಲಕ್ಷ್ಮಿ
ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000

ಯುವನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000 | ₹1500

"ಎಲ್ಲಾ ತಂದೆ-ತಾಯಂದಿರು, ಪಾಲಕ / ಪೋಷಕರು ತಮ್ಮ 6 ರಿಂದ 14 ವರ್ಷ ವಯಸ್ಸಿನ ಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕು ನೀಡುವುದು"
ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ

ಪ್ರಕಟಣೆ:- ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು

Cooking elevated. Cleaning simplified.
Add some magic to your kitchen.
Introducing MagicLift Built-In Hobs
FABER
FRANKE'S AIR EXPERT
LIFTABLE BURNERS FOR EASY CLEANING
8 mm Thick Toughened Glass
Optimum Gas Consumption
Cast Iron Pan Support
High Thermal Efficiency
Imported Valves
Innovative Design
Range of Magiclift Hobs starting@₹28500/-
FROM THE HOUSE OF FABER
Built-In Hobs & Hobtops
Choose from wide range of Brass Burner Hobtops
Best seller
HOB UTOPIA PRO HT 804 BR CI
Brass Burner Hobs with Flame Failure Device
Net Quantity: 1 Number
MRP - ₹43990 Offer Price - ₹38990
HOB BELLA HT 753 BR AI
Full Brass Burner with Spill Proof Design
Net Quantity: 1 Number
MRP - ₹32550 Offer Price - ₹26490
HOB EXPERIA HT 754 ALU AI FFD
Brass Burner with Spill Proof Design
Net Quantity: 1 Number
MRP - ₹31490 Offer Price - ₹25990
HOB SUPERIA HT 763 BR AI
Brass Burner with Heat Chamber Grid Design
Net Quantity: 1 Number
MRP - ₹22900 Offer Price - ₹15990
Built-In Appliances
Choose from wide range of Built-In Appliances
Best seller
FBIO 83L 18F TFT BK-N
83L Built-In Oven, 18 Function with convection and rotisserie
Net Quantity: 1 Number
MRP - ₹92990 Offer Price - ₹83190
FBIO 80L 10F GLM-Steamer
80L Built-In Oven, 10 Function with convection and rotisserie
Net Quantity: 1 Number
MRP - ₹74990 Offer Price - ₹62990
Kitchen Chimneys
Choose from wide range of Auto Clean & Steam Clean Chimneys
HOOD BOLT FL SW SC BK 90
Steam Clean Technology with Suction: 1500 m3/hr, 5 year Comprehensive warranty
Net Quantity: 1 Number
MRP - ₹51990 Offer Price - ₹36990
Best seller
HOOD AETHER BLDC FL HC BK 60
BLDC Motor with LPG Sensor Autoclean Chimney Suction: 1500 m3/hr, 5 year Comprehensive warranty
Net Quantity: 1 Number
MRP - ₹47990 Offer Price - ₹29990
Best seller
HOOD CYGNUS IN 3D HC SC FL BK 75
Fully Automatic Chimney with Remote Control Suction: 1400 m3/hr, 5 year Comprehensive warranty
Net Quantity: 1 Number
MRP - ₹37000 Offer Price - ₹22890
Best seller
HOOD SUNNY IN HC SC FL LG 60
Heat Autoclean Chimney & Autoclean Alarm with Gesture Control, Suction: 1200 m3/hr, 5 year Comprehensive warranty
Net Quantity: 1 Number
MRP - ₹26990 Offer Price - ₹14590
COMBI MWO
FBIMWO 44L CGS TC
44L Built-In Microwave with convection & grilling
Net Quantity: 1 Number
MRP - ₹89990 Offer Price - ₹74890
Best seller
FBIMWO 34 CGS
34L Built-In Microwave with convection & grilling
Net Quantity: 1 Number
MRP - ₹65990 Offer Price - ₹58250
Dishwasher
DISHWASHER FFSD 8PR 14S
Free Standing Dishwasher with 14 place settings
Net Quantity: 1 Number
MRP - ₹56500 Offer Price - ₹46790
Gas Stoves
Choose from wide range of Cooktops
Best seller
COOKTOP GENIUS 804 AI BK
Liftable Burners for Easy Cleaning
Net Quantity: 1 Number
MRP - ₹25350 Offer Price - ₹18990
COOKTOP PRINCE PLUS 3BB BK
Premium Gas Stove with Ultra Slim Frame
Net Quantity: 1 Number
MRP - ₹12990 Offer Price - ₹10700
Small Domestic Appliances
Choose from wide range of Small Appliances
OVEN TOASTER GRILLER FOTG 60L
2200W, OTG with Convection, Rotisserie & double glass
Net Quantity: 1 Number
MRP - ₹18990 Offer Price - ₹10490
FWG CYRUS 15 DIGI (White Silver)
15, 25L Capacity, 8 Bar High Working Pressure
Net Quantity: 1 Number
MRP - ₹14990 Offer Price - ₹11990
Best seller
AIR OVEN FAO 25L 15F BK
Oven Cum Air Fryer, 25L Capacity & 15 Autocook Menus
Net Quantity: 1 Number
MRP - ₹34990 Offer Price - ₹12999
FMW INSTACOOK 30C
29L Capacity with grill & convection
Net Quantity: 1 Number
MRP - ₹19990 Offer Price - ₹15500
SPORTZ BLENDER FSB 3in1 Nero
400W Motor with Swirl Hi-Flow Technology
Net Quantity: 1 Number
MRP - ₹5999 Offer Price - ₹2990
Best seller
SLOW JUICER FSJ 200 BK-M
200W DC Motor Slow Juicer Cum Salad Maker
Net Quantity: 1 Number
MRP - ₹19990 Offer Price - ₹12490
Best seller
FWP HEALTH GUARD
RO Water Purifier with Zinc, Copper & Alkaline Minerals
Net Quantity: 1 Number
MRP - ₹21990 Offer Price - ₹14990
Best seller
FAF 4.5 ASBK
4.5L Air Fryer
Net Quantity: 1 Number
MRP - ₹10990 Offer Price - ₹5990
PANINI MAKER FTG 2200W 3in1 SS BK
2200W, 180 degree Adjustable Floating Lid
Net Quantity: 1 Number
MRP - ₹5990 Offer Price - ₹4200
For more offers visit our stores or website: www.faberindia.com
FABER
FRANKE'S AIR EXPERT
For corporate enquiries:
Contact No.: 9910782200, Email: Hitin.Kohli@franke.com
SCAN TO LOCATE NEAREST FABER PLATINUM STUDIO
SCAN TO LOCATE NEAREST DEALER
SCAN TO DOWNLOAD E-CATALOGUE
Finance Available*
BAJAJ FINSERV
HDB FINANCIAL SERVICES
HDFC BANK
ALSO AVAILABLE AT:
www.faberindia.com
*T&C Apply, Images shown above are for representatives purposes only & actual product may vary. Above offer is valid per unit only and on select models. Above features are available in specific models only & subject to change without prior notice. Limited period offer. Product available without this offer also.
FOLLOW US ON:
Faber.india
FaberIndia
FaberSpaIndia
Customer Service: 1800 209 3484
Email: ks-faberkart.in@franke.com
website: www.faberindia.com



naturals
Coloured by nature, Handcrafted by RmKV.
ನಿಸರ್ಗದ ಬಣ್ಣ, ಆರ್‌ಎಂಕೆವಿ ಇಂದ ಹ್ಯಾಂಡ್‌ಕ್ರಾಫ್ಟ್ ಮಾಡಲಾಗಿದೆ
100 years of Handcrafted Silk Heritage
RmKV Unique Silks
ಇಲ್ಲಿ ಪ್ರದರ್ಶಿಸಿರುವುದು ಟ್ರೀ ಆಫ್ ಲೈಫ್ ಸೀರೆ, ಪೀಚ್ ಫಜ್ ಸೀರೆ (ಕಲರ್ ಆಫ್ ಇಯರ್)ಹಾಗೂ 99 ಫ್ಲವರ್ಸ್ ಸೀರೆ (ಪುರಾತನ ಸಾಹಿತ್ಯದಿಂದ ಪ್ರೇರಿತ).
ಆರ್‌ಎಂಕೆವಿ ವಿನ್ಯಾಸ ಸ್ಟೂಡಿಯೋದಲ್ಲಿ ಪರಿಕಲ್ಪನೆ ರೂಪಿಸಿರುವ ಮತ್ತು ಆರ್‌ಎಂಕೆವಿ ಮಾಸ್ಟರ್ ವೀವರ್ಸ್ ಇಂದ ನೇಯ್ಗೆ ಮಾಡಿದ ಈ ಎಲ್ಲ
ಸೀರೆಗಳನ್ನು ಇಂಡಿಯನ್ ಮ್ಯಾಡರ್, ಲ್ಯಾಕ್ ಮತ್ತು ಮೈರೋಬಲನ್ ಇತ್ಯಾದಿ ಪದಾರ್ಥಗಳನ್ನು ಬಳಸಿಕೊಂಡು ನೈಸರ್ಗಿಕವಾಗಿ ಡೈ ಮಾಡಲಾಗಿದೆ.
Scan Here For An AR Experience
ಬೆಂಗಳೂರು : ಒರಾಯನ್ ಮಾಲ್, ಡಾ|| ರಾಜ್‌ಕುಮಾರ್ ರೋಡ್, ರಾಜಾಜಿ ನಗರ, ಫೋನ್ : 080 22682005
WhatsApp : 93429 54326 | Shop Online : www.rmkv.com | rmkvsilks rmkv_silks

Preethi
LIFELONG# FREE SERVICE
ASIA BOOK OF RECORDS PREETHI ZODIAC
Mega Festive Offer*
Preethi ಕಿಚನ್ ಉಪಕರಣಗಳೊಂದಿಗೆ ಆಚರಿಸಿ ಮತ್ತು
ಭರವಸೆಯ ಉಡುಗೊರೆಗಳನ್ನು ಪಡೆಯಿರಿ
Milton 3pcs ಕ್ಯಾಸರಾಲ್
ಮೌಲ್ಯ ₹1,525
www.shop.preethi.in/ | @PreethiKitchenAppliances | @preethikitchenappliances | One Call Assitance : +91-99400 00005
*T&C apply on all offer details/ Offer period: 1st Oct'24 - 15th Nov'24/ Offer applicable till stocks lasts and on select models only.
#Lifelong free service-Charges apply for replacement of spares/accessories | ^Awarded by Asia Book of Records for Preethi Zodiac on 01Aug2024

TATA MOTORS
Connecting Aspirations
TATA
ಪರಿಚಯಿಸುತ್ತಿದ್ದೇವೆ
CURVV
SUV coupé
Available in Petrol and Diesel
ಬೆಲೆ ಪ್ರಾರಂಭ ₹9.99* ಲಕ್ಷಗಳಿಂದ
EV available in 45 kWh and 55 kWh battery packs
ಬೆಲೆ ಪ್ರಾರಂಭ ₹17.49** ಲಕ್ಷಗಳಿಂದ
Powered Tailgate with Gesture Control - First in Segment
31.24 cm Touchscreen Infotainment by HARMAN™ - Best in Segment
500L° Boot Space - Best in Segment
EPB with Auto Hold
R18 Alloy Wheels with Aero Inserts
ಪರಿಚಯಾತ್ಮಕ ಬೆಲೆ 31ನೇ ಅಕ್ಟೋಬರ್ 2024 ರವರೆಗೆ ಮಾನ್ಯವಾಗಿರುತ್ತದೆ
HYPERION GASOLINE DIRECT INJECTION ENGINE 91.9 kW Power & 225 Nm Torque
KRYOJET 1.5 L DIESEL ENGINE 86.7 kW Power & 260 Nm Torque
DUAL CLUTCH AUTOMATIC TRANSMISSION Available in all 3 engines
Long driving range Urban + Extra Urban : 502 km# C75 Range : 400 – 425 km**
DC fast charging in 40 mins*
Powerful 167 PS motor with 215 Nm of instantaneous torque
ADAS^Δ L2 with 20 Features
Voice Assisted Panoramic Sunroof with Mood Lighting^ - First in Segment
Flush Door Handles - First in Segment
Arcade.ev~ App Suite - First in Segment
All Wheel Disc Brakes
Advanced Comfort Seats with Ventilation
10% – 80% SOC by a 70+ kW DC Charger under ambient test conditions. #As per ARAI certified Urban + Extra Urban (MIDC Part 1+ Part 2). Actual performance figures may vary depending on various conditions including driving pattern etc. Advanced driver assistant systems (ADAS) is not a substitute for human eye or driver vigilance. It is a driver assist system only to enhance safety and driving experience. The driver will remain responsible for safe, vigilant and attentive driving. **All India ex-showroom price. ~Linked to an active iRA.ev subscription. ^For representational purposes only. Mood light on sunroof turns off when the roofline shutter is open. ºVDA method. Accessories/features shown may not be part of the standard fitment. The specification above are subject to change. Some of the equipment illustrated or described above may not be supplied as standard equipment and may be available at extra cost. Tata Motors reserves the right to change specification & equipment of any product without prior notice. Please consult your nearby dealer for full information and availability on colours and trim. The images shown represent color availability for different personas only. Tinted glasses and number plates shown are for creative visualization. Specifications may vary for each persona. The displayed colors may differ from the actual colors due to variations in screen settings, lighting conditions, and material finishes. **Based on driving behaviour of 1.65 lakh + Tata.ev cars, the C75 range reflects the estimated near real-world driving range that 75% of customers can expect to achieve. For the most accurate color representation, please visit your nearest dealer. Terms and conditions apply. *Price Ex-Showroom Delhi. Price is applicable for bookings before 31st October 2024.
KHT MOTORS Whitefield: 7506023988; Domlur: 7506024006, Kolar: 9731149668
KROPEX AUTO Hosur Road: 7506024016, Koramangala: 9167395364, Sarjapur road: 8291202713, Mahadevapura: 8291052641
PRERANA MOTORS Lalbagh Road: 7506024020; BTM Layout: 7506024118; Rajajinagar: 7506024039; Yelahanka: 9619489334
ADISHAKTI CARS Hebbal: 7506023837; Dasarahalli: 9167982568; Kalyana Nagar: 9167163087
BELLAD ENTERPRISES PVT LTD Bommsandra 8238883535, 9035354160; Sarajpura: 8879932503
CAUVERY MOTORS: Avalahalli: 8879156068; Mekhri Circle: 8422849049; Devanahalli: 8879078454
KEY MOTORS JP Nagar Kanakapura Road: 7506023980, Mysore Road: 9167395034, Kanakapura City: 8879145649, BG Road: 9167395164, Nelamangala: 9167881890, Sunkadakatte Magadi Road: 9167882027
SREE AUTO Tumkur: 7506024318, Tiptur: 9619050469, Chitradurga: 9619033465, Kunigal: 8879046819, Chikkaballapur: 9167082428, Chintamani: 8291927028

ಸಮ್ಮೇಳನಾಧ್ಯಕ್ಷತೆ: ‘ರಾಜಕೀಯ’ ಗುಂಗು

ಒಂದನೇ ಪುಟದಿಂದ

ಪರಿಷತ್ತಿನ ಬೈ-ಲಾದಲ್ಲಿ ಸಮ್ಮೇಳನಾಧ್ಯಕ್ಷತೆಗೆ ಸಂಬಂಧಿಸಿದಂತೆ ‘ಸಾಹಿತಿ’ಗಳನ್ನೇ ಆಯ್ಕೆ ಮಾಡಬೇಕೆಂಬ ನಿರ್ದಿಷ್ಟ ಮಾನದಂಡ ಇಲ್ಲದಿರುವುದರಿಂದ, ಶಿಫಾರಸು ಮಾಡಲ್ಪಟ್ಟ ವಿವಿಧ ಕ್ಷೇತ್ರಗಳ ಸಾಧಕರ ಹೆಸರನ್ನು ಪುರಸ್ಕರಿಸಿದೆ. ಕಾರ್ಯಕಾರಿ ಸಮಿತಿ ಸಭೆಯಲ್ಲಿ ವಿವಿಧ ಕ್ಷೇತ್ರಗಳ ಸಾಧಕರ ಹೆಸರನ್ನು ಪ್ರಸ್ತಾಪಿಸಿ, ಆಯ್ಕೆ ಮಾಡಲು ಪರಿಷತ್ತು ನಿರ್ಧರಿಸಿದೆ. ಪರಿಷತ್ತಿನ ಈ ನಡೆಗೆ ಸಾಹಿತ್ಯ ವಲಯದಲ್ಲಿ ಅಸಮಾಧಾನ ವ್ಯಕ್ತವಾಗಿದ್ದು, ಸಾಹಿತಿಗಳನ್ನೇ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡುವ ಮೂಲಕ ಪರಂಪರೆಯನ್ನು ಮುನ್ನಡೆಸಿಕೊಂಡು ಹೋಗಬೇಕೆಂಬ ಆಗ್ರಹ ವ್ಯಕ್ತವಾಗಿದೆ.

‘ಸಾಹಿತ್ಯ ಪರಿಷತ್ತಿಗೆ ದೊಡ್ಡ ಪರಂಪರೆಯಿದೆ. ಕನ್ನಡ ನಾಡು-ನುಡಿಗೆ ಅವಿರತ ಸೇವೆ ಸಲ್ಲಿಸಿದವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಿದರೆ ತಪ್ಪಿಲ್ಲ. ಆದರೆ, ರಾಜಕಾರಣಿಗಳು, ಮಠಾಧೀಶರು ಸೇರಿ ಸಾಹಿತ್ಯಿಕ ಕೊಡುಗೆ ನೀಡದ ಸಾಹಿತ್ಯೇತರರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಿದರೆ ಅದು ಸಮ್ಮೇಳನದ ಮೂಲ ಆಶಯಕ್ಕೆ ಧಕ್ಕೆ ಬರುವ ಸಾಧ್ಯತೆಯಿದೆ. ಸಮ್ಮೇಳನವು ರಾಜಕೀಯ ಸಮಾವೇಶ, ಧಾರ್ಮಿಕ ಸಮಾವೇಶದ ಸ್ವರೂಪ ತಾಳುವ ಅಪಾಯವಿದೆ’ ಎಂದು ಸಾಹಿತಿಯೊಬ್ಬರು ಬೇಸರ ವ್ಯಕ್ತಪಡಿಸಿದರು.

ಇನ್ನೊಂದೆಡೆ ಕನ್ನಡ ಪರ ಹೋರಾಟಗಾರರು, ಮಠಾಧೀಶರು ಸೇರಿ ವಿವಿಧ ಕ್ಷೇತ್ರದವರು ‘ಕನ್ನಡ ನಾಡಿಗೆ ಸಾಹಿತ್ಯೇತರ ಕೊಡುಗೆ ನೀಡಿದವರನ್ನೂ ಸಮ್ಮೇಳನಾಧ್ಯಕ್ಷತೆಗೆ ಪರಿಗಣಿಸಬೇಕು’ ಎಂದು ಪರಿಷತ್ತಿಗೆ ಒತ್ತಾಯಿಸಿದ್ದಾರೆ. ‘ಪರಿಷತ್ತು ಸಾಹಿತಿಗಳದ್ದಷ್ಟೇ ಅಲ್ಲ, ಕನ್ನಡಿಗರ ಪರಿಷತ್ತು ಎಂಬುದನ್ನು ಗಮನದಲ್ಲಿಟ್ಟುಕೊಂಡು ಆಯ್ಕೆ ಮಾಡಬೇಕು’ ಎಂಬ ಆಗ್ರಹ ಅವರಿಂದ ವ್ಯಕ್ತವಾಗಿದೆ. ಈ ಮಧ್ಯೆ ಸಮ್ಮೇಳನಾಧ್ಯಕ್ಷತೆಗೆ ಲಾಬಿ ಹೆಚ್ಚಿದ್ದು, ಸಮ್ಮೇಳನಾಧ್ಯಕ್ಷರ ಆಯ್ಕೆ ಪರಿಷತ್ತಿಗೆ ಕಗ್ಗಂಟಾಗಿ ಪರಿಣಮಿಸಿದೆ.

‘ಸಮ್ಮೇಳನಾಧ್ಯಕ್ಷರ ಆಯ್ಕೆಗೆ ಸಂಬಂಧಿಸಿದಂತೆ ಸಾಹಿತ್ಯ ಪರಿಷತ್ತಿಗೆ ಅನೇಕರು ಭೇಟಿ ನೀಡಿ, ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮಠಾಧೀಶರು, ಕಲಾವಿದರು, ಕನ್ನಡ ಪರ ಹೋರಾಟಗಾರರು ಸೇರಿ ಬೇರೆ ಬೇರೆ ಕ್ಷೇತ್ರದವರು ಸಾಹಿತ್ಯೇತರರನ್ನು ಸಮ್ಮೇಳನಾಧ್ಯಕ್ಷತೆಗೆ ಪರಿಗಣಿಸಬೇಕೆಂದು ಮನವಿ ಮಾಡಿದ್ದಾರೆ. ಆದ್ದರಿಂದ ಸಾರ್ವಜನಿಕರ ಮುಂದೆ ಈ ವಿಚಾರವನ್ನು ಚರ್ಚೆಗೆ ಇಡಲಾಗಿದೆ. ಪ್ರಜಾಪ್ರಭುತ್ವದಲ್ಲಿ ಚರ್ಚೆ ನಡೆಯಬೇಕು. ಅಂತಿಮವಾಗಿ ಕಾರ್ಯಕಾರಿ ಸಮಿತಿಯಲ್ಲಿ ಯಾರನ್ನು ಆಯ್ಕೆ ಮಾಡಬೇಕೆಂದು ನಿರ್ಧರಿಸಲಾಗುತ್ತದೆ’ ಎನ್ನುತ್ತಾರೆ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ.

ಧಾರವಾಡದಲ್ಲಿ ನಡೆದ 84ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಧ್ಯಕ್ಷರ ಮೆರವಣಿಗೆ ಪ್ರಜಾವಾಣಿ ಸಂಗ್ರಹ

ಪ್ರಾರಂಭಿಕ ವರ್ಷಗಳಲ್ಲಿ ಸರ್ಕಾರದಲ್ಲಿ ಅತ್ಯುನ್ನತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ, ನಿವೃತ್ತರಾದವರು, ಪ್ರಾಧ್ಯಾಪಕರು, ಎಂಜಿನಿಯರ್‌ಗಳು ಸೇರಿ ವಿವಿಧ ಪ್ರಮುಖ ವೃತ್ತಿಯಲ್ಲಿದ್ದವರು ಸಮ್ಮೇಳನಾಧ್ಯಕ್ಷರಾಗಿದ್ದರು. ಸಾಹಿತ್ಯಿಕ ಕೊಡುಗೆಗಳ ಜತೆಗೆ ನಾಡಿನ ಶ್ರೇಯೋಭಿವೃದ್ಧಿಗೆ ನೀಡಿದ ಕೊಡುಗೆಗಳೇ ಆಗ ಪ್ರಮುಖವಾಗಿತ್ತು.

3 ಸಾಹಿತ್ಯ ಸಮ್ಮೇಳನಾಧ್ಯಕ್ಷತೆ- 1915ರಿಂದ 1917ರ ಅವಧಿಯಲ್ಲಿ ನಡೆದ ಮೂರು ಸಾಹಿತ್ಯ ಸಮ್ಮೇಳನಾಧ್ಯಕ್ಷತೆಯನ್ನು ಎಚ್.ವಿ. ನಂಜುಂಡಯ್ಯ ಅವರೇ ವಹಿಸಿದ್ದರು. ಮೈಸೂರು ವಿಶ್ವವಿದ್ಯಾಲಯದ ಪ್ರಥಮ ಕುಲಪತಿಯಾಗಿಯೂ ಅವರು ಕಾರ್ಯನಿರ್ವಹಿಸಿದ್ದರು. ಮೈಸೂರು ಸರ್ಕಾರದಲ್ಲಿ ಗುಮಾಸ್ತರಾಗಿ ವೃತ್ತಿಯಾರಂಭಿಸಿದ್ದ ಅವರು, ಕಂದಾಯ ಇಲಾಖೆಯಲ್ಲಿ ಸಹಾಯಕ ಆಯುಕ್ತ ಸೇರಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ, ಮುಖ್ಯ ನ್ಯಾಯಾಧೀಶರಾಗಿ ನಿವೃತ್ತರಾಗಿದ್ದರು. ಇವರನ್ನು ಹೊರತುಪಡಿಸಿದರೆ ಬೇರಾರೂ ಒಂದಕ್ಕಿಂತ ಹೆಚ್ಚು ಬಾರಿ ಸಮ್ಮೇಳನಾಧ್ಯಕ್ಷರಾಗಿಲ್ಲ. ಪರಿಷತ್ತಿಗೆ ಸ್ವಂತ ಕಟ್ಟಡವನ್ನು ದೊರಕಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಕರ್ಪೂರ ಶ್ರೀನಿವಾಸರಾಯರು ವೃತ್ತಿಯಲ್ಲಿ ಎಂಜಿನಿಯರ್ ಆಗಿದ್ದರು. ಇವರು ಹಾಸನದಲ್ಲಿ ನಡೆದ ಐದನೇ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

6ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷತೆ ವಹಿಸಿದ್ದ ರೊದ್ದ ಶ್ರೀನಿವಾಸರಾಯರು ಧಾರವಾಡದ ಟ್ರೈನಿಂಗ್ ಕಾಲೇಜಿನ ಪ್ರಾಂಶುಪಾಲರಾಗಿ ನಿವೃತ್ತರಾಗಿದ್ದರು. ನಂತರದ ಸಮ್ಮೇಳಾನಧ್ಯಕ್ಷತೆ ವಹಿಸಿದ್ದ ಕೆ.ಪಿ. ಪುಟ್ಟಣ್ಣ ಚೆಟ್ಟಿ ಅವರು ಮೈಸೂರು ಸರ್ಕಾರದಲ್ಲಿ ಉದ್ಯೋಗಿಯಾಗಿದ್ದರು. ಹೊಸಕೋಟೆ ಕೃಷ್ಣಶಾಸ್ತ್ರಿ ಅವರು ಕೇಂದ್ರ ಸರ್ಕಾರದ ಶಾಸನ ಇಲಾಖೆಯಲ್ಲಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದರು. ಶಾಸನಕ್ಕೆ ಸಂಬಂಧಿಸಿದಂತೆ ಲೇಖನ, ಪ್ರಬಂಧಗಳನ್ನು ಅವರು ರಚಿಸಿದ್ದರು. ಶಾಸನ ಪ್ರಕಾರಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ, ಕೋಲಾರದಲ್ಲಿ ನಡೆದ 10ನೇ ಸಮ್ಮೇಳನದ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆ ಮಾಡಲಾಗಿತ್ತು. ಮೊದಲ 14 ಸಾಹಿತ್ಯ ಸಮ್ಮೇಳನಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಕೊಡುಗೆ ನೀಡಿದವರಿಗೆ ಪ್ರಾತಿನಿಧ್ಯ ನೀಡಿದರೂ, ನಂತರದ ಸಮ್ಮೇಳನಗಳಲ್ಲಿ ಸಾಹಿತ್ಯಿಕ ಕೊಡುಗೆಯೇ ಪ್ರಥಮ ಆದ್ಯತೆಯಾಗಿತ್ತು.

‘ಸಾಹಿತ್ಯ ಪರಿಷತ್ತಿನ ಪರಂಪರೆಯೂ ಸಾಹಿತ್ಯೇತರರನ್ನು ಆಯ್ಕೆ ಮಾಡುವ ಕ್ರಮ ಒಪ್ಪುವುದಿಲ್ಲ. ಸಾಹಿತ್ಯೇತರರನ್ನು ಆಯ್ಕೆ ಮಾಡುವುದು ಸೂಕ್ತವೂ ಅಲ್ಲ. ನಮ್ಮ ಕಾರ್ಯಕಾರಿ ಸಮಿತಿ ಅವಧಿಯಲ್ಲಿಯೂ ಸಾಹಿತ್ಯೇತರರನ್ನು ಪರಿಗಣಿಸಬೇಕೆಂಬ ಮನವಿಗಳು ಬಂದಿದ್ದವು. ಆದರೆ, ಅದಕ್ಕೆ ಮಣೆ ಹಾಕಿರಲಿಲ್ಲ. ನಮ್ಮಲ್ಲಿ ಸಾಕಷ್ಟು ಸಾಹಿತಿಗಳಿದ್ದಾರೆ’ ಎಂದು ಕಸಾಪ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಹೇಳಿದರು.

ಸರ್ಕಾರಕ್ಕೆ ಸಡ್ಡು: ಶಿವಮೊಗ್ಗದಲ್ಲಿ ನಡೆದ 73ನೇ ಸಾಹಿತ್ಯ ಸಮ್ಮೇಳನವು ಸರ್ಕಾರ ಮತ್ತು ಪರಿಷತ್ತಿನ ನಡುವೆ ಸಂಘರ್ಷಕ್ಕೆ ಕಾರಣವಾಗಿತ್ತು. ಈ ಸಮ್ಮೇಳನದ ಸಮ್ಮೇಳನಾಧ್ಯಕ್ಷತೆಯನ್ನು ಕವಿ ಕೆ.ಎಸ್. ನಿಸಾರ್ ಅಹಮದ್ ವಹಿಸಿದ್ದರೆ, ಆಗ ಚಂದ್ರಶೇಖರ ಪಾಟೀಲ (ಚಂಪಾ) ಕಸಪಾ ಅಧ್ಯಕ್ಷರಾಗಿದ್ದರು. ಆ ವೇಳೆ ಮುಖ್ಯಮಂತ್ರಿಯಾದ್ದ ಎಚ್.ಡಿ. ಕುಮಾರಸ್ವಾಮಿ ಅವರನ್ನು ಸಾಹಿತ್ಯ ಸಮ್ಮೇಳನದ ಉದ್ಘಾಟನೆಗೆ ಆಹ್ವಾನಿಸದೆ, ತಮ್ಮ ಖಡಕ್ ನಿಲುವನ್ನು ಚಂಪಾ ಪ್ರದರ್ಶಿಸಿದ್ದರು. ‘ಸಮಾರೋಪಕ್ಕೆ ಅವರು ಬಂದು ನಮ್ಮ ಬೇಡಿಕೆಗೆ ಸ್ಪಂದಿಸಲಿ’ ಎಂಬುದು ಅವರ ನಿಲುವಾಗಿತ್ತು. ಆಗ ಉಪ ಮುಖ್ಯಮಂತ್ರಿ ಮತ್ತು ಹಣಕಾಸು ಸಚಿವರಾಗಿದ್ದವರು ಬಿ.ಎಸ್. ಯಡಿಯೂರಪ್ಪ. ಗೋಷ್ಠಿಯೊಂದಕ್ಕೆ ಎಡಪಂಥೀಯ ವಿಚಾರಧಾರೆಯ ಲೇಖಕರಾದ ಕಲ್ಕುಳಿ ವಿಠ್ಠಲ ಹೆಗಡೆ ಮತ್ತು ಪತ್ರಕರ್ತೆ ಗೌರಿ ಲಂಕೇಶ್ ಅವರನ್ನು ಆಹ್ವಾನಿಸಿದ್ದನ್ನು ಬಲಪಂಥೀಯ ಸಂಘಟನೆಗಳು ವಿರೋಧಿಸಿದ್ದವು. ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ಯಡಿಯೂರಪ್ಪ, ಆಗ ಸಚಿವರಾಗಿದ್ದ ಡಿ.ಎಚ್. ಶಂಕರಮೂರ್ತಿಯವರು, ಗೌರಿ ಮತ್ತು ಹೆಗಡೆಯವರನ್ನು ಕರೆದರೆ ತಾವು ಸಮ್ಮೇಳನದಿಂದ ದೂರ ಉಳಿಯುವುದಾಗಿ ಎಚ್ಚರಿಸಿದ್ದರು. ಆದರೆ, ಪರಿಷತ್ತಿನ ಅಧ್ಯಕ್ಷ ಚಂಪಾ ಅವರು ಅದಕ್ಕೆ ಸೊಪ್ಪು ಹಾಕದೇ, ನೀವು ಬರದೇ ಇದ್ದರೂ ಪರವಾಗಿಲ್ಲ ಎಂದು ಕುಟುಕಿದ್ದರು. ಸಾಹಿತ್ಯಕ್ಕೂ-ಪ್ರಭುತ್ವಕ್ಕೂ ಅಂತರ ಇರಬೇಕೆಂಬ ಒಲವಿದ್ದ ಚಂಪಾರವರು ಈ ವಿಷಯದಲ್ಲಿ ನಿಷ್ಠುರವಾಗಿಯೇ ನಡೆದುಕೊಂಡಿದ್ದರು.

ಸ್ವಾಯತ್ತ ಸಂಸ್ಥೆಯಾದ ಪರಿಷತ್ತಿನ ಅಧ್ಯಕ್ಷರು ಆಡಳಿತಾರೂಢ ಸರ್ಕಾರಗಳು ನಾಡು-ನುಡಿಯ ಹಿತಕ್ಕೆ ಮಾರಕವಾದ ನಿರ್ಣಯಗಳಗಳನ್ನು ಕೈಗೊಂಡಾಗಲೆಲ್ಲ ಖಂಡಿಸುತ್ತಲೇ ಬಂದಿದ್ದಾರೆ. ಅದೇ ರೀತಿ, ಸಮ್ಮೇಳನಾಧ್ಯಕ್ಷರಾದವರು ತಮ್ಮ ಭಾಷಣಗಳಲ್ಲಿ ಕನ್ನಡಿಗರಿಗೆ ಉದ್ಯೋಗ, ಕನ್ನಡ ಮಾಧ್ಯಮ ಶಿಕ್ಷಣದ ಬಗ್ಗೆ ಮಾತ್ರ ಪ್ರಸ್ತಾಪಿಸಿಲ್ಲ. ಚುನಾಯಿತ ಪ್ರತಿನಿಧಿಗಳ ಭ್ರಷ್ಟಾಚಾರ, ಗಣಿಗಾರಿಕೆ ಸೇರಿದಂತೆ ನಾಡಿಗೆ ಆತಂಕ ತಂದೊಡ್ಡಿರುವ ಸಂಗತಿಗಳ ಬಗ್ಗೆಯೂ ತಮ್ಮ ಭಾಷಣದಲ್ಲಿ ಚಾಟಿ ಬೀಸಿದ್ದೂ ಉಂಟು. ಕನ್ನಡ ನಾಡಿನ ಸೌಹಾರ್ದ ಪರಂಪರೆಯನ್ನು ಕೆಡಿಸುವ ಶಕ್ತಿಗಳ ವಿರುದ್ಧವೂ ಕಾಲಕಾಲಕ್ಕೆ ಧ್ವನಿ ಎತ್ತಿದ್ದಾರೆ. ಆಳುವ ಸರ್ಕಾರಗಳ ಕಿವಿಯನ್ನು ಹಿಂಡಲು ಅಂಜಿಕೆ ತೋರಿದ್ದಿಲ್ಲ. ಸಾಹಿತ್ಯ ಜನಮಾನಸದ ಧ್ವನಿಯಾಗಿದ್ದು, ಪ್ರಭುತ್ವದ ಕೇಡುಗಳನ್ನು ವಿಮರ್ಶಿಸಿ ಜನರಿಗೆ ಒಳಿತು ಮಾಡಬೇಕೆಂಬ ಹಂಬಲ ಸಾಹಿತ್ಯ ಸೃಷ್ಟಿಯಾಗಲಾರಂಭಿಸಿದ ದಿನದಿಂದಲೂ ಇದೆ. ಅದೇ ಪರಂಪರೆಯನ್ನು ಪರಿಷತ್ತು ಮುಂದುವರಿಸಿಕೊಂಡು ಬಂದಿದೆ. ಸಾಹಿತ್ಯೇತರ ಕ್ಷೇತ್ರದವರು ಬಂದರೆ, ಇದು ರಾಜಕಾರಣಿಗಳ, ಮಠಾಧೀಶರ ಹೊಗಳಿಕೆಗೆ ವೇದಿಕೆಯಾಗುತ್ತದೆ ವಿನಃ ಜನರ ಧ್ವನಿಯಾಗದು ಎಂಬ ಚರ್ಚೆಯೂ ಸಾಹಿತ್ಯವಲಯದಲ್ಲಿ ನಡೆದಿದೆ.

‘ವಿಜ್ಞಾನ ಕ್ಷೇತ್ರದಲ್ಲಿ ವಿಜ್ಞಾನ ಸಮ್ಮೇಳನಗಳು ನಡೆಯುತ್ತವೆ. ಎಂಜಿನಿಯರಿಂಗ್, ವೈದ್ಯಕೀಯ ಸೇರಿ ವಿವಿಧ ಕ್ಷೇತ್ರಗಳಿಗೆ ಅವರದೇ ಆದ ವೇದಿಕೆಗಳಿವೆ. ಸಾಹಿತಿಗಳಾದರೆ ಸಮ್ಮೇಳನದ ಆಶಯ ಸಾಕಾರವಾಗಲಿದೆ. ಘನತೆಯೂ ಹೆಚ್ಚಲಿದೆ. ಸಾಹಿತ್ಯದ ಪರಿಚಯ ಇಲ್ಲದವರು ಸಮ್ಮೇಳನಾಧ್ಯಕ್ಷರಾದರೆ ಗೋಷ್ಠಿಗಳೂ ಗಾಂಭೀರ್ಯತೆ ಕಳೆದುಕೊಳ್ಳಲಿದೆ’ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷ ಬಿ.ವಿ.ವಸಂತಕುಮಾರ್ ಕಳವಳ ವ್ಯಕ್ತಪಡಿಸಿದರು.

ಸಮ್ಮೇಳನದ ಹಿರಿಮೆ ಹೆಚ್ಚಳ: ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು, ಸಾಹಿತ್ಯ ಕ್ಷೇತ್ರಕ್ಕೆ ಅಚ್ಚಳಿಯದ ಕೊಡುಗೆ ನೀಡಿದವರು ಈವರೆಗೆ ಸಾಹಿತ್ಯ ಸಮ್ಮೇಳನಾಧ್ಯಕ್ಷತೆ ವಹಿಸಿದ್ದರೆ. ಪ್ರಮುಖವಾಗಿ ಬಿ.ಎಂ. ಶ್ರೀಕಂಠಯ್ಯ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಆಲೂರು ವೆಂಕಟರಾಯ, ಡಿ.ವಿ. ಗುಂಡಪ್ಪ, ಪಂಜೆ ಮಂಗೇಶರಾಯ, ದ.ರಾ. ಬೇಂದ್ರೆ, ಟಿ.ಪಿ. ಕೈಲಾಸಂ, ತಿ.ತಾ. ಶರ್ಮ, ಗೋವಿಂದ ಪೈ, ಶಿವರಾಮ ಕಾರಂತ, ಕುವೆಂಪು, ವಿ.ಕೃ. ಗೋಕಾಕ್, ಅ.ನ. ಕೃಷ್ಣರಾಯ, ಜಯದೇವಿತಾಯಿ ಲಿಗಾಡೆ, ಜಿ.ಪಿ. ರಾಜರತ್ನಂ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಕೆ.ಎಸ್. ನರಸಿಂಹಸ್ವಾಮಿ, ಜಿ.ಎಸ್. ಶಿವರುದ್ರಪ್ಪ, ಚೆನ್ನವೀರ ಕಣವಿ, ಎಸ್.ಎಲ್. ಭೈರಪ್ಪ, ಯು.ಆರ್. ಅನಂತಮೂರ್ತಿ, ಕಮಲಾ ಹಂಪನಾ, ನಿಸಾರ್ ಅಹಮದ್, ಗೀತಾ ನಾಗಭೂಷಣ, ಸಿದ್ದಲಿಂಗಯ್ಯ, ಬರಗೂರು ರಾಮಚಂದ್ರಪ್ಪ, ಚಂಪಾ, ಚಂದ್ರಶೇಖರ ಕಂಬಾರ, ಎಚ್.ಎಸ್. ವೆಂಕಟೇಶಮೂರ್ತಿ, ದೊಡ್ಡರಂಗೇಗೌಡ ಒಳಗೊಂಡಂತೆ ಸಾಹಿತ್ಯ ಕ್ಷೇತ್ರದ ಖ್ಯಾತ ನಾಮರು ಸಮ್ಮೇಳನಾಧ್ಯಕ್ಷರಾಗಿದ್ದರು.

ಈಗ ಸಾಹಿತ್ಯೇತರರು ಈ ಸ್ಥಾನವನ್ನು ಅಲಂಕರಿಸಿದರೆ ಪರಂಪರೆಗೆ ಧಕ್ಕೆ ಬರುವ ಜತೆಗೆ ಸಾಹಿತ್ಯ ಸಮ್ಮೇಳನ ಪ್ರಾಮುಖ್ಯತೆ ಕಳೆದುಕೊಂಡು, ರಾಜಕೀಯ, ಧಾರ್ಮಿಕ ಸೇರಿ ವಿವಿಧ ಸಮಾವೇಶಗಳ ಸ್ವರೂಪ ತಾಳುವ ಕಳವಳ ಸಾಹಿತ್ಯ ವಲಯದಲ್ಲಿದೆ. ಪರಿಷತ್ತಿನ ಕಾರ್ಯಕಾರಿ ಸಮಿತಿಯು ಸಮ್ಮೇಳನದ ಪರಂಪರೆಯನ್ನು ಮುಂದುವರೆಸುತ್ತದೆಯೋ ಅಥವಾ ಹೊಸ ಪದ್ಧತಿಗೆ ನಾಂದಿ ಹಾಡಲಿದೆಯೇ ಎನ್ನುವ ಪ್ರಶ್ನೆಗಳಿಗೆ ಸದ್ಯವೇ ನಡೆಯಲಿರುವ ಸಮ್ಮೇಳನಾಧ್ಯಕ್ಷರ ಆಯ್ಕೆಯೇ ಉತ್ತರ ಒದಗಿಸಲಿದೆ.

‘ಪ್ರಜಾಪ್ರಭುತ್ವದಲ್ಲಿ ಚರ್ಚೆ ಸ್ವಾಗತಾರ್ಹ’

ದೇ.ಜವರೇಗೌಡ, ಆರ್.ಸಿ. ಹಿರೇಮಠ ಸೇರಿ ಮೊದಲಾದವರ ಆಯ್ಕೆಗೆ ಸಂಬಂಧಿಸಿದಂತೆಯೂ ಹಿಂದೆ ವಿವಾದಗಳಾಗಿದ್ದವು. ಸಮ್ಮೇಳನಾಧ್ಯಕ್ಷತೆಯ ವಿವಾದ ಹೊಸದಲ್ಲ. ಬೇರೆ ಬೇರೆ ಕ್ಷೇತ್ರದವರು ತಮ್ಮ ಕ್ಷೇತ್ರವನ್ನೂ ಸಮ್ಮೇಳನಾಧ್ಯಕ್ಷತೆಗೆ ಪರಿಗಣಿಸಿ ಎಂದು ಮನವಿ ಮಾಡಿದ್ದಾರೆ. ಲಿಖಿತವಾಗಿಯೂ ಕೆಲವರ ಹೆಸರನ್ನು ಶಿಫಾರಸು ಮಾಡಿದ್ದಾರೆ. ಸಾಹಿತ್ಯ ಪರಿಷತ್ತು ಪ್ರಜಾಪ್ರಭುತ್ವದಡಿ ಕಾರ್ಯನಿರ್ವಹಿಸುತ್ತಿದೆ. ಆದ್ದರಿಂದ ಚರ್ಚೆಗೆ ಅವಕಾಶ ನೀಡಲಾಗಿದೆ. ಸಾರ್ವಜನಿಕ ಅಭಿಪ್ರಾಯ ಆಧರಿಸಿ ಮುಂದಿನ ನಿರ್ಧಾರ ಕೈಗೊಳ್ಳಲಾಗುತ್ತದೆ. ‘ಕನ್ನಡಕ್ಕಾಗಿ ಪೊಲೀಸರಿಂದ ಒದೆ ತಿಂದಿದ್ದು, ನಮ್ಮದು ಕನ್ನಡ ಸೇವೆಯಲ್ಲವೇ’ ಎಂದು ಕನ್ನಡ ಪರ ಹೋರಾಟಗಾರರು ಪ್ರಶ್ನಿಸಿದ್ದಾರೆ. ಸಮ್ಮೇಳನಾಧ್ಯಕ್ಷತೆಯ ಬಗ್ಗೆ ಕಾರ್ಯಕಾರಿ ಸಮಿತಿಯಲ್ಲಿ ಅಂತಿಮ ನಿರ್ಧಾರ ಕೈಗೊಳ್ಳಲಾಗುತ್ತದೆ. ಸ್ವಾಯತ್ತತೆ ಉಳಿಸಿಕೊಂಡು ಮುನ್ನಡೆಯುತ್ತೇವೆ.

ಮಹೇಶ ಜೋಶಿ, ಕಸಾಪ ಅಧ್ಯಕ್ಷ

‘ಸಾಹಿತಿಗಳಿಗೆ ಮೀಸಲು ಉತ್ತಮ’

ಸಾಹಿತ್ಯ ಪರಿಷತ್ತಿನ ಆಶಯಕ್ಕೆ ಅನುಗುಣವಾಗಿ ಸಮ್ಮೇಳನಾಧ್ಯಕ್ಷರನ್ನು ಆಯ್ಕೆ ಮಾಡಬೇಕು. ನಾಡಿನಲ್ಲಿ ಹಲವಾರು ಸಾಹಿತಿಗಳಿದ್ದು, ಅವರನ್ನೇ ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಬೇಕು. ಸಾಹಿತಿಗಳು ನಾಡಿನ ಸಾಕ್ಷಿ ಪ್ರಜ್ಞೆ. ಅವರೆ ಸಮ್ಮೇಳನಾಧ್ಯಕ್ಷತೆ ವಹಿಸುವುದು ಉತ್ತಮ. ವಿವಿಧ ಕ್ಷೇತ್ರಗಳ ಸಾಧಕರಿಗೆ ಬೇರೆ ವೇದಿಕೆಗಳಲ್ಲಿ ಅವಕಾಶಗಳಿವೆ. ಸಾಹಿತ್ಯೇತರರನ್ನು ಆಯ್ಕೆ ಮಾಡಿದರೆ ಹಣ ಉಳ್ಳವರು, ಅಧಿಕಾರದ ಬಲ ಹೊಂದಿರುವವರು ಈ ಸ್ಥಾನ ಏರುವ ಅಪಾಯವಿದೆ.

ಬಿ.ವಿ.ವಸಂತಕುಮಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷ

‘ಸಾಕಷ್ಟು ಅರ್ಹ ಸಾಹಿತಿಗಳಿದ್ದಾರೆ’



ಸಾಹಿತ್ಯ ಸಮ್ಮೇಳನಾಧ್ಯಕ್ಷತೆಯನ್ನು ಸಾಹಿತಿಗಳಿಗೆ ಮೀಸಲಿಡಬೇಕು. ಸಾಹಿತಿಗಳು ಸಿಗದಿದ್ದಾಗ ಸಾಹಿತ್ಯೇತರರನ್ನು ಪರಿಗಣಿಸಬಹುದು. ಸಮ್ಮೇಳನಾಧ್ಯಕ್ಷತೆ ವಹಿಸಿಕೊಳ್ಳಲು ನಮ್ಮಲ್ಲಿ ಸಾಕಷ್ಟು ಅರ್ಹ ಸಾಹಿತಿಗಳು ಇದ್ದಾರೆ. ಸಾಹಿತ್ಯೇತರರನ್ನು ಆಯ್ಕೆಗೆ ಪರಿಗಣಿಸುವುದು ಸರಿಯಲ್ಲ. ಸಾಹಿತ್ಯ ಕೃತಿಗಳನ್ನು ರಚಿಸಿ, ಬೇರೆ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರನ್ನು ಆಯ್ಕೆ ಮಾಡಿದರೆ ಅಭ್ಯಂತರವಿಲ್ಲ. ವಿಜ್ಞಾನಿಗಳು, ರಾಜಕಾರಣಿಗಳು, ಕ್ರೀಡಾಪಟುಗಳು, ರೈತರು ಸೇರಿ ವಿವಿಧ ವೃತ್ತಿಯಲ್ಲಿರುವವರನ್ನು ಗುರುತಿಸಿ, ಗೌರವಿಸಲು ಹಲವು ವೇದಿಕೆಗಳಿವೆ.

ಮನು ಬಳಿಗಾರ್, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ

‘ಹೊಸ ಪರಂಪರೆಗೆ ನಾಂದಿ ಹಾಡಲಿ’



ಕನ್ನಡ ಸಾಹಿತ್ಯ ಸಮ್ಮೇಳನವಾದ್ದರಿಂದ ನಾಡು–ನುಡಿಗೆ ಕೊಡುಗೆ ನೀಡಿದ ವಿವಿಧ ಕ್ಷೇತ್ರದವರು ಸಮ್ಮೇಳನಾಧ್ಯಕ್ಷರಾಗುವುದರಲ್ಲಿ ತಪ್ಪಿಲ್ಲ. ಪ್ರಾರಂಭಿಕ ವರ್ಷಗಳಲ್ಲಿ ಬೇರೆ ಬೇರೆ ಕ್ಷೇತ್ರದವರು ಆಯ್ಕೆಯಾಗಿದ್ದರು. ಆದ್ದರಿಂದ ಎಲ್ಲ ಕ್ಷೇತ್ರದವರನ್ನು ಒಳಗೊಂಡು, ಸಾಹಿತ್ಯೇತರ ಕ್ಷೇತ್ರದವರನ್ನೂ ಸಮ್ಮೇಳನಾಧ್ಯಕ್ಷತೆಗೆ ಪರಿಗಣಿಸಲಿ. ಹೊಸ ಪರಂಪರೆಗೆ ನಾಂದಿ ಹಾಡಲಿ. ಕುಬ್ಜವಾಗಿ ನೋಡುವ ದಿನಗಳು ಹೊರಟು ಹೋಗಿವೆ. ನಾವು ವಿಶಾಲವಾಗಿ ನೋಡಬೇಕು. ನಾಡು–ನುಡಿಗೆ ಶ್ರಮಿಸಿದವರನ್ನು ಆಯ್ಕೆ ಮಾಡುವುದಕ್ಕೆ ಆಕ್ಷೇಪವಿಲ್ಲ. ವಿಜ್ಞಾನ ಸೇರಿ ವಿವಿಧ ಕ್ಷೇತ್ರಗಳಲ್ಲಿ ಕೊಡುಗೆ ನೀಡಿದ ಕನ್ನಡಿಗರನ್ನು ಪರಿಗಣಿಸಲಿ. ಸಾಹಿತಿಯೇ ಸಮ್ಮೇಳನಾಧ್ಯಕ್ಷತೆ ವಹಿಸಬೇಕೆಂಬ ವರ್ಗೀಕರಣ ತಪ್ಪು.

ದೊಡ್ಡರಂಗೇಗೌಡ, ಸಾಹಿತಿ

‘ಕಲ್ಮಶಗಳು ಬಂದು ಸೇರುವ ಸಾಧ್ಯತೆ’

ಕನ್ನಡ ಜಗತ್ತಿಗೆ ಅಸಾಧಾರಣ ಸೇವೆ ಸಲ್ಲಿಸಿದವರು ಸಮ್ಮೇಳನಾಧ್ಯಕ್ಷತೆ ವಹಿಸುವುದಕ್ಕೆ ಆಕ್ಷೇಪವಿಲ್ಲ. ಆದರೆ, ರಾಜಕಾರಣಿಗಳು, ಮಠಾಧೀಶರು ಯಾವುದೇ ಕಾರಣಕ್ಕೂ ಸಮ್ಮೇಳನಾಧ್ಯಕ್ಷರಾಗಬಾರದು. ಇಷ್ಟು ವರ್ಷಗಳಲ್ಲಿ ಕೇವಲ ನಾಲ್ವರು ಮಹಿಳೆಯರು ಸಮ್ಮೇಳನಾಧ್ಯಕ್ಷರಾಗಿದ್ದಾರೆ. ತೋರಿಕೆಯ ಸಾಮಾಜಿಕ ನ್ಯಾಯದ, ಒಳ ಹುನ್ನಾರದ ಆಯ್ಕೆಗಳಾಗುತ್ತಿವೆ. ಸಾಹಿತ್ಯ ಸಮ್ಮೇಳನಾಧ್ಯಕ್ಷತೆ ತೆರೆದ ಬಾಗಿಲಾದರೆ ಕಲ್ಮಶಗಳು ಬಂದು ಸೇರುವ ಸಾಧ್ಯತೆಗಳಿವೆ. ಈಗಿನ ಪರಿಸ್ಥಿತಿಯಲ್ಲಿ ಸಾಹಿತ್ಯೇತರರು ಎಂದರೇ ಆತಂಕ ಪಡುವ ಸ್ಥಿತಿ ನಿರ್ಮಾಣವಾಗಿದೆ. ಸಾಹಿತಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದು, ಹಿಂದಿನ ಬೆಂಚಿನಲ್ಲಿ ಕುಳಿತಿದ್ದಾರೆ. ಶುದ್ಧ ಸಾಹಿತ್ಯ ಸಮ್ಮೇಳನಕ್ಕೆ ರಾಜಕಾರಣಿಗಳ ಅಗತ್ಯವಿಲ್ಲ.

ಎಂ.ಎಸ್. ಆಶಾದೇವಿ, ಲೇಖಕಿ

‘ವೈರುಧ್ಯ ಎದುರಿಸಬೇಕಾಗುತ್ತದೆ’



ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡಿದವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಮಾಡಬೇಕು. ಕರ್ನಾಟಕ ಸಮಾವೇಶ, ಕರ್ನಾಟಕ ಸಮ್ಮೇಳನ ನಡೆಸಿದರೆ ಕರ್ನಾಟಕದ ಅಭಿವೃದ್ಧಿ ಸೇರಿ ವಿವಿಧ ಕ್ಷೇತ್ರಗಳಿಗೆ ಕೊಡುಗೆ ನೀಡಿದವರನ್ನು ಗುರುತಿಸಿ, ಗೌರವಿಸಬಹುದು. ಕರ್ನಾಟಕ ಸಮಾವೇಶವು ಕನ್ನಡ ಸಾಹಿತ್ಯ ಸಮ್ಮೇಳನಕ್ಕಿಂತ ಹೆಚ್ಚು ಉಪಯೋಗಕಾರಿ. ಸಾಹಿತ್ಯ ಸಮ್ಮೇಳನ ಎಂದು ಹೆಸರಿಟ್ಟುಕೊಂಡು ಕ್ರೀಡಾಪಟು ಸೇರಿ ವಿವಿಧ ಸಾಧಕರನ್ನು ಆಯ್ಕೆ ಮಾಡಿದರೆ ವೈರುಧ್ಯಗಳನ್ನು ಎದುರಿಸಿಕೊಳ್ಳಬೇಕಾಗುತ್ತದೆ. ಸಾಹಿತ್ಯ ಪರಿಷತ್ತು ಹುಟ್ಟಿಕೊಂಡಿದ್ದು ಕನ್ನಡ ಸಾಹಿತ್ಯ ಮತ್ತು ಭಾಷೆಯ ಅಭಿವೃದ್ಧಿಗೆ. ಆದ್ದರಿಂದ ಸಾಹಿತಿಗಳೇ ಸಮ್ಮೇಳನಾಧ್ಯಕ್ಷರಾಗುತ್ತಿದ್ದಾರೆ. ಅದೇ ಪರಂಪರೆ ಮುಂದುವರಿಸಬೇಕು.

ಪುರುಷೋತ್ತಮ ಬಿಳಿಮಲೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

‘ಸಾಹಿತ್ಯ, ಸಾಹಿತಿಯೇ ಕೇಂದ್ರ’

ಸಾಹಿತ್ಯ ಸಮ್ಮೇಳನವನ್ನು ಆಯೋಜಿಸುತ್ತಿರುವುದು ಕನ್ನಡ ಸಾಹಿತ್ಯ ಪರಿಷತ್ತೇ ಹೊರತು, ಕನ್ನಡ ಸಂಘವಲ್ಲ. ಕನ್ನಡ ಸಂಘವಾದರೆ ಎಲ್ಲ ಸಾಂಸ್ಕೃತಿಕ ಚಟುವಟಿಕೆ ಒಳಗೊಂಡು ಸಮ್ಮೇಳನ ನಡೆಸಬಹುದಾಗಿತ್ತು. ಕನ್ನಡ ಸಾಹಿತ್ಯ ಪರಿಷತ್ತು ಸಮ್ಮೇಳನ ನಡೆಸುತ್ತಿರುವುದರಿಂದ ಕನ್ನಡದಷ್ಟೇ ಸಾಹಿತ್ಯವೂ ಮುಖ್ಯ. ಆದ್ದರಿಂದ ಸಾಹಿತ್ಯೇತರ ಎಂಬ ಪ್ರಸಂಗವೇ ಬರುವುದಿಲ್ಲ. ನಾಡಿಗೆ ಕನಸು ನೀಡುವವರು, ಸಮಾಜದ ಸ್ವಾಸ್ಥ್ಯ ಸರಿಪಡಿಸುವವರು ಸಾಹಿತಿಗಳು. ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತ್ಯ, ಸಾಹಿತಿಯೇ ಕೇಂದ್ರಬಿಂದು. ಸಾಹಿತಿಗಳನ್ನೇ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಬೇಕು. ಸಾಹಿತ್ಯೇತರರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡುವ ಆಲೋಚನೆಯೇ ತಪ್ಪು.

ಹೇಮಾ ಪಟ್ಟಣಶೆಟ್ಟಿ, ಲೇಖಕಿ

‘ಸಾಹಿತ್ಯಿಕ ಕೊಡುಗೆ ಮುಖ್ಯ’

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದರೂ ಅದರ ಆದ್ಯತೆ ಸಾಹಿತ್ಯ. ಬೇರೆ ಕ್ಷೇತ್ರಗಳ ಮೂಲಕ ನಾಡಿಗೆ ಕೊಡುಗೆ ನೀಡಿದರೂ, ಸ್ವಲ್ಪವಾದರೂ ಸಾಹಿತ್ಯಿಕ ಕೆಲಸ ಮಾಡಿದವರನ್ನೇ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಬೇಕು. ಪಾಟೀಲ ಪುಟ್ಟಪ್ಪ ಮೊದಲಾದವರು ಸಾಹಿತಿಯಲ್ಲದಿದ್ದರೂ ಪತ್ರಕರ್ತರಾಗಿ, ಬರಹಗಾರರಾಗಿ ಸಾಹಿತ್ಯಿಕ ಕೊಡುಗೆ ನೀಡಿದ್ದರು. ಸಾಹಿತ್ಯೇತರರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಮಾಡುವುದು ಸರಿಯಲ್ಲ. ಸಾಹಿತ್ಯ, ಸಂಸ್ಕೃತಿ ಮತ್ತು ಕನ್ನಡದ ಜಾಗೃತಿಗೆ ಕೆಲಸ ಮಾಡಿದವರು ಸಮ್ಮೇಳನಾಧ್ಯಕ್ಷರಾಗುವುದು ಸೂಕ್ತ.

ರಾ.ನಂ. ಚಂದ್ರಶೇಖರ, ಕನ್ನಡ ಪರ ಹೋರಾಟಗಾರ

‘ಪರಂಪರೆ ಮುಂದುವರಿಸಲಿ’



ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡಿದ ಹಿರಿಯರು, ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆ ನೀಡಿದವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡುವುದು ಈವರೆಗೆ ನಡೆದುಕೊಂಡು ಬಂದ ಪರಂಪರೆ. ಇದು ಸಾಹಿತ್ಯ ಪರಿಷತ್ತಿನ ಸ್ವಭಾವಕ್ಕೂ ಸೂಕ್ತ. ವಿಶ್ವ ಕನ್ನಡ ಸಮ್ಮೇಳನದಲ್ಲಿ ಒಟ್ಟಾರೆ ಕನ್ನಡಕ್ಕೆ ಕೊಡುಗೆ ನೀಡಿದವರನ್ನು ಆಯ್ಕೆ ಮಾಡಬಹುದು. ಸ್ವಾಯತ್ತ ಸಂಸ್ಥೆಯಾದ ಪರಿಷತ್ತು ರಾಜಕೀಯ ಹಸ್ತಕ್ಷೇಪದಿಂದ ದೂರ ಇರಬೇಕು. ಸಾಹಿತ್ಯ ಕ್ಷೇತ್ರದಲ್ಲಿಯೇ ಹಲವಾರು ಸಾಧಕರಿದ್ದಾರೆ. ಅಂತಹವರ ಹೆಸರು ಸಾಹಿತ್ಯ ಪರಿಷತ್ತಿನ ಬಳಿ ಇರದಿದ್ದರೆ ನಾವು ಕೊಡಲು ಸಿದ್ಧರಿದ್ದೇವೆ. ಕನ್ನಡ ನಾಡು–ನುಡಿಗೆ ಸಾಹಿತ್ಯೇತರರು ನೀಡಿದ ಕೊಡುಗೆಯ ಬಗ್ಗೆ ಅಭಿಮಾನವಿದ್ದಲ್ಲಿ ಸಾಹಿತ್ಯ ಸಮ್ಮೇಳನಕ್ಕೆ ಆಹ್ವಾನಿಸಿ, ಗೌರವಿಸಲಿ. ಅವರಿಗೆ ಸರ್ವಾಧ್ಯಕ್ಷತೆ ನೀಡುವುದು ಸೂಕ್ತವಲ್ಲ.

ಬಂಜಗೆರೆ ಜಯಪ್ರಕಾಶ್, ಸಾಹಿತಿ

ಬಾಂಗ್ಲಾ: ಕಾಳಿ ಕಿರೀಟ ಕಳವು

ಒಂದನೇ ಪುಟದಿಂದ...

‘ದೇಗುಲದ ಅರ್ಚಕ ದಿಲೀಪ್ ಕುಮಾರ್ ಬ್ಯಾನರ್ಜಿ ಅವರು ಗುರುವಾರ ಮಧ್ಯಾಹ್ನ ಪೂಜೆ ಮುಗಿಸಿ, ದೇವಾಲಯದ ಕೀಲಿ ಕೈ ಅನ್ನು ಉಸ್ತುವಾರಿ ರೇಖಾ ಅವರಿಗೆ ನೀಡಿದ್ದರು’ ಎಂದು ಸ್ಥಳೀಯ ನಿವಾಸಿಗಳು ತಿಳಿಸಿದ್ದಾರೆ.

ದುರ್ಗಾ ಪೂಜೆಯ ಸಂದರ್ಭದಲ್ಲಿ ಇಂತಹ ಘಟನೆ ನಡೆದಿರುವುದರಿಂದ ದೇಶದಾದ್ಯಂತ ಬಿಗಿ ಬಂದೋಬಸ್ತ್ ಕೈಗೊಳ್ಳಲು ಸರ್ಕಾರ ಆದೇಶಿಸಿದೆ.

ಕಚ್ಚಾ ಬಾಂಬ್ ದಾಳಿ: ತಂತಿಬಜಾರ್ ಪ್ರದೇಶದಲ್ಲಿ ದುರ್ಗಾ ಪೂಜೆ ನಡೆಯುತ್ತಿದ್ದ ಪೆಂಡಾಲ್ ಮೇಲೆ ಕಚ್ಚಾ ಬಾಂಬ್ ಎಸಯಲಾಗಿದೆ ಎಂದು ಬಾಂಗ್ಲಾದೇಶದ ದಿನಪತ್ರಿಕೆಯೊಂದು ವರದಿ ಮಾಡಿದೆ.

ಶುಕ್ರವಾರ ರಾತ್ರಿ ಈ ಘಟನೆ ನಡೆದಿದ್ದು, ದಾಳಿಯಲ್ಲಿ ಯಾರಿಗೂ ಗಾಯಗಳಾಗಿಲ್ಲ.

17 ಜನರ ಬಂಧನ: ದುರ್ಗಾ ಪೂಜೆಯ ಸಂದರ್ಭದಲ್ಲಿ ಬಾಂಗ್ಲಾದೇಶದಲ್ಲಿ 35 ಅಹಿತಕರ ಘಟನೆಗಳು ನಡೆದಿವೆ. ಈ ಸಂಬಂಧ ಹಲವು ಪ್ರಕರಣಗಳು ದಾಖಲಾಗಿದ್ದು, 17 ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಅ.1ರಂದು ದುರ್ಗಾ ಪೂಜೆ ಆರಂಭಗೊಂಡ ಬಳಿಕ ನಡೆದ ಅಹಿತಕರ ಘಟನೆಗಳ ಬಗ್ಗೆ 11 ಪ್ರಕರಣಗಳು ದಾಖಲಾಗಿವೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುತ್ತೇವೆ’ ಎಂದು ಐಜಿಪಿ ಮೊಯಿನುಲ್ ಇಸ್ಲಾಂ ಅವರು ತಿಳಿಸಿರುವುದಾಗಿ ಢಾಕಾ ಟ್ರಿಬ್ಯೂನ್ ದೈನಿಕ ವರದಿ ಮಾಡಿದೆ.

ಭಾರತ ಕಳವಳ

ನವದೆಹಲಿ: ಬಾಂಗ್ಲಾದೇಶದ ಹಿಂದೂ ದೇಗುಲದಿಂದ ಚಿನ್ನದ ಕಿರೀಟ ಕಳ್ಳತನ ಮತ್ತು ಹಿಂದೂಗಳ ಮೇಲಿನ ದಾಳಿಯ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಭಾರತ, ಅಲ್ಪಸಂಖ್ಯಾತ ಸಮುದಾಯಗಳಿಗೆ ಸೂಕ್ತ ಭದ್ರತೆ ನೀಡುವಂತೆ ಬಾಂಗ್ಲಾ ಸರ್ಕಾರವನ್ನು ಒತ್ತಾಯಿಸಿದೆ.

‘ಇದೊಂದು ದುಷ್ಕೃತ್ಯವಾಗಿದ್ದು, ಈ ಮೂಲಕ ಹಿಂದೂ ದೇಗುಲಗಳ ಮೇಲೆ ವ್ಯವಸ್ಥಿತ ದಾಳಿ ನಡೆಸಲಾಗುತ್ತಿದೆ’ ಎಂದು ಭಾರತ ವಿದೇಶಾಂಗ ಇಲಾಖೆ ತಿಳಿಸಿದೆ.

‘ಕಿರೀಟ ಕಳ್ಳತನ ಮತ್ತು ಬಾಂಬ್ ದಾಳಿಯನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ. ಅಲ್ಪಸಂಖ್ಯಾತರಾಗಿರುವ ಹಿಂದೂಗಳ ಸುರಕ್ಷತೆ ಬಗ್ಗೆ ಗಮನಹರಿಸಬೇಕಾಗಿದೆ’ ಎಂದು ಹೇಳಿದೆ.

‘ಹಬ್ಬಗಳ ಸಂದರ್ಭದಲ್ಲಿ ದಾಳಿಯು ಹೆಚ್ಚಾಗುತ್ತಿದ್ದು, ಸರ್ಕಾರ ಈ ಬಗ್ಗೆ ಸೂಕ್ತ ಕ್ರಮ ವಹಿಸಬೇಕು’ ಎಂದು ವಿದೇಶಾಂಗ ಇಲಾಖೆ ಆಗ್ರಹಿಸಿದೆ.

‘ಕಳವಾಗಿರುವ ಕಿರೀಟವನ್ನು ಪತ್ತೆ ಹಚ್ಚಿ, ಅಪರಾಧಿಗಳಿಗೆ ಸೂಕ್ತ ಶಿಕ್ಷೆ ನೀಡಬೇಕು’ ಎಂದು ಢಾಕಾದಲ್ಲಿರುವ ಭಾರತೀಯ ಹೈ ಕಮಿಷನ್ ‘ಎಕ್ಸ್’ ಮೂಲಕ ಆಗ್ರಹಿಸಿದೆ.

‘ನಿಹಾನ್ ಹಿಡಾಂಕ್ಯೊ’ಗೆ ಶಾಂತಿ ಪುರಸ್ಕಾರ



ಒಂದನೇ ಪುಟದಿಂದ...

‘ದುರಂತದಲ್ಲಿ ದೈಹಿಕ ಸಂಕಟದ ಜತೆಗೆ ನೋವಿನ ನೆನಪುಗಳ ಹೊರತಾಗಿಯೂ ಬದುಕುಳಿದ ಎಲ್ಲರಿಗೂ ಶುಭ ಹಾರೈಸುತ್ತೇವೆ. ತಮ್ಮ ತ್ರಾಸದಾಯಕ ಅನುಭವಗಳನ್ನು ಶಾಂತಿ ಸ್ಥಾಪನೆಗೆ ಸಂಸ್ಥೆಯು ಶ್ರಮಿಸುತ್ತಿದೆ’ ಎಂದು ಅವರು ಪ್ರಶಂಸಿಸಿದರು.

ಪ್ರಶಸ್ತಿ ಘೋಷಣೆಯಾದ ಸುದ್ದಿ ಕೇಳುತ್ತಿದ್ದಂತೆಯೇ ನಿಹಾನ್ ಹಿಡಾಂಕ್ಯೊದ ಹಿರೋಶಿಮಾ ಶಾಖೆಯ ಮುಖ್ಯಸ್ಥ ತೊಶಿಯುಕಿ ಮಿಮಾಕಿ ಸಂತಸ ವ್ಯಕ್ತಪಡಿಸಿದರು.

‘ಇದು ನಿಜವೇ.. ನಂಬಲೂ ಸಾಧ್ಯವಾಗುತ್ತಿಲ್ಲ’ ಎಂದು ಅವರು ಸಂಭ್ರಮಿಸಿದರು.

ಮಧ್ಯಪ್ರಾಚ್ಯ, ಉಕ್ರೇನ್– ರಷ್ಯಾ ಹಾಗೂ ಸುಡಾನ್‌ನಲ್ಲಿ ಯುದ್ಧ ನಡೆಯುತ್ತಿರುವ ಮಧ್ಯದಲ್ಲೇ ಪರಮಾಣು ಶಸ್ತ್ರಾಸ್ತ್ರಗಳ ವಿರುದ್ಧ ಹೋರಾಟ ನಡೆಸುತ್ತಿರುವ ಸಂಘಟನೆಗೆ ಶಾಂತಿ ಪ್ರಶಸ್ತಿ ಘೋಷಿಸಿರುವುದು ಮಹತ್ವ ಪಡೆದುಕೊಂಡಿದೆ.

ಸೆಂಟ್ರಲ್ ಜೈಲ್ ಬಡಾವಣೆ: ದಶಕಗಳ ಸಮಸ್ಯೆಗೆ ಸ್ಪಂದಿಸದ ಬಿಬಿಎಂಪಿ – ನಿವಾಸಿಗಳ ಆರೋಪ

ಮೂಲಸೌಕರ್ಯದ ಕೊರತೆ: ಸಂಕಷ್ಟ

• ಲಿಂಗರಾಜು ಮಳವಳ್ಳಿ

ಬೊಮ್ಮಸಂದ್ರ: ಸಿಂಗಸಂದ್ರ ವಾರ್ಡ್‌ನಲ್ಲಿರುವ 'ಸೆಂಟ್ರಲ್ ಜೈಲ್ ಬಡಾವಣೆ'ಯಲ್ಲಿ ಕನಿಷ್ಠ ಮೂಲಸೌಕರ್ಯಗಳೂ ಇಲ್ಲದೆ ಇಲ್ಲಿನ ನಿವಾಸಿಗಳು ಸಂಕಷ್ಟ ಎದುರಿಸುತ್ತಿದ್ದಾರೆ.

ಸರ್ಜಾಪುರ ರಸ್ತೆಗೆ ಹೊಂದಿಕೊಂಡಿರುವ 'ಸೆಂಟ್ರಲ್ ಜೈಲ್ ಬಡಾವಣೆ'ಯಲ್ಲಿ ವಿದ್ಯುತ್, ರಸ್ತೆ, ಒಳಚರಂಡಿ, ಬೀದಿ ದೀಪ ಸೇರಿದಂತೆ ಯಾವುದೇ ಮೂಲಸೌಕರ್ಯಗಳಿಲ್ಲ. ದಶಕಗಳಿಂದ ನಾಗರಿಕರು ದೂರುತ್ತಿದ್ದರೂ, ಬಿಬಿಎಂಪಿ ಇತ್ತ ಗಮನಹರಿಸಿಲ್ಲ.

ಡಾಂಬರು ಕಾಣದ ರಸ್ತೆಗಳು ಮಳೆ ಬಂದಾಗ ಕೆಸರು ಗದ್ದೆಯಂತಾಗುತ್ತವೆ. ಒಳಚರಂಡಿ ವ್ಯವಸ್ಥೆಯೂ ಇಲ್ಲದಿರುವುದರಿಂದ ಮಳೆ ನೀರು ಮನೆಗಳಿಗೆ ನುಗ್ಗುವುದು ಸಾಮಾನ್ಯವಾಗಿದೆ. ಅಧಿಕೃತ ವಿದ್ಯುತ್ ಸಂಪರ್ಕವೂ ಇಲ್ಲ. ಬೀದಿ ದೀಪಗಳೂ ಇಲ್ಲದೇ ರಾತ್ರಿ ವೇಳೆ ಸಂಚರಿಸುವುದು ದುಸ್ತರವಾಗಿದೆ.

'ಮೂಲಸೌಕರ್ಯ ಕಲ್ಪಿಸುವಂತೆ ಪಾಲಿಕೆ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಪತ್ರ ನೀಡಿದ್ದರೂ ಪ್ರಯೋಜನವಾಗಿಲ್ಲ. ಇಲ್ಲಿನ ಮೂಲಸೌಕರ್ಯಕ್ಕೆ ಅನುದಾನ ಮಂಜೂರಾದರೂ, ಅದನ್ನು ಬೇರೆಡೆ ಬಳಸಿಕೊಳ್ಳಲಾಗಿದೆ' ಎಂದು ಇಲ್ಲಿನ ನಿವಾಸಿಗಳು ದೂರಿದರು.

ಪರಪ್ಪನ ಅಗ್ರಹಾರದಲ್ಲಿರುವ ಕೇಂದ್ರ ಕಾರಾಗೃಹಕ್ಕಾಗಿ ಭೂ ಸ್ವಾಧೀನ ಮಾಡಿಕೊಂಡ ನಂತರ, ಜಮೀನು ಕಳೆದು ಕೊಂಡವರಿಗೆ ಪರ್ಯಾಯವಾಗಿ ಜಾಗ ನೀಡಬೇಕೆಂದು ಸಂತ್ರಸ್ತರು ನ್ಯಾಯಾಲಯದ ಮೊರೆ ಹೋಗಿದ್ದರು. ಜಮೀನು ಕಳೆದುಕೊಂಡವರಿಗೆ ಬದಲಿ ನಿವೇಶನ ನೀಡಬೇಕೆಂದು ನ್ಯಾಯಾಲಯವು 1997ರ ಡಿಸೆಂಬರ್ 15ರಂದು ಆದೇಶಿಸಿತ್ತು. ಅದರನ್ವಯ 2005ರಲ್ಲಿ ಕೂಡ್ಲು ಗ್ರಾಮದ ಸರ್ವೆ ನಂಬರ್ 148ರ ಐದು ಎಕರೆ ಸರ್ಕಾರಿ ಜಮೀನಿನಲ್ಲಿ 150 ಕುಟುಂಬಗಳಿಗೆ ತಲಾ 600 ಚದರ ಅಡಿ ವಿಸ್ತೀರ್ಣದ ನಿವೇಶನಗಳನ್ನು ಮಂಜೂರು ಮಾಡಲಾಗಿತ್ತು. ಆದರೆ ಆಗಿನಿಂದಲೂ ಈ ಬಡಾವಣೆಗೆ ಮೂಲಸೌಕರ್ಯ ಕಲ್ಪಿಸಿಲ್ಲ.

'ದೀರ್ಘಕಾಲದಿಂದ ಹೋರಾಟ ಮಾಡಿ, ನ್ಯಾಯಾಲಯದ ಮೂಲಕ ನ್ಯಾಯ ಪಡೆದರೂ, ಅಧಿಕಾರಿಗಳು ಈ ಬಡಾವಣೆಗೆ ರಸ್ತೆ, ಚರಂಡಿ ಸೇರಿದಂತೆ ಯಾವುದೇ ಮೂಲ ಸೌಕರ್ಯಗಳನ್ನು ಒದಗಿಸಿಲ್ಲ, ಹಲವು ಬಾರಿ ಮನವಿ ಪತ್ರ ನೀಡಿದ್ದರೂ ಯಾವುದೇ ಪ್ರಯೋಜನವಾಗಲಿಲ್ಲ' ಎನ್ನುತ್ತಾರೆ ಬಡಾವಣೆಯ ನಿವಾಸಿ ಮುನಿಯಪ್ಪ.

ಮುಖ್ಯಾಂಶಗಳು

- ಡಾಂಬರು ಕಾಣದ ರಸ್ತೆಗಳು
- ಮಳೆ ಬಂದಾಗ ಮನೆಗೆ ನುಗ್ಗುವ ನೀರು
- ಬೇಡಿಕೆಗೆ ಸ್ಪಂದಿಸದ ಬಿಬಿಎಂಪಿ

ಸೆಂಟ್ರಲ್ ಜೈಲ್ ಬಡಾವಣೆಗೆ ತೆರಳಿ, ಸ್ಥಳ ಪರಿಶೀಲನೆ ಮಾಡಿ, ಮೂಲ ಸೌಕರ್ಯ ಕಲ್ಪಿಸಲು ಪ್ರಯತ್ನಿಸಲಾಗುವುದು

ಅಜಿತ್, ಜಂಟಿ ಆಯುಕ್ತ, ಬಿಬಿಎಂಪಿ, ಬೊಮ್ಮನಹಳ್ಳಿ ವಲಯ



ಎರಡೂವರೆ ದಶಕಗಳಿಂದ ಡಾಂಬರು ಕಾಣದ ರಸ್ತೆ

ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಪ್ರಮುಖರ ಜೊತೆಗೆ ಇಲಾಖೆ ಅಧಿಕಾರಿಗಳ ಚರ್ಚೆ

ಖಾಸಗಿ ವಿಮೆ: ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಆರೋಗ್ಯ ವಿಮೆಯಡಿ ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಚಿಕಿತ್ಸೆ ಒದಗಿಸುವ ಬಗ್ಗೆ ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಸ್ತಾವಕ್ಕೆ ನಗರದ ಸರ್ಕಾರಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಪ್ರಮುಖರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ.

ಇಲಾಖೆ ಅಧಿಕಾರಿಗಳು ಹಾಗೂ ಸರ್ಕಾರಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳು ಈಚೆಗೆ ಸಭೆ ನಡೆಸಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಸಗಿ ಆರೋಗ್ಯ ವಿಮೆಯಡಿ ಚಿಕಿತ್ಸೆ ಒದಗಿಸುವ ಬಗ್ಗೆ ಚರ್ಚಿಸಿದರು.

'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ', 'ಯಶಸ್ವಿನಿ' ಸೇರಿ ವಿವಿಧ ಸರ್ಕಾರಿ ಪ್ರಾಯೋಜಿತ ಆರೋಗ್ಯ ವಿಮೆಯಡಿ ಸರ್ಕಾರಿ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ. ಖಾಸಗಿ ಆರೋಗ್ಯ ವಿಮಾ ಸಂಸ್ಥೆಗಳೊಂದಿಗೂ ಒಪ್ಪಂದ ಮಾಡಿಕೊಂಡು, ಚಿಕಿತ್ಸೆ ಒದಗಿಸಿದಲ್ಲಿ ಆಸ್ಪತ್ರೆಗಳ ಆರ್ಥಿಕ ಸಂಪನ್ಮೂಲ ಹೆಚ್ಚಲಿದೆ' ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು.

'ಖಾಸಗಿ ಆರೋಗ್ಯ ವಿಮೆಯಡಿ ಚಿಕಿತ್ಸೆ ನೀಡಲು ಪ್ರಾರಂಭಿಸಿದರೆ ವಿಮಾ ಕಂಪನಿಗಳು ಪಾವತಿಸಿದ ಹಣದಡಿ ಸೇವೆಯಲ್ಲಿನ ಸೌಲಭ್ಯ ಹಾಗೂ ಸೌಕರ್ಯಗಳನ್ನು ಇನ್ನಷ್ಟು ಉತ್ತಮ ಪಡಿಸಬಹುದು' ಎಂದು ಇಲಾಖೆ ಅಧಿಕಾರಿಗಳು ತಿಳಿಸಿದರು. ಇದಕ್ಕೆ ವೈದ್ಯಕೀಯ ಸಂಸ್ಥೆಗಳ ಮುಖ್ಯಸ್ಥರು ಸಹಮತ ವ್ಯಕ್ತಪಡಿಸಿದರು.

ಈಗಾಗಲೇ ಜಯದೇವ ಹೃದ್ರೋಗ ಸಂಸ್ಥೆ, ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಗ್ಯಾಸ್ಟ್ರೋ ಎಂಟರಾಲಜಿ ಸೈನ್ಸಸ್ ಆ್ಯಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆಯಲ್ಲಿ (ಐಗಾಟ್) ಖಾಸಗಿ ಆರೋಗ್ಯ ವಿಮೆಯಡಿಯೂ ಚಿಕಿತ್ಸೆ ನೀಡಲಾಗುತ್ತಿದೆ. ಇದೇ ರೀತಿ, ವೈದ್ಯಕೀಯ ಶಿಕ್ಷಣ ಇಲಾಖೆ ಅಡಿಯಲ್ಲಿ ಬರುವ ಎಲ್ಲ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗಳಲ್ಲಿ ಈ ವ್ಯವಸ್ಥೆ ಅಳವಡಿಸಿಕೊಳ್ಳಬೇಕು ಎಂದು ಚರ್ಚಿಸಲಾಯಿತು.

'ಖಾಸಗಿ ಆರೋಗ್ಯ ವಿಮೆ ಹೊಂದಿರುವವರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಪೂರಕವಾದ ವಾತಾವರಣ ಸೃಷ್ಟಿಸುವ ಅಗತ್ಯವಿದೆ. ಹೆಚ್ಚು ಸಮಯ ಕಾಯಿಸದೆ ಚಿಕಿತ್ಸೆ ನೀಡಬೇಕಿದೆ. ಈ ಸಂಬಂಧ ಮಾನವ ಸಂಪನ್ಮೂಲ ಹೆಚ್ಚಳದ ಬಗ್ಗೆಯೂ ಗಮನ ಹರಿಸಬೇಕಿದೆ. ಈ ವಿಮೆದಾರರಿಗೆ ವಿಶೇಷ ವಾರ್ಡ್‌ಗಳಲ್ಲಿ ಚಿಕಿತ್ಸೆ ಒದಗಿಸುವ ಅಗತ್ಯವಿದೆ' ಎಂಬ ಅಭಿಪ್ರಾಯಗಳು ಸಭೆಯಲ್ಲಿ ವ್ಯಕ್ತವಾಯಿತು.

ಸಭೆಯಲ್ಲಿ ವಿಕ್ಟೋರಿಯಾ ಆಸ್ಪತ್ರೆ, ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿಎಂಎಸ್‌ಎಸ್‌ವೈ), ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಸಂಜಯ್ ಗಾಂಧಿ ಆಸ್ಪತ್ರೆ, ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ, ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆ ಸೇರಿ ವಿವಿಧ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಪುಸ್ತಕ ಬಹುಮಾನಕ್ಕೆ ಆಹ್ವಾನ

ಬೆಂಗಳೂರು: ಕನ್ನಡ ಗೆಳೆಯರ ಬಳಗವು 'ಹಾಮಾನಾ ಕನ್ನಡ ಜಾಗೃತಿ ಪುಸ್ತಕ ಬಹುಮಾನ'ಕ್ಕೆ ಪುಸ್ತಕಗಳನ್ನು ಆಹ್ವಾನಿಸಿದೆ.

ಹಾ.ಮಾ. ನಾಯಕರ ಸ್ಮರಣಾರ್ಥ ಬಳಗವು ಈ ಬಹುಮಾನ ನೀಡುತ್ತಿದೆ.

ಕನ್ನಡ ನಾಡು, ನುಡಿ ಹಾಗೂ ಸಂಸ್ಕೃತಿಗೆ ಸಂಬಂಧಿಸಿದ ಪುಸ್ತಕಗಳನ್ನು ಬಹುಮಾನಕ್ಕೆ ಪರಿಗಣಿಸುತ್ತಿದ್ದು, ಪ್ರಥಮ ಬಹುಮಾನ ₹5 ಸಾವಿರ ನಗದು, ಹಾಗೂ ಸಮಾಧಾನಕರ ಬಹುಮಾನ ₹2 ಸಾವಿರ ನಗದು ಒಳಗೊಂಡಿದೆ.

ನವೆಂಬರ್ ಕೊನೆಯ ವಾರದಲ್ಲಿ ನಡೆಯುವ ಬಳಗದ ವಾರ್ಷಿಕ ಬಹುಮಾನ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಆಸಕ್ತರು ಪುಸ್ತಕದ ಎರಡು ಪ್ರತಿಗಳನ್ನು ನ.3ರೊಳಗೆ ರಾ.ನಂ. ಚಂದ್ರಶೇಖರ, ಸಂಚಾಲಕ, ಕನ್ನಡ ಗೆಳೆಯರ ಬಳಗ #1 'ಶ್ರೀನಿಲಯ' ಮಾರಮ್ಮ ದೇವಸ್ಥಾನದ ರಸ್ತೆ, ಕತ್ರಿಗುಪ್ಪೆ, ಬೆಂಗಳೂರು -560085 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಪ್ರಾಣಿಗಳೊಂದಿಗೆ ಸಾಮರಸ್ಯದ ಸಹಬಾಳ್ವೆ ಅರಿವು: ಬಿಬಿಎಂಪಿ

17ಕ್ಕೆ 'ನಾಯಿಗಳಿಗಾಗಿ ಉತ್ಸವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಿಗಳೊಂದಿಗಿನ ಪ್ರೀತಿ ಮತ್ತು ಬಾಂಧವ್ಯದ ಕಥೆಗಳನ್ನು ಹಂಚಿಕೊಳ್ಳುತ್ತಾ, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಹಾಗೂ ಪ್ರಾಣಿಗಳ ಪಾಲಕರನ್ನು ಒಟ್ಟುಗೂಡಿಸಲು ಬಿಬಿಎಂಪಿ 'ನಾಯಿಗಳಿಗಾಗಿ ಉತ್ಸವ'ವನ್ನು (ಕುಕುರ್ ತಿಹಾರ್) ಅ.17ರಂದು ಆಯೋಜಿಸಿದೆ.

'ಸಮಾಜದಲ್ಲಿ ನಾಯಿಗಳ ಕಡಿತ ಹಾಗೂ ದಾಳಿಯ ಭಯದಿಂದ ಅವುಗಳ ಮೇಲೆ ನಕಾರಾತ್ಮಕ ಭಾವನೆಯೇ ಹೆಚ್ಚಾಗುತ್ತಿದೆ. ಆದರೆ, ನಾಯಿಗಳು ಬಹಳ ನಿಷ್ಠಾವಂತ, ವಿಧೇಯ, ರಕ್ಷಣಾತ್ಮಕ ಹಾಗೂ ಭಾವನಾತ್ಮಕ ಬೆಂಬಲ ನೀಡುವಂತ ಪ್ರಾಣಿಯೂ ಆಗಿದೆ' ಎಂದು ಆರೋಗ್ಯ, ನೈರ್ಮಲ್ಯ ಮತ್ತು ಪಶುಪಾಲನೆ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದ್ದಾರೆ.

'ಪ್ರಾಣಿಗಳೊಂದಿಗಿನ ಸಂಘರ್ಷ ನಿರ್ವಹಣೆ, ರೇಬೀಸ್ ಕಾಯಿಲೆ ತಡೆಗಟ್ಟುವ ಕ್ರಮಗಳನ್ನು ಪ್ರತಿಪಾದಿಸುತ್ತಿದ್ದರೂ, ಸಮಾಜಕ್ಕೆ ನಾಯಿಗಳ ಸಕಾರಾತ್ಮಕ ಕೊಡುಗೆಗಳನ್ನು ಆಚರಿಸಲು ನಾವು ಉತ್ಸುಕರಾಗಿದ್ದೇವೆ' ಎಂದಿದ್ದಾರೆ.

'ಪ್ರಾಣಿಗಳ ಜನನ ನಿಯಂತ್ರಣ ಮತ್ತು ಲಸಿಕೆಗಳ ಹೊರತಾಗಿ, ಪ್ರಾಣಿಗಳ ನಡವಳಿಕೆಯನ್ನು ಅರ್ಥಮಾಡಿಕೊಂಡು, ಪ್ರಕೃತಿ ಅವುಗಳನ್ನು ರಚಿಸಿದ ರೀತಿಯಲ್ಲಿ ಅವುಗಳನ್ನು ಒಪ್ಪಿಕೊಳ್ಳುವುದು ಸಹ ಮುಖ್ಯವಾದ ವಿಷಯ' ಎಂದು ಹೇಳಿದ್ದಾರೆ.

ಸಹವರ್ತಿನ್ ಅನಿಮಲ್ ವೆಲ್‌ಫೇರ್ ಟ್ರಸ್ಟ್ ಮತ್ತು ಇತರ ಆಸಕ್ತ ಸಂಸ್ಥೆಗಳೊಂದಿಗೆ ಪಾಲಿಕೆಯ ಪಶು ಸಂಗೋಪನೆ ವಿಭಾಗವು ಮುಂಬರುವ ದಿನಗಳಲ್ಲಿ ಮಾನವ–ಪ್ರಾಣಿ ಸಂಘರ್ಷಗಳನ್ನು ಕಡಿಮೆ ಮಾಡಲು ಅನೇಕ ಉಪಕ್ರಮಗಳನ್ನು ಹಮ್ಮಿಕೊಳ್ಳಲಿದೆ. ಈ ಕಾರ್ಯಕ್ರಮದ ಮೂಲಕ ಪ್ರತಿ ವಾರ್ಡ್‌ಗಳಲ್ಲಿ ಸಹಬಾಳ್ವೆಯ ಚಾಂಪಿಯನ್‌ಗಳನ್ನು ಸಕ್ರಿಯಗೊಳಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

'ನಾಯಿಗಳಿಗಾಗಿ ಉತ್ಸವ'ದ ದಿನ ದಂದು, ಬಿಬಿಎಂಪಿಯು ಆಯಾ ವಾರ್ಡಿನ ರೆಸ್ಟೋರೆಂಟ್‌ಗಳೊಂದಿಗೆ ಸಮನ್ವಯ ಸಾಧಿಸುತ್ತದೆ. ನಾಯಿಗಳಿಗೆ ಆಹಾರ ನೀಡುವಲ್ಲಿ ಸಹಾಯ ಮಾಡಲು ನಾಲ್ಕು ವಾರ್ಡ್‌ಗಳ ಪೌರಕಾರ್ಮಿಕರ ಸಹಯೋಗದೊಂದಿಗೆ ಪ್ರಾಯೋಗಿಕವಾಗಿ ಆಹಾರ ನೀಡುವ ಕಾರ್ಯವನ್ನು ಪ್ರಾರಂಭಿಸಲಿದೆ' ಎಂದಿದ್ದಾರೆ.

'ಈ ಯೋಜನೆಯು ಮುಂದುವರೆದಂತೆ, ಪ್ರತಿ ವಾರ್ಡಿನಲ್ಲಿಯೂ ಆರೈಕೆದಾರರೊಂದಿಗೆ ರೆಸ್ಟೋರೆಂಟ್‌ಗಳನ್ನು ಸಂಪರ್ಕಿಸಲಾಗುತ್ತದೆ. ಉಳಿದ ಆಹಾರವನ್ನು ನಾಯಿಗಳಿಗೆ ನಿರಂತರವಾಗಿ ಪ್ರತಿದಿನ ಒಂದು ಬಾರಿ ನೀಡಲಾಗುತ್ತದೆ' ಎಂದು ಮಾಹಿತಿ ನೀಡಿದ್ದಾರೆ.

ಹೆಚ್ಚಿನ ಮಾಹಿತಿಗೆ: 1533 ಸಹಾಯವಾಣಿ ಸಂಪರ್ಕಿಸಬಹುದು.

ವಿಶ್ವಕನ್ನಡ ದಿನ ಘೋಷಣೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವಕವಿ ಕುವೆಂಪು ಅವರ 30ನೇ ಪುಣ್ಯಸ್ಮರಣೆ ದಿನವಾದ ನವೆಂಬರ್ 11 ಅನ್ನು 'ವಿಶ್ವ ಕನ್ನಡ ದಿನ' ಎಂದು ರಾಜ್ಯ ಸರ್ಕಾರ ಘೋಷಿಸಿ, ಸುತ್ತೋಲೆ ಹೊರಡಿಸಬೇಕು ಎಂದು ಕರ್ನಾಟಕ ಕನ್ನಡ ತಮಿಳ್ ಫೆಡರೇಷನ್ ಆಗ್ರಹಿಸಿದೆ.

ದೇಶದ ಇತರೆ ರಾಜ್ಯಗಳು ಇಂತಹ ಒಂದು ನಿರ್ಣಯ ಕೈಗೊಳ್ಳಲು ಪ್ರೇರಣೆ ಆಗಬೇಕು. ವಿಧಾನಸೌಧದಿಂದ ರಾಜ್ಯದ ಗಡಿ ಭಾಗದ ಹಳ್ಳಿಗಳಲ್ಲೂ ಕನ್ನಡ ದಿನ ಆಚರಿಸಬೇಕು ಎಂದು ಒಕ್ಕೂಟದ ಸಂಸ್ಥಾಪಕ ಅಧ್ಯಕ್ಷ ಮಣಿವಣ್ಣನ್ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಹೋರಾಟಗಾರ ಸಾಯಿಬಾಬಾ ನಿಧನ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಮಾನವಹಕ್ಕು ಹೋರಾಟಗಾರ ಹಾಗೂ ದೆಹಲಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಜಿ.ಎನ್. ಸಾಯಿಬಾಬಾ (58) ಅವರು ತೀವ್ರ ಅನಾರೋಗ್ಯದಿಂದ ಶನಿವಾರ ರಾತ್ರಿ ಇಲ್ಲಿನ ನಿಮ್ಸ್ ಆಸ್ಪತ್ರೆಯಲ್ಲಿ ನಿಧನರಾದರು.

ಸಾಯಿಬಾಬಾ ಅವರು ಇತ್ತೀಚೆಗಷ್ಟೇ ಪಿತ್ತಕೋಶದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. 10 ದಿನಗಳ ಹಿಂದೆ ಆಸ್ಪತ್ರೆಗೆ ದಾಖಲಾಗಿದ್ದ ಅವರಿಗೆ ಪ್ಯಾಂಕ್ರಿಯಸ್ ಸಂಬಂಧಿ ಸಮಸ್ಯೆಯೂ ಇತ್ತು.

ನಕ್ಸಲರೊಂದಿಗೆ ಸಂಪರ್ಕ ಹೊಂದಿದ್ದಾರೆ ಎನ್ನುವ ಆರೋಪ ಹೊರಿಸಿ 2014ರಲ್ಲಿ ಮಹಾರಾಷ್ಟ್ರ ಪೊಲೀಸರು ಸಾಯಿಬಾಬಾ ಅವರನ್ನು ಬಂಧಿಸಿದ್ದರು.

ಇದೇ ಪ್ರಕರಣ ಸಂಬಂಧ ಅವರು 10 ವರ್ಷ ಜೈಲುವಾಸ ಅನುಭವಿಸಿದ್ದರು. 'ಸಾಯಿಬಾಬಾ ಅವರ ವಿರುದ್ಧ ಯಾವುದೇ ಸಾಕ್ಷ್ಯ ಇಲ್ಲ' ಎಂದು 2024ರ ಮಾರ್ಚ್‌ನಲ್ಲಿ ಬಾಂಬೆ ಹೈಕೋರ್ಟ್ ತೀರ್ಪು ನೀಡಿತ್ತು. ಜೈಲಿನಿಂದ ಬಿಡುಗಡೆಯಾದ 7 ತಿಂಗಳಲ್ಲೇ ಅವರು ನಿಧನರಾಗಿದ್ದಾರೆ.

ಆಂಧ್ರ ಪ್ರದೇಶದ ಅಮಲಾಪುರದ ಬಡ ರೈತ ಕುಟುಂಬದಲ್ಲಿ ಸಾಯಿಬಾಬಾ ಜನಿಸಿದ್ದರು. ದೆಹಲಿ ವಿಶ್ವವಿದ್ಯಾಲಯದ ರಾಮ್ ಲಾಲ್ ಆನಂದ್ ಕಾಲೇಜಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರು. ಜೈಲಿಗೆ ಹೋದ ಬಳಿಕ, ಅವರನ್ನು ಉದ್ಯೋಗದಿಂದ ಅಮಾನತು ಮಾಡಲಾಗಿತ್ತು.

ಸಾಯಿಬಾಬಾ ಅವರಿಗೆ ಐದು ವರ್ಷ ಇರುವಾಗಲೇ ಪೋಲಿಯೊ ಬಂದಿತ್ತು. ಅಲ್ಲಿಂದ ಇಲ್ಲಿಯವರೆಗೂ ಅವರು ವೀಲ್‌ಚೇರ್‌ನಲ್ಲಿಯೇ ಇದ್ದರು. ರಕ್ತನಾಳದ ಊತ, ತೀವ್ರ ರಕ್ತದೊತ್ತಡ ಸೇರಿದಂತೆ ಹಲವು ವಿಧದ ರೋಗಗಳಿಂದ ಬಳಲುತ್ತಿದ್ದರು. ನರಮಂಡಲ ಸಂಬಂಧಿತ ಕಾಯಿಲೆಯೂ ಅವರಿಗಿತ್ತು. ಇದೇ ಕಾರಣಕ್ಕೆ ಕಾಲುಗಳು ಸ್ವಾಧೀನ ಕಳೆದುಕೊಂಡಿದ್ದವು ಮತ್ತು ದೇಹದ ಶೇ 90ರಷ್ಟು ಭಾಗ ಅಂಗವೈಕಲ್ಯಕ್ಕೆ ಒಳಗಾಗಿತ್ತು.

ಬಹುವಿಧದ ಆರೋಗ್ಯ ಸಮಸ್ಯೆಯ ಕಾರಣಕ್ಕೆ ಸಾಯಿಬಾಬಾ ಅವರ ಕುಟುಂಬದವರು ಪದೇ ಪದೇ ಜಾಮೀನು ಕೋರಿ ಅರ್ಜಿ ಸಲ್ಲಿಸುತ್ತಲೇ ಇದ್ದರು. ಜೈಲುವಾಸದ ಸಂದರ್ಭದಲ್ಲಿ ಅವರ ಆರೋಗ್ಯ ಮತ್ತಷ್ಟು ಕ್ಷೀಣಿಸಿತ್ತು.

ನಿಧನ ವಾರ್ತೆ

ಎಂ. ಚನ್ನೇಗೌಡ

ಬೆಂಗಳೂರು: ಮಂಜುನಾಥನಗರದ ನಿವಾಸಿ ಎಂ. ಚನ್ನೇಗೌಡ (59) ಶುಕ್ರವಾರ ನಿಧನರಾದರು. ಇವರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.



ಚನ್ನೇಗೌಡ ಅವರು ದಿ ಪ್ರಿಂಟರ್ಸ್ ಮೈಸೂರು ಲಿಮಿಟೆಡ್‌ನ ಉತ್ಪಾದನಾ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು.

ಮಂಡ್ಯ ಜಿಲ್ಲೆಯ ನಾಗಮಂಗಲದ ಅಲಪಳ್ಳಿಯ ಗ್ರಾಮದಲ್ಲಿ ಶನಿವಾರ ಚನ್ನೇಗೌಡ ಅವರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂದ ಸದಸ್ಯರು ತಿಳಿಸಿದ್ದಾರೆ.

ಜೆ.ಪಿ.ನಗರ: ತೆರವಾಗದ ಹೂಳು, ಸಮಸ್ಯೆ

ಚರಂಡಿಯಿಂದ ತೆಗೆದ ಹೂಳನ್ನು ಪಕ್ಕದಲ್ಲೇ ರಾಶಿ ಹಾಕಿರುವುದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆ.ಪಿ.ನಗರ ಏಳನೇ ಹಂತದ ಬ್ರಿಗೇಡ್ ಮಿಲೇನಿಯಂ ಆಸುಪಾಸಿನಲ್ಲಿ ಮಳೆನೀರು ಚರಂಡಿಗಳಿಂದ ಹೂಳನ್ನು ಹೊರತೆಗೆದು ಪಕ್ಕದಲ್ಲೇ ರಾಶಿ ಹಾಕಿ ಎರಡು ವಾರಗಳಿಂದ ಹಾಗೆಯೇ ಬಿಟ್ಟಿದ್ದು, ಅದು ಮತ್ತೆ ಚರಂಡಿಯನ್ನು ಸೇರುತ್ತಿದೆ.

ಬ್ರಿಗೇಡ್ ಮಿಲೇನಿಯಂ ವಸತಿ ಸಮುಚ್ಚಯದ ಹಿಂಭಾಗದ ರಸ್ತೆ ಚಿಕ್ಕದಾಗಿದೆ. ಚರಂಡಿಯಿಂದ ತೆಗೆದ ಹೂಳು ಈ ಚಿಕ್ಕ ರಸ್ತೆಯ 3-4 ಅಡಿ ಜಾಗವನ್ನು ಆಕ್ರಮಿಸಿಕೊಂಡಿದ್ದು, ವಾಹನಗಳ ಸಂಚಾರಕ್ಕೆ ಅಡ್ಡಿಯಾಗಿದೆ.

'ಮನೆಗಳಿಗೆ ಮಳೆ ನೀರು ನುಗ್ಗುವುದನ್ನು ತಡೆಯುವ ದೃಷ್ಟಿಯಿಂದ ಚರಂಡಿಯಿಂದ ಹೂಳನ್ನು ತೆಗೆಯಲಾಗುತ್ತಿದೆ. ಆದರೆ, ತೆಗೆದ ಹೂಳನ್ನು ಆಗಿಂದಾಗ್ಗೆ ವಿಲೇವಾರಿ ಮಾಡದಿರುವುದರಿಂದ, ಮತ್ತೆ ಅದೇ ಚರಂಡಿಗೆ ಸೇರುತ್ತಿದೆ. ಎಂದಿನಂತೆ ಮಳೆ ಬಂದಾಗ ನೀರು ರಸ್ತೆಯ ಮೇಲೆ ಹರಿದು ಮನೆಗಳಿಗೆ ನುಗ್ಗುತ್ತದೆ. ರಸ್ತೆಗಳಲ್ಲಿ ಪ್ರವಾಹ ಸ್ಥಿತಿ ನಿರ್ಮಾಣವಾಗುತ್ತದೆ' ಎಂದು ನಾಗರಿಕರು ಬೇಸರ ವ್ಯಕ್ತಪಡಿಸುತ್ತಾರೆ.

ಜೆ.ಪಿ.ನಗರದ ವಿವಿಧ ಬಡಾವಣೆಗಳಲ್ಲಿ ಚರಂಡಿಯಿಂದ ಹೂಳು ತೆಗೆಯುವ ಕೆಲಸ ನಡೆಯುತ್ತಿದೆ. ಎಲ್ಲೆಲ್ಲಿ ಚರಂಡಿ ಸ್ವಚ್ಛಗೊಳಿಸಲಾಗುತ್ತಿದೆಯೋ, ಅಲ್ಲೆಲ್ಲ ಇದೇ ಪರಿಸ್ಥಿತಿಯಿದೆ.

ವಿಖ್ಯಾತನಂದ ಸ್ವಾಮೀಜಿ ಸಲಹೆ • ಕಟ್ಟಡ ಕಾಮಗಾರಿಗೆ ಭೂಮಿ ಪೂಜೆ

'ಸಂಘಟನೆಯಾದರೆ ಸವಲತ್ತು ಲಭ್ಯ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಶೈಕ್ಷಣಿಕ, ಆರ್ಥಿಕ, ರಾಜಕೀಯ, ಸಾಮಾಜಿಕವಾಗಿ ಅಭಿವೃದ್ಧಿ ಸಾಧಿಸಲು ಈಡಿಗ ಸಮುದಾಯದವರು ಶ್ರಮಿಸಬೇಕು ಎಂದು ಸೋಲೂರು ಆರ್ಯಮಠದ ಪೀಠಾಧ್ಯಕ್ಷ ವಿಖ್ಯಾತನಂದ ಸ್ವಾಮೀಜಿ ಕರೆ ನೀಡಿದರು.

ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ ಮೊದಲ ಹಂತದಲ್ಲಿ ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ವತಿಯಿಂದ ನಿರ್ಮಿಸುತ್ತಿರುವ ಸಮುದಾಯ ಭವನ, ಉಚಿತ ವಿದ್ಯಾರ್ಥಿ ನಿಲಯ ಕಟ್ಟಡ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಈಡಿಗ ಸಮುದಾಯದ ಎಲ್ಲಾ ಪಂಗಡಗಳು ಒಂದಾಗದಿದ್ದರೆ ರಾಜಕೀಯ ಪಕ್ಷಗಳು ಗುರುತಿಸುವುದಿಲ್ಲ. ಸಂಘಟನೆಯಾದರೇ ಸಮಾಜಕ್ಕೆ ಸವಲತ್ತುಗಳು ಸಿಗಲಿವೆ ಎಂದರು.

ನಿಟ್ಟೂರು ನಾರಾಯಣಗುರು ಮಠದ ಪೀಠಾಧ್ಯಕ್ಷ ರೇಣುಕಾನಂದ ಸ್ವಾಮೀಜಿ ಮಾತನಾಡಿ, ಪ್ರತಿಯೊಂದು ಜಿಲ್ಲಾ ಕೇಂದ್ರಗಳಲ್ಲಿ ಉಚಿತ ವಿದ್ಯಾರ್ಥಿ ನಿಲಯ ಪ್ರಾರಂಭಿಸಿ, ಶಿಕ್ಷಣದಿಂದ ವಂಚಿತರಾಗಿರುವ ಮಕ್ಕಳಿಗೆ ಉನ್ನತ ಶಿಕ್ಷಣ ಹಾಗೂ ಉದ್ಯೋಗ ದೊರಕಿಸಿಕೊಡುವ ಮೂಲಕ ಸಮಾಜದ ಪ್ರಗತಿಗೆ ಶ್ರಮಿಸಿ ಎಂದು ಕಿವಿಮಾತು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ.ತಿಮ್ಮೇಗೌಡ, ನಗರದ ಕೇಂದ್ರ ಸ್ಥಳದಲ್ಲಿ ಅತ್ಯಾಧುನಿಕ ವಿದ್ಯಾರ್ಥಿ ನಿಲಯ, ಸಮುದಾಯ ನಿರ್ಮಿಸಲಾಗುತ್ತಿದೆ. ಸಮಾಜದ ಅಭಿವೃದ್ಧಿಗೆ ಅಧಿಕಾರಿಗಳು, ಉದ್ಯಮಿಗಳು, ಸಿರಿವಂತರು ಆರ್ಥಿಕ ಸಹಾಯ ಮಾಡಬೇಕು. ದೇಶ ಪ್ರಗತಿ ಕಾಣುತ್ತಿದ್ದರೂ ಈಡಿಗ ಸಮಾಜದವರು ಇಂದಿಗೂ ಶೈಕ್ಷಣಿಕ, ಆರ್ಥಿಕವಾಗಿ ಹಿಂದುಳಿದಿದೆ ಎಂದರು.

ಪ್ರಧಾನ ಕಾರ್ಯದರ್ಶಿ ಆರ್. ಪಿ. ಪ್ರಕಾಶ್ ಅವರು, ಐದು ಅಂತಸ್ತಿನ ಬೃಹತ್ ಸಮುದಾಯ ಭವನ, ಉಚಿತ ವಿದ್ಯಾರ್ಥಿ ನಿಲಯ ತಲೆ ಎತ್ತಲಿದ್ದು, ಆರ್ಥಿಕ ಸಂಕಷ್ಟದಲ್ಲಿರುವ ಈಡಿಗ, ಹಿಂದುಳಿದ ವರ್ಗಗಳ ಜನಾಂಗದವರು ಸ್ಪರ್ಧಾತ್ಮಕ ಪರೀಕ್ಷೆ ತೆಗೆದುಕೊಳ್ಳುವವರಿಗೆ, ವೈದ್ಯ, ಎಂಜಿನಿಯರಿಂಗ್, ಪದವಿ ಪಡೆದುಕೊಳ್ಳಲು ಸಹಕಾರಿಯಾಗಿದೆ ಎಂದರು.

ದೇವರಾಜು ಅರಸು ವೈದ್ಯಕೀಯ ಮಹಾವಿದ್ಯಾಲಯ ಅಧ್ಯಕ್ಷ ಜಿ.ಎಚ್. ನಾಗರಾಜು, ಸಮುದಾಯದ ಮುಖಂಡರಾದ ಟಿ.ಶಿವಕುಮಾರ್, ಪೋತರಾಜ್, ಮೋಹನ್ ದಾಸ್, ಟಿ. ಮುತ್ತರಾಜು, ಪದ್ಮರವೀಂದ್ರ, ಕೃಷ್ಣಮೂರ್ತಿ ಇದ್ದರು.

ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ವತಿಯಿಂದ ನಿರ್ಮಿಸುತ್ತಿರುವ ಸಮುದಾಯ ಭವನ, ಉಚಿತ ವಿದ್ಯಾರ್ಥಿ ನಿಲಯ ಕಟ್ಟಡ ಕಾಮಗಾರಿಗೆ ಭೂಮಿ ಪೂಜೆಯನ್ನು ಸೋಲೂರು ಆರ್ಯ ಮಠದ ಪೀಠಾಧ್ಯಕ್ಷ ವಿಖ್ಯಾತನಂದ ಸ್ವಾಮೀಜಿ ನೆರವೇರಿಸಿದರು. ನಿಟ್ಟೂರು ನಾರಾಯಣಗುರು ಮಠದ ಪೀಠಾಧ್ಯಕ್ಷ ರೇಣುಕಾನಂದ ಸ್ವಾಮೀಜಿ, ಎಂ.ತಿಮ್ಮೇಗೌಡ ಪಾಲ್ಗೊಂಡಿದ್ದರು

ಮರಾಠಿಯಲ್ಲಿ 'ಚಕ್ರವ್ಯೂಹ' ಯಕ್ಷಗಾನ ಮೋಡಿ

'ಚಕ್ರವ್ಯೂಹ' ಯಕ್ಷಗಾನದ ದೃಶ್ಯ ಚಿತ್ರಗಳು: ಪ್ರಶಾಂತ್ ಮಲ್ಯಾಡಿ

ನವೀನ್ ಕುಮಾರ್ ಜಿ.

ಯೋಗಶೀಲತೆಯ ಮೂಲಕ ಕರಾವಳಿಯ ಜನಪ್ರಿಯ ಕಲೆ ಯಕ್ಷಗಾನದ ಕಂಪನ್ನು ದೇಶ- ವಿದೇಶಗಳಲ್ಲಿ ಪಸರಿಸಿರುವ ಯಕ್ಷಗಾನ ಗುರು ಬನ್ನಂಜೆ ಸಂಜೀವ ಸುವರ್ಣ.

ಎಪ್ಪತ್ತರ ಹರೆಯದಲ್ಲೂ ಲವಲವಿಕೆಯಿಂದ ಧೀಂಗಿಣ ಕಲಿಸುವ ಸುವರ್ಣರ ಕಲಾಶಾಲೆ ಯಕ್ಷಸಂಜೀವ ಯಕ್ಷಗಾನ ಕೇಂದ್ರದಲ್ಲಿ ಈ ಪ್ರಸಂಗವು ಪರಿಪಕ್ವಗೊಂಡಿದೆ. ಹನ್ನೊಂದು ಮಂದಿ ಯುವತಿಯರು ಸೇರಿದಂತೆ ಇಪ್ಪತ್ತು ಕಲಾವಿದರ ತಂಡವು ಮರಾಠಿ ವೇದಿಕೆಯಲ್ಲಿ ಕರಾವಳಿಯ ಕಲೆಯ ಸೊಬಗನ್ನು ಉಣಬಡಿಸಿದೆ.

ಈ ಹಿಂದೆ ಮರಾಠಿಯಲ್ಲಿ ಯಕ್ಷಗಾನ ಪ್ರಯೋಗ ನಡೆದಿದ್ದರೂ ಹಾಡುಗಾರಿಕೆ ಮಾತ್ರ ಕನ್ನಡದಲ್ಲೇ ಇತ್ತು. ಸುವರ್ಣರ ಮರಾಠಿ ಯಕ್ಷಗಾನದಲ್ಲಿ ಹಾಡುಗಾರಿಕೆ ಕೂಡ ಮರಾಠಿ ಭಾಷೆಯಲ್ಲಿಯೇ ಇರುವುದು ವಿಶೇಷ. ಅದೂ ಛಂದೋಬದ್ಧವಾಗಿ!

'ಚಕ್ರವ್ಯೂಹ' ಯಕ್ಷಗಾನದ ದೃಶ್ಯ

ಮರಾಠಿ ಯಕ್ಷಗಾನಕ್ಕಾಗಿ ಸುವರ್ಣರು ಆಯ್ದುಕೊಂಡ ಪ್ರಸಂಗ 'ಚಕ್ರವ್ಯೂಹ' (ಅಭಿಮನ್ಯು ಕಾಳಗ). ಕಾರ್ತಿಕ್ ಭಟ್ ಅವರ ಭಾಗವತಿಕೆಯ ಸ್ವರ ಮಾಧುರ್ಯಕ್ಕೆ ಉಡುಪಿಯ ಕಲಾವಿದರ ನಾಟ್ಯ ಹಾಗೂ ಅರ್ಥಗಾರಿಕೆಗೆ ಮೊದಲ ಪ್ರದರ್ಶನದಲ್ಲೇ ಮರಾಠಿಗರು ಮರುಳಾಗಿದ್ದಾರೆ. ಮರಾಠಿ ಮಣ್ಣಲ್ಲಿ ಈಗಾಗಲೇ ಮೂರು ಪ್ರದರ್ಶನಗಳನ್ನು 'ಚಕ್ರವ್ಯೂಹ' ಕಂಡಿದೆ. ಮಹಾರಾಷ್ಟ್ರದ ಸಾವಂತ್‌ವಾಡಿ ಅರಮನೆಯಲ್ಲೂ ಪ್ರದರ್ಶನ ನೀಡಿದ್ದಾರೆ.

ಈ ಮೂಲಕ ಕನ್ನಡ, ತುಳು, ಹಿಂದಿ, ಮರಾಠಿ ಮತ್ತು ಸಂಸ್ಕೃತ ಭಾಷೆಗಳಲ್ಲಿ ಬಡಗುತಿಟ್ಟು ಯಕ್ಷಗಾನ ಮಾಡಿದ ಕೀರ್ತಿಗೆ ಸುವರ್ಣರು ಪಾತ್ರರಾಗಿದ್ದಾರೆ. ತಮ್ಮ ಹೊಸ ಪ್ರಯೋಗವನ್ನು ತಮ್ಮೂರಿನ ಜನರಿಗೂ ತೋರಿಸಲು ಉಡುಪಿಯಲ್ಲೂ ಈ ಯಕ್ಷಗಾನ ಪ್ರದರ್ಶನವನ್ನು ಹಮ್ಮಿಕೊಂಡಿದ್ದರು.

ಸುವರ್ಣರು ತಮ್ಮ ಯಕ್ಷಗಾನ ಕೇಂದ್ರದಲ್ಲಿ ಯಕ್ಷಾಸಕ್ತರಿಗೆ ಉಚಿತವಾಗಿ ತರಬೇತಿ ನೀಡುವ ಮೂಲಕ ಕಲೆಯನ್ನು ಉಳಿಸುವಲ್ಲಿ ಅವಿರತ ಶ್ರಮಿಸುತ್ತಿದ್ದಾರೆ. ಜೊತೆಗೆ ತಮ್ಮಲ್ಲಿ ಯಕ್ಷ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳ ಶಿಕ್ಷಣಕ್ಕೂ ನೆರವಾಗುತ್ತಿದ್ದಾರೆ.

'ಮರಾಠಿ ಯಕ್ಷಗಾನ ನೋಡಿ ಮಹಾರಾಷ್ಟ್ರದ ಹಲವರು, ನಮ್ಮಲ್ಲಿಗೆ ಬನ್ನಿ ಎಂದು ಕರೆದಿದ್ದಾರೆ. ಆದರೆ ಕಲೆಯನ್ನು ವಾಣಿಜ್ಯ ಸರಕಾಗಿಸಲು ನನಗೆ ಇಷ್ಟವಿಲ್ಲದ ಕಾರಣ ನಯವಾಗಿ ನಿರಾಕರಿಸಿದೆ' ಎನ್ನುತ್ತಾರೆ ಸಂಜೀವ ಸುವರ್ಣ.

ಹೆಮ್ಮೆಯ ವಿದೇಶಿ ಶಿಷ್ಯರು

ತಾವು ಯಕ್ಷಗಾನ ಕಲಿಸಿರುವ ವಿದೇಶಿ ಶಿಷ್ಯರ ಬಗ್ಗೆ ಸುವರ್ಣ ಅವರು ಹೆಮ್ಮೆಯಿಂದಲೇ ವಿವರಿಸುತ್ತಾರೆ. ಜರ್ಮನಿಯ ಕ್ಯಾಥರಿನ್ ಬೈಂಡರ್ ಇವರ ಬಳಿ ಮೂರು ವರ್ಷ ಯಕ್ಷಗಾನ ಕಲಿತಿದ್ದಾರೆ. ಯಕ್ಷಗಾನದಲ್ಲಿ ಪಿಎಚ್‌.ಡಿ.ಯನ್ನೂ ಪೂರೈಸಿದ್ದಾರೆ.

ಕ್ಯಾಥರಿನ್ 'ಅಭಿಮನ್ಯು ಕಾಳಗ' ಪ್ರಸಂಗವನ್ನು ಜರ್ಮನ್ ಭಾಷೆಗೆ ಭಾಷಾಂತರ ಮಾಡಿದ್ದಾರೆ. ಅಲ್ಲಿಯೂ ಯಕ್ಷಗಾನ ಕಲಿಸುವ ಕಾಯಕದಲ್ಲಿ ನಿರತರಾಗಿದ್ದಾರೆ ಎನ್ನುತ್ತಾರೆ ಸುವರ್ಣ.

ಫ್ರಾನ್ಸಿನ ಅನಿಟಾ ಹೆರ್ ಎಂಬುವವರು ತಮ್ಮಲ್ಲಿ ನಾಟ್ಯಾಭ್ಯಾಸ ಮಾಡಿ ಇದೀಗ ಫ್ರಾನ್ಸ್ ದೇಶದಲ್ಲಿ ಯಕ್ಷಗಾನ ಕಲೆಯನ್ನು ಪಸರಿಸುವ ಕೆಲಸ ಮಾಡುತ್ತಿರುವುದನ್ನೂ ಅವರು ಸ್ಮರಿಸಿದರು.

ಕರ್ನಾಟಕದ ಕಲೆಯೊಂದು ಗಡಿಗಾಡಿ ಪ್ರದರ್ಶನಗೊಂಡು ಮನಸೂರೆಗೊಂಡಿರುವುದು ಹೆಮ್ಮೆಯೇ ಸರಿ. ❖

'ಸಾರ್ಥಕತೆ ಮೂಡಿಸಿದ ಪ್ರಶಸ್ತಿ'

ಒಂದು ಕಾಲದಲ್ಲಿ ನಮ್ಮ ಸಮುದಾಯದವರಿಗೆ ಮೇಳದಲ್ಲಿ ಪಾತ್ರ ಮಾಡಲು ನಿಷೇಧವಿತ್ತು. ಒಮ್ಮೆ ಉಡುಪಿಯ ಗುಂಡಿಬೈಲಿನಲ್ಲಿ ಯಕ್ಷಗಾನವನ್ನು ಏರ್ಪಡಿಸಲಾಗಿತ್ತು. ನಾನು ಮಹಿಷಾಸುರನ ಪಾತ್ರ ಮಾಡಬೇಕೆಂದು ಸಂಘಟಕರು ಒತ್ತಾಯಿಸಿದರು. ನಾನು ಕೂಡ ಒಪ್ಪಿಕೊಂಡಿದ್ದೆ. ಆದರೆ ಯಕ್ಷಗಾನದ ಗಣಪತಿ ಪೂಜೆಯಲ್ಲಿ ಪಾಲ್ಗೊಳ್ಳುವ ಸಂದರ್ಭದಲ್ಲಿ ಕೆಳಜಾತಿಯವರು ಪಾತ್ರ ಮಾಡಿದರೆ ನಾವು ಪಾತ್ರ ಮಾಡುವುದಿಲ್ಲ ಎಂದು ಕಲಾವಿದರೊಬ್ಬರು ಅವಮಾನ ಮಾಡಿದರು. ಅಂದು ಪಾತ್ರ ಮಾಡದೆ ಮರಳಿದೆ. ಇಂದು ಕರ್ನಾಟಕ ಯಕ್ಷಗಾನ ಅಕಾಡೆಮಿಯ 2023ನೇ ಸಾಲಿನ ಪ್ರತಿಷ್ಠಿತ 'ಪಾರ್ಥಿಸುಬ್ಬ ಪ್ರಶಸ್ತಿ'ಗೆ ಪಾತ್ರನಾಗಿರುವುದು ಯಕ್ಷಗಾನದ ಜೊತೆ ಬದುಕಿದ ನನ್ನಲ್ಲಿ ಸಾರ್ಥಕತೆ ಮೂಡಿಸಿದೆ ಎಂದು ಸಂಜೀವ ಸುವರ್ಣ ಅವರು ಪ್ರಶಸ್ತಿಯ ಖುಷಿಯನ್ನೂ ಹಂಚಿಕೊಂಡರು.



ಬನ್ನಂಜೆ ಸಂಜೀವ ಸುವರ್ಣ

ಮರಾಠಿ ಯಕ್ಷಗಾನ ರೂಪುಗೊಂಡಿದ್ದು ಹೀಗೆ...

ಮಹಾರಾಷ್ಟ್ರದ ಸಾವಂತ್‌ವಾಡಿಯ ಸಾಹಿತಿ ವಿಜಯ ಘಟರ್‌ಪೇಕರ್ ಅವರು ಶಿವರಾಮ ಕಾರಂತರ ರಂಗ ಪ್ರಯೋಗಗಳಿಗೆ ಮನಸೋತು ಮಹಾರಾಷ್ಟ್ರದ ದಶಾವತಾರ ಕಲೆಯಲ್ಲೂ ಅಂತಹ ಪ್ರಯೋಗಗಳನ್ನು ಮಾಡಲು ಪ್ರಯತ್ನಿಸಿದವರು. ಯಕ್ಷಗಾನವನ್ನು ಮರಾಠಿಯ ಜನರಿಗೆ ಅರ್ಥವಾಗುವ ರೀತಿಯಲ್ಲಿ ಪ್ರದರ್ಶಿಸಬೇಕು ಎಂಬ ಹಂಬಲ ಬಹಳ ಕಾಲದಿಂದ ಅವರಲ್ಲಿತ್ತು. ಆದರೆ ಮೇಳದ ಕಲಾವಿದರಿಗೆ ಮರಾಠಿ ಕಲಿಸುವುದು ಸಾಧ್ಯವಾಗದ ಮಾತು ಎಂಬುದು ಅವರಿಗೆ ಗೊತ್ತಿತ್ತು. ಯಕ್ಷಗಾನವನ್ನು ಮರಾಠಿಯಲ್ಲಿ ಪ್ರದರ್ಶಿಸುವಂತೆ ಅವರು ಕೋವಿಡ್ ಕಾಲದಲ್ಲಿ ನನ್ನಲ್ಲಿ ಕೇಳಿಕೊಂಡಿದ್ದರು. ಆದರೆ ಆಗ ನನ್ನ ಬಳಿ ಯಕ್ಷಗಾನ ಕಲಿಯುತ್ತಿದ್ದ ಕಲಾವಿದರಿಗೆ ಮರಾಠಿ ಭಾಷೆಯನ್ನು ಕರಗತ ಮಾಡಿಕೊಳ್ಳಲು ಸಾಧ್ಯವಾಗದೆ ಅದು ನನೆಗುದಿಗೆ ಬಿದ್ದಿತ್ತು. ಈಚೆಗೆ ವಿಜಯ ಅವರು ನಮ್ಮ ಮನೆಗೆ ಬಂದಿದ್ದಾಗ ನಮ್ಮಲ್ಲಿ ಯಕ್ಷಗಾನ ಕಲಿಯುತ್ತಿರುವ ಹೆಣ್ಣುಮಕ್ಕಳನ್ನು ನೋಡಿ, ಇವರಿಂದ ಮರಾಠಿ ಯಕ್ಷಗಾನ ಮಾಡಿಸಬಹುದಾ ಎಂದು ಮತ್ತೆ ಕೇಳಿದರು. ನಾನು ಅದಕ್ಕೆ ಒಪ್ಪಿಕೊಂಡೆ. ಹಾಡುಗಳನ್ನು, ಪ್ರಸಂಗವನ್ನು ಮರಾಠಿಗೆ ತರ್ಜುಮೆ ಮಾಡಿ ಅದನ್ನು ಕನ್ನಡದಲ್ಲಿ ಬರೆಸಿ ಕೊಟ್ಟಿದ್ದರು. ಅಲ್ಲದೆ ನಮ್ಮ ಕೇಂದ್ರದ ಮಕ್ಕಳ ಮರಾಠಿ ಉಚ್ಚಾರವನ್ನು ಸಾಕಷ್ಟು ತಿದ್ದಿ, ತೀಡಿ ಅವರನ್ನು ಪರಿಪಕ್ವಗೊಳಿಸಿದ್ದರು. ನಾನು ನಾಟ್ಯಾಭ್ಯಾಸ ಮಾಡಿಸಿದೆ. ಹೀಗೆ ಮರಾಠಿ ಯಕ್ಷಗಾನ ರೂಪುಗೊಂಡಿತು ಎಂದು ಹೊಸ ಪ್ರಯೋಗಕ್ಕೆ ಒಡ್ಡಿಕೊಂಡ ಬಗೆಯನ್ನು ಸುವರ್ಣರು ವಿವರಿಸುತ್ತಾರೆ.

ಮೇಘಾಲಯದ ಖಾಸಿ ಹಿಲ್ಸ್‌ನ ದುರ್ಗಮ ದಾರಿಯಲ್ಲಿ

ಬೆಂಗಳೂರು - ಸಿಂಗಪುರ ಸೈಕಲ್ ಯಾನ

3ನೇ ಪುಟದಿಂದ...

ನನ್ನ ಉತ್ಸಾಹ ನೋಡಿ ಹಣ ಕೊಟ್ಟವರು, ಉಳಿದುಕೊಳ್ಳಲು ಸ್ಥಳ ಕೊಟ್ಟ ಹಲವು ಮಂದಿ ಇದ್ದಾರೆ. ವಿದೇಶಲ್ಲಿದ್ದಾಗ ಸಾಮಾಜಿಕ ಜಾಲತಾಣದಲ್ಲಿ ಪರಿಚಯವಾದ ಹಲವು ಮಂದಿ ಸಹಾಯ ಮಾಡಿದ್ದಾರೆ. ಸಿಂಗಪುರದಲ್ಲಿ ಕನ್ನಡದ ದಂಪತಿ ಗೋಪ್ರೊ ಕೊಡಿಸಿದರು. ಈಗ ಸಾಮಾಜಿಕ ಜಾಲತಾಣದಿಂದ ಬರುವ ಹಣವೇ ಆದಾಯ. ನಾನು ಹಲವು ಮಂದಿಯ ಋಣದಲ್ಲಿದ್ದೇನೆ' ಎಂದರು ಸುದರ್ಶನ್.

ಏಕಾಂಗಿ ಪಯಣ ಸುಲಭದಲ್ಲ

ಗುರುತು ಪರಿಚಯ ಇಲ್ಲದ ಊರಿನಲ್ಲಿ ಏಕಾಂಗಿಯಾಗಿ ತಿರುಗಾಡುವುದು, ಅಲ್ಲಿನ ವಾತಾವರಣಕ್ಕೆ ದೇಹವನ್ನು ಒಗ್ಗಿಸಿಕೊಳ್ಳುವುದು ಸುಲಭವಲ್ಲ. ಈ ಸವಾಲುಗಳ ಜೊತೆಯಲ್ಲೇ ಸುದರ್ಶನ್ ಪಯಣ ಸಾಗಿದೆ. ಒಮ್ಮೆ ಕರ್ನಾಟಕ ಗಡಿ ಸಮೀಪದ ಕೇರಳದ ರಾಣಿಪುರ ಬೆಟ್ಟದಿಂದ ಇಳಿಯುವಾಗ ಬ್ರೇಕ್ ಫೇಲ್ ಆಗಿ ಬಿದ್ದು ಕೇರಳದ ಅರಣ್ಯ ಇಲಾಖೆಯ ಸಿಬ್ಬಂದಿ ಆಸ್ಪತ್ರೆಗೆ ಸೇರಿಸಿದ್ದರು. ಗಾಯ ಹೆಚ್ಚಿನ ಪ್ರಮಾಣದಲ್ಲಿ ಆಗಿದ್ದರಿಂದ ಒಂದು ತಿಂಗಳ ವಿಶ್ರಾಂತಿ ತೆಗೆದುಕೊಳ್ಳಬೇಕಾಯಿತು. ಥಾಯ್ಲೆಂಡ್ ಪ್ರವೇಶದ ವೇಳೆ ಅಧಿಕಾರಿಗಳು ಲಂಚಕ್ಕೆ ಬೇಡಿಕೆ ಇಟ್ಟಿದ್ದು, ವಿಯೆಟ್ನಾಂನಿಂದ ಕಾಂಬೋಡಿಯಾಗೆ ತೆರಳುವ ವೇಳೆ ಎದುರಾದ ವಿಸಾ ಸಮಸ್ಯೆ, ಕ್ವಾಲಾಲಂಪುರದಲ್ಲಿ ಟೈರ್ ಸ್ಫೋಟಿಸಿದ್ದು, ಲಾವೋಸ್‌ನಲ್ಲಿ ಭಾರಿ ಸೆಖೆಯಿಂದಾಗಿ ರಾತ್ರಿ ಪೂರ್ತಿ ಸೈಕಲ್ ತುಳಿದಿದ್ದು, ಹಲವು ದೇಶಗಳಲ್ಲಿ ಹಣ ವಿನಿಮಯಕ್ಕಾಗಿ ಪರದಾಡಿದ್ದು, ಜ್ವರ ಬಂದು ಟೆಂಟ್‌ನಲ್ಲಿಯೇ ದಿನ ದೂಡಿದ್ದು, ಕೆಲವು ದೇಶಗಳಲ್ಲಿ ವಿಡಿಯೊ ಮಾನಿಟೈಸ್ ಆಗದೆ ಹಣಕ್ಕೆ ಪರದಾಡಿದ್ದು, ಸಸ್ಯಾಹಾರಿ ಮಾಂಸಾಹಾರ ತಿನ್ನಬೇಕಾಗಿ ಬಂದಿದ್ದು 'ಸಂಚಾರಿ'ಗೆ ಹಂಚಿಕೊಳ್ಳಲು ಅನುಭವಗಳ ಮೂಟೆಯೇ ಇದ್ದವು.

ಸುದರ್ಶನ್‌ಗೆ ಪ್ರವಾಸ ಜೀವನದ ಪಾಠ ಕಲಿಸಿದೆ. ದೃಷ್ಟಿಕೋನ ಬದಲಾಯಿಸಿದೆ. ಯೋಚನೆಗೆ ಹೊಸ ಹೊಳಪು ಬಂದಿದೆ. ಪೂರ್ವಗ್ರಹಗಳು ಮಾಯವಾಗಿವೆ. ಹತ್ತಾರು ಸ್ನೇಹಿತರನ್ನು ಕೊಟ್ಟಿದೆ. ಪ್ರಕೃತಿಯ ಒಡನಾಟ ಕಲಿಸಿದೆ. ಆತ್ಮತೃಪ್ತಿ ನೀಡಿದೆ. ಬದುಕುವ ಉಮೇದು ಹೆಚ್ಚಿಸಿದೆ. ಅಸಂಖ್ಯಾತ ಜನರ ಪ್ರೀತಿ ಕೊಟ್ಟಿದೆ. ಹೊಸ ಸೈಕಲ್ ಖರೀದಿ ಮಾಡುವ ಬಯಕೆಗೆ ಹಣದ ಸಮಸ್ಯೆ ಇದೆ. ಸವಾಲುಗಳು ಹಲವು ಇವೆ. ಸೈಕಲ್‌ನಲ್ಲಿಯೇ ವಿಶ್ವ ಸುತ್ತುವ ಯೋಜನೆಯೂ ಪ್ರಾರಂಭವಾಗಿದೆ.

ಬಾಲ್ಯದಲ್ಲಿನ ಸೈಕಲ್ ಮೋಹ, ಯೌವನದಲ್ಲಿ ಪ್ರತಿಭಟನೆ ಮತ್ತು ದೇಣಿಗೆ ಸಂಗ್ರಹದಂತಹ ಉದಾತ್ತ ಧ್ಯೇಯದ ಅಸ್ತ್ರವಾಗಿದ್ದು, ಸುದರ್ಶನ ಚಕ್ರ ತಿರುತ್ತಲೇ ಇದೆ. ❖

ಕಾಂಬೋಡಿಯಾದ ಅಂಕೋರ್ ವಾಟ್‌ನಲ್ಲಿ ಕನ್ನಡ ಧ್ವಜದೊಂದಿಗೆ

ಲಗೋರಿ ಆಡೋಣ ಬರ್ರಿ...

3ನೇ ಪುಟದಿಂದ...

ಸಾಮಾನ್ಯವಾಗಿ ಕೈಗೆ ಸಿಕ್ಕುವ ಚಪ್ಪಟೆಯಾದ ಅಂಗೈ ಅಗಲಕ್ಕಿಂತಲೂ ತುಸು ಚಿಕ್ಕದಾದ ಏಳು ಕಲ್ಲುಗಳನ್ನು ಒಂದರ ಮೇಲೆ ಒಂದರಂತೆ ಜೋಡಿಸಲಾಗುತ್ತದೆ. ಒಣಹುಲ್ಲಿನ ಉಂಡೆ, ಬಟ್ಟೆಯಲ್ಲಿ ಕಟ್ಟಿಗೆ ಪುಡಿ ತುಂಬಿ ಮಾಡಿದ ಚೆಂಡು ಅಥವಾ ಬಟ್ಟೆ ಚೂರುಗಳಿಂದ ತಯಾರಿಸಿದ ಚೆಂಡನ್ನು ಬಳಸಲಾಗುತ್ತಿತ್ತು. ಆದರೆ ಈಗ ಸರ್ವೇಸಾಮಾನ್ಯವಾಗಿ ಟೆನಿಸ್ ಚೆಂಡು ಅಥವಾ ಸಾಫ್ಟ್‌ಬಾಲ್ ಬಳಕೆಯಾಗುತ್ತಿದೆ.

ಅಲ್ಲದೇ ಈಗ ಕಲ್ಲುಗಳ ಬದಲು ಕಟ್ಟಿಗೆ ಅಥವಾ ಪ್ಲಾಸ್ಟಿಕ್ ಪ್ಲೇಟ್‌ಗಳನ್ನು ಜೋಡಿಸಲಾಗುತ್ತದೆ. ಇವು ಬೇರೆ ಬೇರೆ ಬಣ್ಣಗಳದ್ದಾಗಿರುತ್ತವೆ. ಸ್ಪರ್ಧಾತ್ಮಕವಾದ ಲಗೋರಿಯಲ್ಲಿ ಸ್ಪಷ್ಟ ನಿಯಮಾವಳಿಗಳನ್ನು ಮಾಡಲಾಗಿದೆ. ಅವುಗಳನ್ನು ಕಾಲಕಾಲಕ್ಕೆ ಪರಿಷ್ಕರಣೆಗೊಳಿಸಲಾಗುತ್ತಿದೆ.

'ಆಡುವವರಿಗೂ ಮತ್ತು ನೋಡುವವರಿಗೂ ಅಪ್ಪಟ ಮನರಂಜನೆ ನೀಡುವ ಆಟ ಇದು. ಜೊತೆಗೆ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯ ವೃದ್ಧಿಸುವಲ್ಲಿಯೂ ಸಹಕಾರಿ. ನಾವು ಕಳೆದ ಹಲವು ವರ್ಷಗಳಿಂದ ಬೆಂಗಳೂರಿನಲ್ಲಿ ಲಗೋರಿ ತರಬೇತಿ ಮತ್ತು ಸ್ಪರ್ಧೆಗಳನ್ನು ನಡೆಸುತ್ತಿದ್ದೇವೆ. ಬಹಳಷ್ಟು ಜನ ಸ್ವಯಂಪ್ರೇರಣೆಯಿಂದ ಬಂದು ಆಡುತ್ತಾರೆ. ಹಾಗಾಗಿ ಇದನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಕೊಂಡೊಯ್ಯಲು ಸಾಧ್ಯವಾಗುತ್ತಿದೆ. ಇನ್ನಷ್ಟು ಬೆಳೆಯುವ ಎಲ್ಲ ಅವಕಾಶಗಳೂ ಇವೆ' ಎಂದು ಕರ್ನಾಟಕ ಅಮೆಚೂರ್ ಲಗೋರಿ ಸಂಸ್ಥೆಯ ಕಾರ್ಯದರ್ಶಿ ರಾಜೇಶ್ ವಿಶ್ವಾಸ ವ್ಯಕ್ತಪಡಿಸುತ್ತಾರೆ.

ಸರ್ಕಾರಿ ಸಂಸ್ಥೆಗಳಲ್ಲಿ ಲಭಿಸುವ ಕ್ರೀಡಾ ಕೋಟಾ ಉದ್ಯೋಗ ಮತ್ತು ಸೌಲಭ್ಯಗಳು ಇನ್ನೂ ಲಗೋರಿಗೆ ಸಿಗುತ್ತಿಲ್ಲ. ಇದೇ ತರಹದ ನೆಲಮೂಲದ ಹಲವಾರು ಆಟಗಳು ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳೆದಿದ್ದರೂ ಯಾವುದೇ ಸೌಲಭ್ಯಗಳು ಸಿಗುತ್ತಿಲ್ಲ. ಮುಂದೊಂದು ದಿನ ಸಿಗಬಹುದು ಎಂಬ ಭರವಸೆಯೊಂದಿಗೆ ಆಟ ಮಾತ್ರ ಮುಂದುವರಿದಿದೆ. ❖

ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿರುವ 'ಕರ್ನಾಟಕ ಸಂಸ್ಕೃತಿ ವಿದ್ಯಾಪೀಠ ಶಾಲೆ'ಯ ಕ್ರೀಡಾಂಗಣದಲ್ಲಿ ಲಗೋರಿ ಆಟದ ಅಭ್ಯಾಸನಿರತ ಆಟಗಾರ್ತಿಯರು.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ತೆಳ್ಮಡಿ

ತೆಳ್ಮಡಿ (ನಾ). ಶುಭ್ರವಾದ ವಸ್ತ್ರ; ಸ್ವಚ್ಛವಾದ ಬಟ್ಟೆ

(ತೆಳ್ + ಮಡಿ)

ಶ್ರೀ ರಾಮಚಂದ್ರನೆಂಬ ಪ್ರೀತಿಯ ಹೊರೆಹೊತ್ತ ತುಂಬು ಗರ್ಭಿಣಿಯಾದ ಕೌಸಲ್ಯೆಯನ್ನು ವರ್ಣಿಸುವಾಗ ಅವಳು ಉಟ್ಟಿದ್ದ ಬೆಳ್ಳನೆ ಮುಗಿಲ ಹತ್ತಿಯ ಶುಭ್ರ ವಸ್ತ್ರವನ್ನು ಕವಿ 'ತೆಳ್ಮಡಿ' ಎಂಬ ಪದದಿಂದ ಚಿತ್ರಿಸಿದ್ದಾರೆ. ಅದು ಹಗುರ ಮತ್ತು ಸ್ವಚ್ಛ ಬಟ್ಟೆಗೆ ಅನುರೂಪವಾದ ನುಡಿ.

ಪೆರೆ ತುಂಬುವಂದದಲಿ ನವಮಾಸ ತುಂಬಿ ಬರೆ,
ಶ್ರೀರಾಮಚಂದ್ರನೆಂಬಕ್ಕರೆಯ ಹೊರೆಹೊತ್ತು,
ಬೆಳ್ದೆರೆಯ ಮುಗಿಲ ಹತ್ತಿಯ ತೆಳ್ಮಡಿಯನುಟ್ಟ
ಪೂರ್ಣಿಮಾ ರಜನಿಯಂತೆಸೆದಳಾ ಕೌಸಲ್ಯೆ,
ಗಂಭೀರ ಸೌಂದರ್ಯದಿಂ.

ಲೌಹಘೋಷ

'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಆಂಜನೇಯನು ಶಿಶಿರ ರಾತ್ರಿಯಲ್ಲಿ ಅಶೋಕವನವಿರುವ ಜಾಗವನ್ನು ಹುಡುಕುತ್ತಾ ಸೀತೆಯ ನೆಲೆ ಕಾಣದೆ ಪರಿತಪಿಸುತ್ತಾನೆ. ಮುಂದಿನದನ್ನು ಆಲೋಚಿಸುತ್ತ ನಿಂತಿರುತ್ತಾನೆ. ಆಗ ಕಿವಿಗೆ ಬೆಟ್ಟವನ್ನು ಏರಿ ಬರುತ್ತಿರುವ ಸೈನಿಕರ ಕ್ರಮ ನಡಿಗೆಯ ಲೋಹದ ಸದ್ದು ಕೇಳಿ ಬರುತ್ತದೆ. ಕುವೆಂಪು ಅದನ್ನು 'ಲೋಹಘೋಷ' ಪದ ರೂಪಿಸಿ ಚಿತ್ರಿಸಿದ್ದಾರೆ.

'ಅಂತು ತನ್ನೊಳಗೆ ತಾನ್ ಮುಂದನ್
ಆಲೋಚಿಸುತೆ ನಿಶ್ಚಲಂ ನಿಂದ ಹನುಮನ ಕಿವಿಗೆ
ಭೋಂಕನೆಯೆರಗಿದತ್ತು ಜಗತಿ ಶೈಲವನಡರಿ
ಪುಡುಕಿ ಬರ್ಪಿರುಳ ಕಾವಲ್ಪಡೆಯ ನೈಶಚರ
ಸೈನಿಕರ ಸಕ್ರಮದ ಸಮುದಾಯ ಪದಹತಿಯ
ಲೌಹ ಘೋಷಂ'.

ಮುನ್ನೋಟ 13-10-2024 ರಿಂದ 19-10-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ನಿಮ್ಮ ಮನಸ್ಸು ನಿಮ್ಮ ಚಟುವಟಿಕೆಗಳ ಮೇಲೆ ಕೇಂದ್ರೀಕೃತವಾಗಿರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯಂತೆ ಇರುತ್ತದೆ. ಬಂಧುಗಳ ಜೊತೆ ಕಟುವಾಗಿ ಮಾತನಾಡುವುದು ಬೇಡ. ಆಸ್ತಿ ವಿಚಾರಗಳಲ್ಲಿ ಸ್ವಲ್ಪ ಮುನ್ನಡೆ ಸಾಧಿಸಬಹುದು. ಅಧ್ಯಯನಶೀಲರಿಗೆ ಅಧ್ಯಯನದಲ್ಲಿ ಹಿನ್ನಡೆಯಾಗಬಹುದು. ಕಣ್ಣಿನ ತೊಂದರೆ ಅಥವಾ ತಲೆ ತಲೆನೋವು ಇರುವವರು ಹೆಚ್ಚು ಎಚ್ಚರವಹಿಸಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಗುರುತರವಾದ ಜವಾಬ್ದಾರಿಗಳನ್ನು ಸರಿಯಾಗಿ ನಿರ್ವಹಣೆಮಾಡುವಿರಿ. ಆದಾಯವು ಸ್ವಲ್ಪ ಕಡಿಮೆ ಇರುತ್ತದೆ. ಮಾತನಾಡುವಾಗ ಮೃದುಭಾಷೆ ಇರಲಿ. ಕೃಷಿಯಿಂದ ಹೆಚ್ಚು ಆದಾಯವಿರುತ್ತದೆ. ರಿಯಲ್ ಎಸ್ಟೇಟ್ ದಲ್ಲಾಳಿಗಳಿಗೆ ಹೆಚ್ಚಿನ ಲಾಭವಿರುತ್ತದೆ. ರಕ್ತ ಸಂಬಂಧಿ ದೋಷಗಳಿರುವವರು ಹೆಚ್ಚು ಎಚ್ಚರವಹಿಸಿ. ಬಂಧುಗಳಿಗೆ ಹಣ ನೀಡಿದರೆ ಮರಳಿ ಬರುವುದು ಕಷ್ಟ. ಹೊಸ ವ್ಯವಹಾರಗಳಲ್ಲಿ ನಷ್ಟವಾಗಬಹುದು

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಬಲ ಉಳ್ಳವರಿಗೆ ಬೇಡಿಕೆ ಹೆಚ್ಚುತ್ತದೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ಬಂಧುಗಳಿಂದ ನಿರೀಕ್ಷಿತ ಸಹಕಾರ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ಪ್ರಸೂತಿ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ. ಮಹಿಳೆಯರ ಜೊತೆಗೆ ಹಣಕಾಸಿನ ವ್ಯವಹಾರಗಳು ಬೇಡ. ಸಂಗಾತಿಗಾಗಿ ಸ್ವಲ್ಪ ಹಣ ಖರ್ಚಾಗುತ್ತದೆ. ದೂರವಿದ್ದ ಹಿರಿಯರು ಹತ್ತಿರವಾಗುವ ಸಾಧ್ಯತೆಗಳಿವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಮನಸ್ಸಿನಲ್ಲಿ ಸ್ವಲ್ಪ ಸಮಾಧಾನ ಇರುತ್ತದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ನಿಮ್ಮ ಪರಿಶ್ರಮದಿಂದ ಆದಾಯವನ್ನು ಹೆಚ್ಚು ಮಾಡಿಕೊಳ್ಳಬಹುದು. ಭೂಮಿಯ ವ್ಯವಹಾರಗಳಲ್ಲಿ ಮುಂದುವರೆಯಬಹುದು. ಈಗ ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ದೊರೆಯುವ ಸಾಧ್ಯತೆ ಇದೆ. ಸಂಗಾತಿಯ ಜೊತೆ ಕೆಲವೊಂದು ವಿಷಯಗಳಿಗೆ ಮನಸ್ತಾಪವಾಗಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಬಹಳ ಶ್ರಮ ಜೀವಿಯಂತೆ ಕಾಣಿಸಿಕೊಳ್ಳಲು ಯತ್ನಪಡುವಿರಿ. ಆದಾಯವು ಈಗ ನಿಮಗೆ ತೃಪ್ತಿ ತರುತ್ತದೆ. ನಿಮ್ಮ ವ್ಯಾವಹಾರಿಕ ಬುದ್ಧಿಯನ್ನು ಬಳಸಿ ಬಂಧುಗಳ ಸಹಕಾರವನ್ನು ತೆಗೆದುಕೊಳ್ಳುವಿರಿ. ಹಿರಿಯರ ಆಸ್ತಿಯನ್ನು ಮಾರಿ ಲಾಭ ಪಡೆಯಬಹುದು. ವೃತ್ತಿ ಸಂಬಂಧಿತ ಪರೀಕ್ಷೆಗಳನ್ನು ತೆಗೆದುಕೊಳ್ಳಬಹುದು. ತಾಯಿ ಆರೋಗ್ಯಕ್ಕೆ ಸ್ವಲ್ಪ ಹಣ ಖರ್ಚಾಗುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಧರ್ಮಕಾರ್ಯಗಳ ಬಗ್ಗೆ ಒಲವು ಹೆಚ್ಚಾಗುತ್ತದೆ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ನಿಮ್ಮ ಚಟುವಟಿಕೆಗಳಿಂದ ಮಹಿಳೆಯರನ್ನು ಆಕರ್ಷಿಸಿ ಆದಾಯ ಹೆಚ್ಚು ಮಾಡಿಕೊಳ್ಳಲು ಪ್ರಯತ್ನ ಪಡುವಿರಿ. ಸಂಗಾತಿಗೆ ಹಿರಿಯರ ಆಸ್ತಿಯಿಂದ ಲಾಭವಾಗುತ್ತದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಏಳಿಗೆಯನ್ನು ಕಾಣಬಹುದು. ಕೆಲವು ರಾಜಕೀಯ ನಾಯಕರಗಳಿಗೆ ಸಾಲದ ಹೊರೆ ಹೆಚ್ಚಾಗುವ ಸಾಧ್ಯತೆಗಳಿವೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಸಂಗಾತಿಯ ಜೊತೆಗೂಡಿ ಕೆಲ ವ್ಯವಹಾರಗಳನ್ನು ಮಾಡಿ ಆದಾಯ ಹೆಚ್ಚಿಸಿ ಕೊಳ್ಳುವಿರಿ. ಲಲಿತ ಕಲೆಯನ್ನು ಅಭ್ಯಾಸ ಮಾಡುವವರಿಗೆ ಹೆಚ್ಚಿನ ಯಶಸ್ಸಿರುತ್ತದೆ. ನಿಮ್ಮ ಕೆಲವೊಂದು ವಿವಾದಗಳು ಹಿರಿಯರನ್ನು ಸ್ವಲ್ಪ ಮುಜುಗರಕ್ಕೆ ಈಡು ಮಾಡುತ್ತವೆ. ಕೃಷಿಯಲ್ಲಿ ಹೆಚ್ಚು ಆಸಕ್ತಿ ತೋರುವಿರಿ. ವಿದೇಶಿ ಕಂಪನಿಗಳಲ್ಲಿ ಹೂಡಿದ ಹಣ ಮೋಸವಾಗಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಆದಾಯದಲ್ಲಿ ಸುಧಾರಣೆಯನ್ನು ಕಾಣಬಹುದು. ನಿಮ್ಮ ಕೆಲಸ ಕಾರ್ಯಗಳಿಗೆ ತಾಯಿಯ ಸಹಕಾರ ಸಂಪೂರ್ಣವಾಗಿ ಸಿಗುತ್ತದೆ. ಕೃಷಿಯ ಬಗ್ಗೆ ಅತಿಯಾದ ಆಸಕ್ತಿ ಬೆಳೆದು, ಅದರಲ್ಲಿ ಹೆಚ್ಚು ಸಾಧಿಸಲು ಮುನ್ನುಗ್ಗುವಿರಿ. ಕೆಲವರ ವಿದೇಶಿ ಓದಿನ ಹಂಬಲ ಈಗ ಈಡೇರುತ್ತದೆ. ಹರಿತವಾದ ವಸ್ತುಗಳನ್ನು ಉಪಯೋಗಿಸುವಾಗ ಎಚ್ಚರದಿಂದಿರಿ. ಸಂಬಂಧಿಕರಿಂದ ಮೋಸ ಹೋಗುವ ಸಾಧ್ಯತೆ ಇದೆ ಎಚ್ಚರ ವಹಿಸಿ. ಸಂಗಾತಿಯಿಂದ ಧನ ಸಹಾಯವನ್ನು ನಿರೀಕ್ಷೆ ಮಾಡಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಆದಾಯವು ನಿಮ್ಮ ನಿರೀಕ್ಷೆಯನ್ನು ತಲುಪಬಹುದು. ನಿಮ್ಮ ವಿರುದ್ಧ ನಿಲ್ಲುವ ಶತ್ರುಗಳನ್ನು ಅಲ್ಲೇ ಮಟ್ಟ ಹಾಕಬಹುದು. ವಿದೇಶಿ ವ್ಯವಹಾರ ಮಾಡುವವರಿಗೆ ಆದಾಯ ಹೆಚ್ಚುತ್ತದೆ. ಸೈನ್ಯದಲ್ಲಿರುವವರಿಗೆ ಹೆಚ್ಚಿನ ಸ್ಥಾನ ಸಿಗುವ ಸಾಧ್ಯತೆಗಳಿವೆ. ಎಲೆಕ್ಟ್ರಾನಿಕ್ಸ್ ಓದುತ್ತಿರುವವರಿಗೆ ಪ್ರಗತಿ ಇರುತ್ತದೆ. ಉದರ ಸಂಬಂಧಿ ದೋಷಗಳು ಮನೆಮದ್ದಿನಿಂದ ಸರಿ ಹೋಗುತ್ತವೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಸಾಧಿಸುವ ಛಲ ಮೈದುಂಬಿರುತ್ತದೆ. ಆದಾಯ ಕಡಿಮೆ ಇದ್ದರೂ ನಿರ್ವಹಣೆ ಸರಿಯಾಗಿರುತ್ತದೆ. ನಿಮ್ಮ ಕಾರ್ಯಗಳಿಗೆ ಅಡ್ಡಿಪಡಿಸುವವರಿಗೆ ಎಚ್ಚರಿಕೆ ನೀಡುವಿರಿ. ಭೂಮಿ ವ್ಯವಹಾರದಲ್ಲಿ ಲಾಭವಿಲ್ಲದಿದ್ದರೂ ನಷ್ಟವಿಲ್ಲ. ಮಕ್ಕಳಲ್ಲಿ ಉತ್ತಮವಾದ ಪ್ರಗತಿಯನ್ನು ಕಾಣಬಹುದು. ಕೃಷಿಯಿಂದ ಲಾಭವಿಲ್ಲದಿದ್ದರೂ ನಷ್ಟವಿಲ್ಲ. ಬಂಧುಗಳೊಡನೆ ವ್ಯವಹಾರ ಮಾಡುವಾಗ ಸಾಕಷ್ಟು ಎಚ್ಚರವಾಗಿರಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಎಷ್ಟೇ ಒತ್ತಡ ಬಂದರೂ ಹಿರಿಯರು ನ್ಯಾಯಮಾರ್ಗವನ್ನು ಬಿಡುವುದಿಲ್ಲ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ವಿದೇಶಿ ವ್ಯವಹಾರ ಮಾಡುವವರಿಗೆ ಲಾಭವಿರುತ್ತದೆ. ನಿಮ್ಮ ಕೆಲಸಕಾರ್ಯಗಳಿಗೆ ಬಂಧುಗಳಿಂದ ಅಡಿ ಬಂದರೂ ಅದು ನಿಮಗೆ ವರವಾಗಿ ಪರಿಣಮಿಸುತ್ತದೆ. ಭೂಮಿ ಮೇಲೆ ಹಣ ಹೂಡುವುದು ಲಾಭದಾಯಕವಾಗಿರುತ್ತದೆ. ಕೃಷಿ ಉತ್ಪನ್ನಗಳನ್ನು ಮಾರುವವರಿಗೆ ಲಾಭ ಹೆಚ್ಚುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಅತಿಯಾದ ಸ್ವಾಭಿಮಾನ ನಿಮ್ಮನ್ನು ಆವರಿಸಿರುತ್ತದೆ. ನಿಮ್ಮ ಮಾತಿನಿಂದಲೇ ನಿಮಗೆ ಅಪಕೀರ್ತಿ ಬರುವ ಸಾಧ್ಯತೆ ಇದೆ. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಹಿರಿಯರ ಮೂಲಕ ಕೆಲವೊಂದು ಸಮಸ್ಯೆಗಳನ್ನು ಈಗ ಬಗೆಹರಿಸಿಕೊಳ್ಳಲು ಪ್ರಯತ್ನ ಮಾಡುವಿರಿ. ಕೃಷಿಭೂಮಿ ಕೊಳ್ಳುವ ಯೋಗವಿದೆ. ವಿದ್ಯಾರ್ಥಿಗಳಿಗೆ ಹೆಚ್ಚು ಫಲಿತಾಂಶ ಪಡೆಯುವ ಯೋಗವಿದೆ.

ಪದಬಂಧ 2862



ಮೇಲಿನಿಂದ ಕೆಳಕ್ಕೆ

1. ವಾಗ್ವಿದ್ಯಾ ಪ್ರವಾಹದ ಒಡತಿ ಈಕೆ 4
2. ಮತ್ತೆ ಮಾಡುವ ಬಿನ್ನಹ 5
3. ಕಣ್ಣುಗಳಲ್ಲೇ ಬಯಕೆಯನ್ನು ಬಿಂಬಿಸುವ ಚೆಲುವೆ 5
4. ನೀತಿಯ ಜೊತೆ ಅನುಗುಣವಾಗಿ ಬರುವ ಸತ್ಯಸಂಧತೆ 4
7. ಹಣದೊಡತಿಯ ಪೂಜಾ ಮಂದಿರ 5
8. ಇದು ಸತ್ಯವಾದ ವಿಷಯ 5
10. ರಾಜನಿಗಿರುವ ಕದಲದ ಗಹನ ಚರ್ಯೆ 5
12. ನಮ್ಮ ದೇಶವಾಸಿಗಳ ಸಂಖ್ಯೆ ಎಣಿಸುವ ಪ್ರಕ್ರಿಯೆ 5
13. ಅಂಧಕಾರವನ್ನು ಹೊಡೆದೋಡಿಸುವ ಶಿವ 5
14. ಕೊಲ್ಲೂರಿನ ದೇವತೆ ಮಾತಿಗೂ ನಿಲುಕದವಳು 4
16. ಎಲ್ಲರೂ ಒಂದೇ ಎಂಬ ತತ್ವಾಧಾರಿತ ಆಂತರ್ಯ ಚಿಂತನೆ 4

ಎಡದಿಂದ ಬಲಕ್ಕೆ

1. ಸಪ್ತಸ್ವರಗಳಲಿ ಮೊದಲ ನಾಲ್ಕು 4
3. ಕಾತ್ಯಾಯನ ಮಗಳಾದ ದುರ್ಗಿ 4
5. ಮಹಾ ಶಿವ ಕೂಡಿದ ಸ್ಥಳವೇ ಇದು 5
6. ಶನಿಕಾಟ ತಪ್ಪಿಸಿಕೊಳ್ಳಲು ಎಳ್ಳಿನ ಕೊಡುಗೆ 4
9. ಮೊದಲು ಹೇಗಿತ್ತೋ ಅದೇ ಅವಸ್ಥೆ 4
11. ಪ್ರಪಂಚಕ್ಕೇ ಜನ್ಮಕೊಟ್ಟವಳು 5
12. ಪ್ರಜಾಪ್ರವಾಹ ಸಮುದ್ರದಂತಾಗಿದೆ 5
14. ಉದ್ಯಮದ ಆರಂಭಕ್ಕೆ ತೊಡಗಿಸುವ ಬಂಡವಾಳ 4
15. ಅನೇಕ ದ್ರವ್ಯಗಳ ಬೆರೆಕೆ 4
17. ದೇವ, ರಾಕ್ಷಸ, ಮಾನವರ ಗುಂಪುಗಳು ಒಟ್ಟಾಗಿದೆ 5
18. ಚಿಕ್ಕದಾದ ಹಾವಿನ ಹೆಡೆಯಂತಿರುವ ಒಡವೆ 4
19. ನಾಗಾಲಿಯ ಮೇಲೆ ದೇವರ ವಿಜೃಂಭಿತ ಮೆರವಣಿಗೆ 4

ಪದಬಂಧ ಉತ್ತರ -2861

ಮೇಲಿಂದ ಕೆಳಕ್ಕೆ

1.ಅಜರಾಮರ 2.ಮಾನಹರಣ 3.ನರಮಂಡಲ 4.ಜಗನ್ಮೋಹನ 5.ನುಡಿನಮನ 6. ಗಣಕಯಂತ್ರ 11.ಮಜ್ಜನ 13.ಗುಗ್ಗರಿ 15.ಕ್ಷಣಿಕ 16.ಮಹಾಮಹಿಮ 17. ವಿಕಟಕವಿ 18.ವಾಣಿವಿಲಾಸ 19.ಜನಸಮೂಹ 20.ಸಹಜಭಾವ 21.ಲಕ್ಷವಂದನ

ಎಡದಿಂದ ಬಲಕ್ಕೆ

1. ಅಸಮಾಧಾನ 4.ಜನಾನುರಾಗ 7.ರಥಾಂಗ 8.ರಗಡ 9.ಹನುಮ 10.ರಮಣ 12.ಲಗುನ 14.ನಕ್ಷತ್ರ 16.ಮನವಿ 18.ವಾರಿಜ 20.ಸಕಲ 22.ಕಲ್ಯಾಣಿ 23.ನಸಹ 24.ವಿರಸ 25.ಮನೋವಿಲಾಸ 26.ಹರ್ಷವರ್ಧನ

ತಾಯಿಫ್‌ನ ಗುಲಾಬಿ ಉತ್ಸವ

ಗುಲಾಬಿಯ ಪಕಳೆಗಳಿಂದ ಮಾಡಿದ ಸುಗಂಧದ್ರವ್ಯಗಳು

ಚಿತ್ರಗಳು: ರಹಮತ್ ತರೀಕೆರೆ

ಅರೇಬಿಯಾಕ್ಕೆ ಯಾತ್ರಾರ್ಥಿ ವೀಸಾದ ಮೇಲೆ ಹೋದರೆ ನಿಗದಿಪಡಿಸಿದ ಜಾಗಗಳಿಗೆ ಹೊರತು ಬೇರೆಡೆ ಹೋಗಲು ಅವಕಾಶ ಕಡಿಮೆ. ಕುಟುಂಬ ಭೇಟಿಯ ವೀಸಾದಲ್ಲಿ ಹೋದವರು ದೇಶದೆಲ್ಲೆಡೆ ಪಯಣಿಸಲು ಅವಕಾಶವಿದೆ. ಲೇಖಕರು ಹೋಗಿದ್ದು ರಿಯಾದ್‌ಗೆ. ಆದರೆ ಹೆಚ್ಚು ದಿನಗಳನ್ನು ಕಳೆದಿದ್ದು ತಾಯಿಫ್ ನಗರದಲ್ಲಿ. ಈ ನಗರ ಹಲವು ಕಾರಣಗಳಿಂದ ಪ್ರಸಿದ್ಧ.

ರಹಮತ್ ತರೀಕೆರೆ

ಅರೇಬಿಯಾದ ಪ್ರಮುಖ ನಗರಗಳಲ್ಲಿ ಒಂದಾದ ತಾಯಿಫ್ ಹಲವು ಕಾರಣಗಳಿಂದ ಪ್ರಸಿದ್ಧ. ಮೊದಲನೆಯದಾಗಿ ಇದೊಂದು ಯಾತ್ರಾಸ್ಥಳ. ಇಲ್ಲಿ ಪೈಗಂಬರ್ ಕಟ್ಟಿಸಿದರು ಎನ್ನಲಾದ ಮಸೀದಿಯಿದ್ದು, ಥಕ್ಕನೆ ಹಂಪಿ ಮಂಟಪದಂತೆ ತೋರುತ್ತದೆ. ಹಜ್‌ಯಾತ್ರೆಗೆ ಬರುವ ಯಾತ್ರಿಕರು ತಾಯಿಫಾಗೂ ಬಂದು ಪ್ರವಾದಿಗಳ ಕಾಲದ ಸ್ಮಾರಕಗಳನ್ನು ಶ್ರದ್ಧೆಯಿಂದ ನೋಡುವರು. ಮೆಕ್ಕಾದಿಂದ 80 ಕಿಲೊಮೀಟರ್ ಫಾಸಲೆಯಲ್ಲಿರುವ ತಾಯಿಫ್‌ಗೆ ಪ್ರವಾದಿಗಳು ಹಲವು ಸಲ ಬಂದಿದ್ದರು. ಅವರು ಒಂಟೆಗಳ ಮೇಲೆ ಮಕ್ಕಾದಿಂದ ತಾಯಿಫಿಗೆ ಕಡಿದಾದ ಬೆಟ್ಟಗಳನ್ನೇರಿ ಬರುತ್ತಿದ್ದ ಒಂಟೆಹಾದಿಯ ಕೆಲವು ಭಾಗಗಳನ್ನು ಈಗಲೂ ಉಳಿಸಿಕೊಳ್ಳಲಾಗಿದೆ.

ಎರಡನೆಯದು-ತಾಯಿಫ್ ಎತ್ತರದ ಬೆಟ್ಟ ಪ್ರದೇಶದಲ್ಲಿದ್ದು ತಂಪು ಹವಾಮಾನದಿಂದ ಕೂಡಿರುವುದು. ಅರಬಸ್ಥಾನದ ಇತರೆ ನಗರಗಳು ಮರುಭೂಮಿ ತಾಪದಲ್ಲಿ ಬೇಯುವಾಗ ತಾಯಿಫ್ ತಣ್ಣಗಿರುತ್ತದೆ. ಇಲ್ಲಿನ ಕಾಡುಬೆಟ್ಟಗಳು ಅರೇಬಿಯಾ ಮರುಭೂಮಿ ನಾಡು ಎಂಬ ಗ್ರಹಿಕೆಯನ್ನೇ ಕದಲಿಸುತ್ತವೆ. ನಾವಿದ್ದ ಮನೆ ವಂಕಿಯಂತೆ ಬಾಗಿದ ಬೆಟ್ಟವೊಂದರ ತಪ್ಪಲಿನೊಳಗಿತ್ತು. ಮನೆಯೆದುರು ಹಾದುಹೋಗಿದ್ದ ರಿಯಾದ್-ಮಕ್ಕಾ ಹೈವೇ ದಾಟಿದರೆ ಬೆಟ್ಟದ ಬುಡ. ಆ ಬೆಟ್ಟದಲ್ಲಿ ಒಂಟೆಗಳು ಸದಾ ಮೇಯುತ್ತಿದ್ದವು. ನಾನು ಅಲ್ಲಿದ್ದಾಗ ಬೆಟ್ಟಗಳನ್ನು ಏರಿದೆ. ಬೆಟ್ಟಸಾಲಿನ ಕಣಿವೆ ತಪ್ಪಲುಗಳಲ್ಲಿ ಹರಡಿಕೊಂಡಿರುವ ನಗರದಲ್ಲಿ ರೆಸಾರ್ಟುಗಳಿವೆ. ಬೇಸಗೆಯಲ್ಲಿ ಅರಬ್ ಅನುಕೂಲಸ್ಥರು ತಾಯಿಫಿನ ಇಲ್ಲಿನ ಹೋಂಸ್ಟೇಗಳಿಗೆ ಧಾವಿಸುವರು. ನಾವೊಂದು ದಿನ ಅರೇಬಿಯಾದ ಎತ್ತರದ ಬೆಟ್ಟವಾದ ಅಲ್‌ಶಫಾಗೆ ಹೋದೆವು. ಸಂಜೆಹೊತ್ತಿನ ಅಲ್ಲಿನ ಗಡಗಡ ಥಂಡಿಯನ್ನು ತಡೆಯಲಾರದೆ ಗಡಿಬಿಡಿಯಲ್ಲಿ ಕೆಳಗಿಳಿದು ಬಂದೆವು. ಈ ಸೀಮೆಯ ಬೆಟ್ಟಗಳ ಮೇಲೆ ಕುರುಚಲಿನಂತಹ ಕಾಡು. ಪರ್ಶಿಯನ್ ಕೊಲ್ಲಿಯಲ್ಲಿರುವ ದಮಾಂ ನಗರದಿಂದ ಹಿಡಿದು ತಾಯಿಫಿನ ತನಕ ಸಾವಿರ ಕಿಲೊಮೀಟರ್ ಮರುಭೂಮಿಯಲ್ಲಿ ಹಸಿರಿಲ್ಲದ ಬೋಳುಗುಡ್ಡಗಳನ್ನೇ ನೋಡಿ ದಣಿದಿದ್ದ ನಮಗೆ, ಅಲ್‌ಶಫಾ ಗಿರಿಶ್ರೇಣಿ ಖುಷಿ ಕೊಟ್ಟಿತು.

ಮೂರನೆಯದು- ತಾಯಿಫಿನ ಕಣಿವೆಗಳಲ್ಲಿರುವ ಗುಲಾಬಿಯ ತೋಟಗಳು. ಅಲ್ಲಿ ಉತ್ಪಾದನೆಯಾಗುವ ಸುಗಂಧ. ಅರಬಸ್ಥಾನದ ಗುಲಾಬಿ ಪನ್ನೀರು- ಅತ್ತರುಗಳು ಸಿಲ್ಕ್‌ರೂಟಿನ ಮೂಲಕ ರೋಮಿನಿಂದ ಹಿಡಿದು ಚೀನಾ ತನಕ ಹೋಗುತಿದ್ದವು. ಇವು ಭಾರತದ ಪಶ್ಚಿಮ ಕರಾವಳಿಗೆ ತಲುಪಿ, ದೇಶೀಯ ವಣಿಕರ ಮೂಲಕ ಒಳನಾಡುಗಳಿಗೆ ವಿತರಣೆಯಾಗುತ್ತಿದ್ದವು. ಭಾರತದ ದೊರೆಗಳು ಸಿರಿವಂತರು ಇದರ ಗ್ರಾಹಕರಾಗಿದ್ದರು. ಅರೇಬಿಯಾದ ಸುಗಂಧವನ್ನು ಮಾರುವವರಿಗೆ ಗುಜರಾತಿನಲ್ಲಿ ಗಾಂಧಿ ಎಂಬ ಅಡ್ಡಹೆಸರಿತ್ತು. ಮೋಹನದಾಸ್‌ಗೆ ಗಾಂಧಿ ಅಡ್ಡಹೆಸರು ಬಂದಿದ್ದು ಈ ಹಿನ್ನೆಲೆಯಿಂದ. ಸುಗಂಧಿ ಅತ್ತಾರ ಅಡ್ಡಹೆಸರುಳ್ಳ ಮನೆತನಗಳು ಕರ್ನಾಟಕದಲ್ಲೂ ಇವೆ.

ನಾವು ತಾಯಿಫ್ ಕಣಿವೆಗಳಲ್ಲಿರುವ ಗುಲಾಬಿ ತೋಟಗಳಿಗೂ ಸುಗಂಧದ ಭಟ್ಟಿಗಳಿಗೂ ಭೇಟಿಕೊಟ್ಟೆವು. ಗುಲಾಬಿ ತೋಟಗಳಲ್ಲಿ ಉಳಿದುಕೊಳ್ಳಲು ಹೋಟೆಲುಗಳೂ ಇವೆ. ಅಲ್ಲಿ ಸುಗಂಧ ದ್ರವ್ಯದ ಮಳಿಗೆಗಳಿದ್ದು, ಅತಿಥಿಗಳ ಮುಂಗೈಗೆ, ಬಟ್ಟೆಗೆ ಸುಗಂಧ ಪೂಸಿ ಸ್ವಾಗತಿಸುವ ಪದ್ಧತಿಯಿದೆ. ನಾವು ಹೂಗಿಡಗಳ ನಡುವೆ ಹಾಕಲಾದ ಟೇಬಲಿನಲ್ಲಿ ಕೂತು ಮಧ್ಯಾಹ್ನದ ಊಟ ಮುಗಿಸಿದೆವು. ಬಳಿಕ ಸಾಂಪ್ರದಾಯಿಕವಾಗಿ ಸುಗಂಧ ತಯಾರಿಸುವ ಭಟ್ಟಿಗಳಿಗೆ ಹೋದೆವು. ದೊಡ್ಡ ಹಂಡೆಗಳನ್ನು ಸೊಂಟದೆತ್ತರದ ಕಟ್ಟೆಯ ಮೇಲೆ ಆಲೆಮನೆಯ ಕೊಪ್ಪರಿಗೆಗಳಂತೆ ಸಾಲಾಗಿ ಕುತ್ತಿಗೆಮಟ ಹೂಳಲಾಗಿತ್ತು. ಅವುಗಳಲ್ಲಿ ಗುಲಾಬಿ ಪಕಳೆ ತುಂಬಿ ನೀರುಹೊಯ್ದು ಅಗಾಧ ಶಾಖ ಹೊಮ್ಮಿಸುವ ಉರಿಯಿಂದ ಬೇಯಿಸಲಾಗುತ್ತಿತ್ತು. ಹಂಡೆಯಿಂದ ಹೊಮ್ಮುವ ಆವಿ ತೊಟ್ಟಿನೀರಿನಲ್ಲಿ ಹಾದು ದ್ರವವಾಗಿ ಗಾಜಿನಕೊಡದಲ್ಲಿ ಹನಿಹನಿಯಾಗಿ ಬೀಳುತ್ತಿತ್ತು. ಸುಗಂಧ ತೆಗೆದ ಬಳಿಕ ಕೋಮಲವಾದ ಪಕಳೆಗಳು ಶಾಖದಲ್ಲಿ ಬೆಂದು ಸಗಣಿಯ ಮುದ್ದೆಯಂತಾಗುತ್ತವೆ. ಅವನ್ನು ತಿಪ್ಪೆಯಲ್ಲಿ ಚೆಲ್ಲಲಾಗಿತ್ತು. ಅದನ್ನು ನೋಡುತ್ತ ಅಕ್ಕಮಹಾದೇವಿಯ 'ಚಂದನವ ಕಡಿದ ಕೊರೆದು ತೇದೊಡೆ ನೊಂದೆನೆಂದು ಕಂಪಬಿಟ್ಟಿತ್ತೇ?' ವಚನ ನೆನಪಾಯಿತು. ನಾವು ಉಣ್ಣುವ ಊಟದ ಹಿಂದೆ ಎಷ್ಟೊಂದು ದುಡಿವವರ ಬೆವರು; ಉಡುವ ರೇಷ್ಮೆಯ ಹಿಂದೆ ಎಷ್ಟೊಂದು ಹುಳುಗಳ ಸಾವು; ಪೂಸುವ ಗಂಧದ ಹಿಂದೆ ಎಷ್ಟೊಂದು ಹೂವುಗಳ ಕಟಾವು!

ಭಾರತದಲ್ಲೂ ಮಲ್ಲಿಗೆ ಸಂಪಿಗೆಗಳಿಂದ ಗಂಧದಿಂದ ಸುಗಂಧ ದ್ರವ್ಯ ತೆಗೆಯುವ ಭಟ್ಟಿಗಳಿವೆ. ನನ್ನೂರು ತರೀಕೆರೆ, ಬ್ರಿಟಿಷರ ಕಾಲದಿಂದಲೂ ಶ್ರೀಗಂಧದ ಕೋಠಿಗೆ ಪ್ರಸಿದ್ಧ. ಅಲ್ಲಿ ಗಂಧದ ಕೊರಡುಗಳನ್ನು ಸೀಳಿ ಲಾರಿಗಳಲ್ಲಿ ತುಂಬಿ ಶಿವಮೊಗ್ಗೆಗೆ ಕಳಿಸುತ್ತಿದ್ದರು. ಅಲ್ಲಿ ನಮ್ಮ ಕಾಲೇಜಿಗೆ ಸಮೀಪವಿದ್ದ ಕಾರ್ಖಾನೆಯಲ್ಲಿ ಗಂಧದೆಣ್ಣೆ ತೆಗೆಯುತ್ತಿದ್ದರು. ಕಾರ್ಖಾನೆಗೆ ಭೇಟಿಕೊಟ್ಟು ಹೊರಬರುವಾಗ ಮೈಕೈಯೆಲ್ಲ ಘಮಗುಡುತ್ತಿತ್ತು.

ನಾವು ತಾಯಿಫ್‌ನಲ್ಲಿರುವಾಗ ಗುಲಾಬಿ ಉತ್ಸವ ನಡೆಯುತ್ತಿತ್ತು. ಗುಲಾಬಿ ರೈತರು ಹೂವಿನ ಮತ್ತು ಅತ್ತರಿನ ಅಂಗಡಿ ತೆರೆದಿದ್ದರು. ಈ ಉತ್ಸವದಲ್ಲಿ ಮದುಕರು ಮಕ್ಕಳು ಮಹಿಳೆಯರು-ಪುರುಷರು ಎನ್ನದೆ ಎಲ್ಲರೂ ಕೈಗೆ ಕಂಕಣದಂತೆ, ತಲೆಗೆ ರುಮಾಲಿನಂತೆ, ಕೊರಳಿಗೆ ಹಾರದಂತೆ ಗುಲಾಬಿ ದಂಡೆ ಮುಡಿದು ಸಂಭ್ರಮಿಸುವರು. ಗುಂಪುಕಟ್ಟಿ ಕುಣಿಯುವರು. ಹುಲ್ಲುಹಾಸಿನ ಮೇಲೆ ರತ್ನಗಂಬಳಿ ಹಾಸಿ ತಿನಿಸು ಹರಡಿಕೊಂಡು ತಿನ್ನುವರು. ಅರಬರು ವಿಲಾಸಪ್ರಿಯರು. ಖಾಸಗಿತನ ಮತ್ತು ಕುಟುಂಬದ ಮೌಲ್ಯಗಳು ಅವರ ಜೀವನದ ಮುಖ್ಯ ಭಾಗಗಳು. ಈ ಜೀವನಕ್ಕೆ ಹೊರಸಂಚಾರ, ಅಡುಗೆ, ಊಟ, ಸುಗಂಧಪ್ರೇಮ ಕತ್ತಿ ಕುಣಿತಗಳು ಲಗತ್ತಾಗಿವೆ.

ಅತ್ತರಿನ ಅಂಗಡಿಗಳಲ್ಲಿ ಬಗೆಬಗೆಯ ಸುಗಂಧದ್ರವ್ಯಗಳು

ಗುಲಾಬಿ ಉತ್ಸವಕ್ಕೆ ಸ್ವಾಗತ ಕೋರುವ ಗುಲಾಬಿಗಳು...

ಭಾರತದ ದೊರೆಗಳು ಗುಲಾಬಿ ಬೆಳೆಯನ್ನೂ ಸುಗಂಧ ತಯಾರಿಸುವ ಕುಶಲತೆಯನ್ನೂ ಆಮದು ಮಾಡಿಕೊಂಡರೆಂದು ಕಾಣುತ್ತದೆ. ರಾಜಸ್ಥಾನದ ಮರುಭೂಮಿ ಗುಲಾಬಿ ಬೆಳೆ ಮತ್ತು ಸುಗಂಧಕ್ಕೆ ಹೆಸರಾಗಿದೆ. ಅಜ್ಮೀರಿಗೆ ಹೋದಾಗ, ಪುಷ್ಕರ್ ಮತ್ತು ಹಳದಿಘಾಟಿನ ಕಣಿವೆಗಳಲ್ಲಿರುವ ಗುಲಾಬಿ ಹೊಲಗಳು, ಭಟ್ಟಿಯಿಳಿಸುವ ಕಾರ್ಖಾನೆಗಳಿಗೆ ಭೇಟಿ ಕೊಟ್ಟಿದ್ದೆವು. ಗುಲಾಬಿ ಹೂವಿಗೂ ಸುಗಂಧಕ್ಕೂ ಸೂಫಿಸಂಗೂ ವಿಶಿಷ್ಟ ಸಂಬಂಧವಿದೆ. ಅಜ್ಮೀರಿನ ಮೊಯಿನುದ್ದೀನ್ ಚಿಸ್ತಿ ದರ್ಗಾಕ್ಕೆ ಗುಲಾಬಿ ಪಕಳೆಗಳ ಚಾದರ ಏರಿಸುವ ಪದ್ಧತಿಯಿದೆ. ದರ್ಗಾದಲ್ಲಿ ಸಂಗೀತದ ಜತೆಯಲ್ಲಿ, ಗುಲಾಬಿ ಹೂವಿನ ಮತ್ತು ಅತ್ತರಿನ ಪರಿಮಳವೂ ಇಡಿಕಿರುತ್ತದೆ. ಉರುಸುಗಳಲ್ಲಿ ಗಂಧ ಏರಿಸುವ ಕಾರ್ಯಕ್ರಮವೇ ಇದೆ. ತೇದ ಸಿರಿಗಂಧಕ್ಕೆ ಗುಲಾಬಿಯ ಅತ್ತರನ್ನು ಬೆರೆಸಿ ಸಂತನ ಸಮಾಧಿಗೆ ಬಳಿಯುವರು. ಮರುಭೂಮಿಯಲ್ಲಿ ಬೆಳೆವ ತಿಳಿಗುಲಾಬಿ, ಗಂಧವಾಗಿ ಧಾರ್ಮಿಕ ಆಚರಣೆಯಿಂದ ಹಿಡಿದು, ಜನರ ಉತ್ಸವಗಳಲ್ಲಿ, ವಿಲಾಸದ ಬದುಕಿನಲ್ಲಿ, ಸಾವಿನ ಆಚರಣೆಗಳಲ್ಲಿ ಭಾಗವಹಿಸಿತು. ಬೆಲೆಬಾಳುವ ಸರಕಾಗಿ ಚೀನಾದಿಂದ ವೆನಿಸಿನ ತನಕ ಹಾದಿರುವ, ರೇಷ್ಮೆಹಾದಿಯಲ್ಲಿ ಖಂಡಾಂತರ ಪಯಣಿಸಿತು. ಯೂರೋಪಿಗೂ ಮುಟ್ಟಿತು. ಹಾಗಿಲ್ಲವಾದರೆ, ಶೇಕ್ಸ್‌ಪಿಯರನ 'ಮ್ಯಾಕ್‌ಬೆತ್' ನಾಟಕದಲ್ಲಿ ಅರೇಬಿಯಾದ ಸುಗಂಧದ ಪ್ರಸ್ತಾಪ ಬರುತ್ತಿರಲಿಲ್ಲ. ಲೇಡಿ ಮ್ಯಾಕ್‌ಬೆತ್ ತನ್ನ ಕೊಲೆಗಡುಕ ಕೈಗಳನ್ನು ಉಜ್ಜುತ್ತ ನಿದ್ರಾಹೀನ ರಾತ್ರಿಗಳಲ್ಲಿ ತೊಳಲುತ್ತ 'ಆಲ್ ದಿ ಪರಫ್ಯೂಮ್ಸ್ ಆಫ್ ಅರೇಬಿಯಾ ಕ್ಯನಾಟ್ ಸ್ವೀಟನ್ ದಿಸ್ ಲಿಟ್ಲ್ ಹ್ಯಾಂಡ್' ಎಂದು ಹೇಳುತ್ತಿರಲಿಲ್ಲ. ಅರೇಬಿಯಾದಲ್ಲಿರುವ ಸಮಸ್ತ ಸುಗಂಧವನ್ನು ಸುರಿದರೂ, ಅವಳ ರಕ್ತದ ವಾಸನೆ ಹೋಗದಷ್ಟು ಕಟುವಾಗಿತ್ತಂತೆ. ಯಾವ ಹೂವೂ ತನ್ನ ಪರಿಮಳ ಹೀಗೊಂದು ದಾರುಣ ರೂಪಕವಾಗುವುದನ್ನು ಕಲ್ಪಿಸಿಕೊಂಡಿರಲಿಕ್ಕಿಲ್ಲ.

ಗುಲಾಬಿ ಉತ್ಸವದಲ್ಲಿದ್ದ ಅತ್ತರಿನ ಅಂಗಡಿಯಲ್ಲೂ ಗುಲಾಬಿ ಹೂವುಗಳದ್ದೇ ಕಾರುಬಾರು...

ವೀಣಾ ವರ್ಲ್ಡ್ ಪ್ರವಾಸ ಸ್ಪರ್ಧೆ

ನಿಮ್ಮ ಉತ್ತರಗಳನ್ನು ವೀಣಾ ವರ್ಲ್ಡ್ ವೆಬ್‌ಸೈಟ್‌ನಲ್ಲಿ ಸಲ್ಲಿಸಲು, ಬರುವ ಮಂಗಳವಾರದೊಳಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ. ಉಚಿತ ವೀಣಾ ವರ್ಲ್ಡ್ ಟೂರ್ **'ಹೈಲೈಟ್ಸ್ ಆಫ್ ರಾಜಸ್ಥಾನ್'** (ಟೂರ್ ಕೋಡ್ RJUP) ಗೆಲ್ಲುವ ಅವಕಾಶ ನಿಮ್ಮದಾಗಿಸಿಕೊಳ್ಳಿ. ಅದೃಷ್ಟಶಾಲಿ ವಿಜೇತರ ಹೆಸರನ್ನು 27ನೇ ಅಕ್ಟೋಬರ್ 2024ರಂದು ಪ್ರಕಟಗೊಳ್ಳುವ ಮುಂದಿನ ಲೇಖನದಲ್ಲಿ ಪ್ರಕಟಿಸಲಾಗುವುದು.

1. ಫಿಫಾ ವಿಶ್ವಕಪ್ ಗೆಲ್ಲದಿರುವ, ಆದರೆ ಅತ್ಯಂತ ಹೆಚ್ಚು ಸಲ ಫೈನಲ್ ತಲುಪಿರುವ ದೇಶ ಯಾವುದು?
2. ಯೂರೋಪಿಗೆ ಚಾಕಲೇಟ್ ಅನ್ನು ಮೊದಲಿಗೆ ಪರಿಚಯಿಸಿದ ದೇಶ ಯಾವುದು?
3. ಪ್ರಪಂಚದಲ್ಲೇ ಅತ್ಯಂತ ವೇಗವಾಗಿ ಹಾರುವ ಹಕ್ಕಿ ಯಾವುದು?
4. ಜೆರುಸಲೇಮ್ ಯಾವ ದೇಶದ ರಾಜಧಾನಿ?
5. ಏಳು ಸಿನಿಮಾಗಳಲ್ಲಿ ಜೇಮ್ಸ್ ಬಾಂಡ್ ಪಾತ್ರ ಅಭಿನಯಿಸಿದವರು ಯಾರು?
6. ಪ್ರಪಂಚದಲ್ಲೇ ಮೊತ್ತಮೊದಲ ಬಾರಿಗೆ ಮಹಿಳಾ ಪ್ರಧಾನಿಯಾಗಿ 1960ರಲ್ಲಿ ಆಯ್ಕೆಯಾದವರು ಯಾರು?
7. ಎರಡನೇ ವಿಶ್ವಯುದ್ಧದ ಸಂದರ್ಭದಲ್ಲಿ ಸ್ವತಂತ್ರ ಫ್ರೆಂಚ್ ಪಡೆಗಳನ್ನು ಮುನ್ನಡೆಸಿದ ಹಾಗೂ ನಂತರ ಫಿಫ್ತ್ ರಿಪಬ್ಲಿಕ್ ಸ್ಥಾಪಿಸಿದ ಫ್ರೆಂಚ್ ನಾಯಕ ಯಾರು?

ಸೆಪ್ಟೆಂಬರ್ 29ರ ವೀಣಾ ವರ್ಲ್ಡ್ ಟ್ರಾವೆಲ್ ರಸಪ್ರಶ್ನೆ ಅದೃಷ್ಟಶಾಲಿ ವಿಜೇತರು
'ಶಿಮ್ಲಾ ಮನಾಲಿ'
(ಟೂರ್ ಕೋಡ್ – HPPS)
ನರಸಿಂಹ ಚಂದ್ರಶೇಖರ್
ಶಿವಮೊಗ್ಗ, ಕರ್ನಾಟಕ

ಅಭಿನಂದನೆಗಳು!

veenaworld.com
Toll-Free: 1800 22 7979

ADVERTORIAL

ಒಂದು ಪರಿಪೂರ್ಣ ಸಕುಟುಂಬ ಪ್ರವಾಸ

ಸುನೀಲ ಪಾಟೀಲ್
Founder, CPO & CNO
Veena World
sunila@veenaworld.com

ಜಾರ್ಜಿಯಾದ ಟಬಲೀಸಿಯಲ್ಲಿನ ಐತಿಹಾಸಿಕ ಬೀದಿಗಳಲ್ಲಿ ಅಡ್ಡಾಡಿದ ನಂತರ ನಾನು ಕೇಬಲ್ ಕಾರಿನಲ್ಲಿ ಕುಳಿತು ರಮಣೀಯ ದೃಶ್ಯಗಳನ್ನು ನೋಡುತ್ತಾ ಪರ್ವತವೊಂದರ ತುದಿ ತಲುಪಿದ್ದೆ. ಅಲ್ಲಿದ್ದ ಜಗತ್ತಿನ ವಿವಿಧ ಮೂಲೆಗಳ ಪ್ರವಾಸಿಗರು ವಿಹಂಗಮ ನೋಟವನ್ನು ಖುಷಿಯಿಂದ ವೀಕ್ಷಿಸುತ್ತಿದ್ದರು. ಅವರುಗಳ ನಡುವೆ ಭಾರತೀಯರಂತೆ ತೋರುತ್ತಿದ್ದ ಕುಟುಂಬವೊಂದು ನನ್ನ ಕಣ್ಣಿಗೆ ಬಿದ್ದಿತು. ಪ್ರಸ್ತುತ ಪ್ರಪಂಚದಲ್ಲಿ ಯಾರ ತಾಯ್ನಾಡಿನ ಮೂಲವನ್ನೇ ಆಗಲಿ ಕೇವಲ ಕಣ್ಣೋಟದಿಂದ ನಿರ್ದಿಷ್ಟವಾಗಿ ಊಹಿಸಲಾಗದು. ಆದರೆ, ಅಲ್ಲಿ ತಾಯಿಯ ಧ್ವನಿಯು ನನ್ನ ಗಮನವನ್ನು ಆ ಕಡೆಗೆ ಸೆಳೆದಿತ್ತು. "ಸುಮ್ಮನೆ ಕಿರಿಕಿರಿ ಮಾಡಬೇಡ! ನಾವು ಪ್ರವಾಸದ ದಿನಗಳನ್ನು ಖುಷಿಯಿಂದ ಕಳೆಯುವ ಪ್ರಯತ್ನವನ್ನಾದರೂ ಮಾಡೋಣ" ಎಂದು ಆ ತಾಯಿಯು ತನ್ನ ಮಗನಿಗೆ ಬುದ್ಧಿವಾದ ಹೇಳುತ್ತಿದ್ದರು. ಅದಕ್ಕೆ ದನಿಗೂಡಿಸಿದ ತಂದೆಯು "ನಾವು ಎಲ್ಲರೂ ಒಟ್ಟು ಸೇರಿ ಚಟುವಟಿಕೆಯಿಂದ ಇರುವುದನ್ನು ಆನಂದಿಸಬೇಕು. ನೀನು ಕೂಡ ಅದಕ್ಕಾಗಿ ಪ್ರಯತ್ನ ಮಾಡಬೇಕು" ಎಂದರು.

ನನ್ನ ಹೃದಯ ತಕ್ಷಣ ಅವರಿಗಾಗಿ ಮಿಡಿಯಿತು. ಆ ಹುಡುಗನು ಸಮಾಧಾನವಿಲ್ಲದೆ ಚಡಪಡಿಸುತ್ತಿದ್ದ. ಯಾವುದೋ ಕಾರಣಕ್ಕೆ ಬಹುಶಃ ಅವನು ತುಂಬಾ ಕೋಪಗೊಂಡಿರಬೇಕು ಅಥವಾ ತನ್ನ ಇಷ್ಟದ ಡಿಜಿಟಲ್ ಗೇಮ್‌ಗಳಿಲ್ಲದೆ ಚಡಪಡಿಸುತ್ತಿರಬೇಕು ಅಥವಾ ಅವನಿಗೆ ಹಸಿವಾಗುತ್ತಿದ್ದಿರಬೇಕು. ಆ ಹುಡುಗನ ಮನಃಸ್ಥಿತಿಗೆ ಹೀಗೆ ಹತ್ತು ಹಲವಾರು ಕಾರಣಗಳು ಇದ್ದಿರಬಹುದು. ಆ ಹುಡುಗನು ಕಾಲುಗಳನ್ನು ನಿಧಾನವಾಗಿ ಎಳೆದು ಹಾಕುತ್ತಾ ತನ್ನ ಪೋಷಕರ ಹಿಂದೆ ಸಾಗುತ್ತಿದ್ದ.

ಕುಟುಂಬ ಸಮೇತ ಪ್ರವಾಸವು ಹೇಗೆ ಯಶಸ್ವಿಯಾಗಲು ಸಾಧ್ಯ ಎಂಬುದರ ಬಗ್ಗೆ ಆಲೋಚಿಸಲು ಈ ಪ್ರಸಂಗ ನನಗೆ ಎಡೆಮಾಡಿಕೊಟ್ಟಿತು. ಇಂತಹ ಪ್ರವಾಸಗಳು ದೈನಂದಿನ ಚಟುವಟಿಕೆಗಳಿಗಿಂತ ವಿಭಿನ್ನವಾಗಿರುವ ಉದ್ದೇಶ ಹೊಂದಿರುತ್ತವೆ ತಾನೆ? ಆದರೂ ಹೆಚ್ಚಿನ ಸಂದರ್ಭಗಳಲ್ಲಿ ಪೋಷಕರು ಮಕ್ಕಳ ಅಭಿಪ್ರಾಯ ಕಲೆತು ಸಮಯ ಕಳೆಯಲು ಇಂತಹ ಅವಧಿಯೆಂದರೆ ಸುಸಂದರ್ಭ ತಾನೆ? ಆದರೂ ಹೆಚ್ಚಿನ ಸಂದರ್ಭಗಳಲ್ಲಿ ಪೋಷಕರು ಮಕ್ಕಳ ಅಭಿಪ್ರಾಯ ಕೇಳದೆ ಪ್ರವಾಸ ಸ್ಥಳಗಳನ್ನು ತಾವೇ ನಿರ್ಧರಿಸುತ್ತಾರೆ. ಆದರೆ ಈಗೀಗ ಮಕ್ಕಳು ಕೂಡ ಪ್ರಪಂಚದ ವಿವಿಧ ಸ್ಥಳಗಳ ಬಗ್ಗೆ ಹೆಚ್ಚಿನ ಜ್ಞಾನ ಬೆಳೆಸಿಕೊಂಡು ತಮ್ಮದೇ ಆದ್ಯತೆಗಳ ಆಯ್ಕೆಗೆ ಮುಂದಾಗುತ್ತಿರುವುದರಿಂದ ಈ ಪ್ರವೃತ್ತಿಯಲ್ಲೂ ಬದಲಾವಣೆ ಕಂಡುಬರುತ್ತಿದೆ. ಸುಮಧುರ ಅನುಭವ ಉಂಟುಮಾಡಲು ಪ್ರತಿಯೊಬ್ಬರ ಬಯಕೆಗಳನ್ನು ಆಧರಿಸಿ ಸಮತೋಲನ ಸಾಧಿಸುವ ಅಗತ್ಯ ಇರುತ್ತಾದ್ದರಿಂದ ಕುಟುಂಬ ಸಮೇತ ಪ್ರವಾಸದ ಯೋಜನೆ ರೂಪಿಸುವುದು ಸವಾಲಿನ ಕೆಲಸ ಎಂದೇ ಹೇಳಬಹುದು.

ಮೇಲೆ ಹೇಳಲಾದ ಪ್ರಸಂಗದಲ್ಲಿ, ಟಬಲೀಸಿಗೆ ಭೇಟಿ ಕೊಟ್ಟಿದ್ದ ಈ ಕುಟುಂಬವು ಎಳೆಯ ಪ್ರಾಯದ ಹುಡುಗನನ್ನು ಲವಲವಿಕೆಯಿಂದ ಇರಿಸುವ ಸಲುವಾಗಿ ತನ್ನ ಪ್ರವಾಸ ಪಟ್ಟಿಗೆ 'ಮ್‌ತತ್ಸ್‌ಮಿಂಡಾ ಪಾರ್ಕ್' ಸೇರಿಸಬಹುದಿತ್ತು, ಹತ್ತಿರದ ಅಮ್ಯೂಸ್‌ಮೆಂಟ್ ಪಾರ್ಕ್ ಒಳಗೊಳ್ಳಬಹುದಿತ್ತು. ಈ ಪಾರ್ಕ್‌ನಿಂದ ನಗರದ ಸೊಬಗಿನ ನೋಟಗಳನ್ನು ನೋಡಬಹುದು. ಜೊತೆಗೆ, ಅತ್ಯುತ್ತಮ ಕೋಲ್ಡ್ ಕಾಫಿ ಹಾಗೂ ಸ್ಥಳೀಯ ತಿನಿಸುಗಳನ್ನು ಲಭ್ಯವಾಗಿಸುವ ಅದ್ಭುತವಾದ ಕೆಫೆಯೂ ಇಲ್ಲಿದೆ. ಇಲ್ಲವೇ ಆ ಕುಟುಂಬದವರು ಸುತ್ತಲ ಪರ್ವತಗಳಲ್ಲಿ ಹೈಕಿಂಗ್ (ಸುದೀರ್ಘ ನಡಿಗೆ) ತೆರಳಲು ಯೋಜಿಸಬಹುದಿತ್ತು. ಇಲ್ಲಿನ ಹಲವು ನಗರಗಳಲ್ಲಿ ಬಾಡಿಗೆಗೆ ಬೈಕ್‌ಗಳು ಲಭ್ಯವಿದ್ದು, ಹೆಚ್ಚು ಪ್ರಯಾಸವಿಲ್ಲದೆ ಹೊಸ ಜಾಗಗಳನ್ನು ಅನ್ವೇಷಿಸಲು ಅನುಕೂಲ ಮಾಡಿಕೊಡುತ್ತವೆ. ಆದರೆ, ಟಬಲೀಸಿ ನಗರದ ವಿಷಯಕ್ಕೆ ಬಂದಾಗ ಅಲ್ಲಿ ಕಾಲ್ನಡಿಗೆಯೇ ಹೆಚ್ಚು ಸೂಕ್ತವೆನಿಸುತ್ತದೆ. ಇದರ ಜೊತೆಗೆ, ದೇಹದ ಚೈತನ್ಯ ಕಾಪಾಡಿಕೊಳ್ಳಲು ಶರೀರವು ನಿರ್ಜಲೀಕರಣದಿಂದ ಬಳಲದಂತೆ ಎಚ್ಚರ ವಹಿಸುವುದು ಹಾಗೂ ವಿಶ್ರಾಂತಿ ಕೂಡ ಮುಖ್ಯವಾಗುತ್ತದೆ.

ಕುಟುಂಬ ಸಮೇತ ಯಾವುದೇ ಪ್ರವಾಸ ಹೊರಡುವ ಮುನ್ನ ಸದಸ್ಯರೆಲ್ಲರ ಅಭಿರುಚಿಗಳಿಗೆ ಹೊಂದುವಂತಹ ಸ್ಪಷ್ಟವಾದ ಗುರಿಗಳನ್ನು ನಿಗದಿ ಮಾಡಿಕೊಳ್ಳುವುದು ಮಹತ್ವದ ವಿಷಯವಾಗುತ್ತದೆ. ಇದನ್ನು ಗಮನದಲ್ಲಿರಿಸಿಕೊಂಡೇ ಸ್ಥಳಗಳ ಆಯ್ಕೆ ಮಾಡಬೇಕಾಗುತ್ತದೆ. ಒಮ್ಮೆ ನನ್ನ ಮಗಳು ಸಾರಾ ಮತ್ತು ನಾನು ಇಬ್ಬರೂ ಒಟ್ಟಾಗಿ ಪ್ರವಾಸ ತೆರಳಲು ಯೋಜನೆ ಸಿದ್ಧಪಡಿಸುವ ಸಂದರ್ಭವುಂಟಾದಾಗ, ಆಕೆ ಸ್ಪೇನ್‌ಗೆ ಭೇಟಿ ಕೊಡಲು ಉತ್ಸುಕಳಾಗಿದ್ದಳು. ಬಹುಶಃ ಅವಳು "ಜಿಂದಗೀ ನ ಮಿಲೇಗೀ ದೋಬಾರಾ" ಸಿನಿಮಾ ನೋಡಿ ಪ್ರೇರಣೆಗೊಂಡಿದ್ದು ಅಥವಾ ವಾಸ್ತುಶಿಲ್ಪದ ಬಗ್ಗೆ ಅವಳಿಗಿದ್ದ ಆಸಕ್ತಿ ಇದಕ್ಕೆ ಕಾರಣವಾಗಿದ್ದಿರಬಹುದು. ಸ್ಪೇನಿನ ಅಡುಗೆ ಭಕ್ಷ್ಯಗಳಿಂದ ಹಿಡಿದು ಪ್ಯಾರಾಗ್ಲೈಡಿಂಗ್, ಸ್ನಾರ್ಕಲಿಂಗ್ ಹಾಗೂ ಕ್ಲಿಫ್ ಡೈವಿಂಗ್‌ನಂತಹ ಅಲ್ಲಿನ ಸಾಹಸಮಯ ಚಟುವಟಿಕೆಗಳವರೆಗೆ ಪ್ರತಿಯೊಂದನ್ನೂ ಅನುಭವಿಸಬೇಕು ಎಂದು ಅವಳು ಕಾತರಿಸುತ್ತಿದ್ದಳು. ಕೊನೆಗೆ, ಈ ಪ್ರವಾಸದಿಂದ ನಮಗಿಬ್ಬರಿಗೂ ಖುಷಿಯಾಗುವುದನ್ನು ಖಾತರಿಗೊಳಿಸಿಕೊಳ್ಳಲು ನಾವು ನಮ್ಮ ಸ್ಪೇನ್ ಪ್ರವಾಸವನ್ನು ಎರಡು ಪ್ರತ್ಯೇಕ ಪಯಣಗಳನ್ನಾಗಿ ಬೇರ್ಪಡಿಸಿಕೊಂಡೆವು. ಹೀಗಾಗಿ, ನಮಗೆ ಒಂದು ಪ್ರವಾಸದಲ್ಲಿ ಮ್ಯಾಡ್ರಿಡ್, ಬಾರ್ಸಿಲೋನಾ ಮತ್ತು ಕೋಸ್ಟ ಬ್ರಾವಾಗಳನ್ನು ಅನ್ವೇಷಿಸಲು ಸಾಧ್ಯವಾಯಿತು. ಮತ್ತೊಂದು ಪಯಣದಲ್ಲಿ, ಆಂಡಲೂಸಿಯಾ ಮತ್ತು ಕೋಸ್ಟ ಡೆಲ್ ಸಾಲ್ ಇವುಗಳನ್ನು ನೋಡಲು ಆಯಿತು. ಇದರ ಜೊತೆಗೆ ನನ್ನ ಹಾಲಿಡೇ ಶಾಪಿಂಗ್ ಬಯಕೆ ತಣಿಸಿಕೊಳ್ಳಲು ಡಿಸೈನರ್ ಔಟ್ಲೆಟ್ ವಿಲೇಜ್ ಆಗಿರುವ ಲಾ ರೊಕಾವನ್ನು ಕೂಡ ಪ್ರವಾಸ ಪಟ್ಟಿಗೆ ಸೇರಿಸಿಕೊಳ್ಳಲು ಅನುಕೂಲವಾಯಿತು. ಹೀಗೆ ನಾವು ಯೋಜನೆ ರೂಪಿಸಿದ್ದರಿಂದ ಪ್ರವಾಸದ ಬಗ್ಗೆ ನಾವಿಬ್ಬರೂ ಆಸಕ್ತಿ ತಳೆಯಲು ಸಾಧ್ಯವಾಯಿತು. ಹೀಗಾಗಿ, ನಾವಿಬ್ಬರೂ ಸಮಾನ ಕಾತರದಿಂದ ಪ್ರವಾಸ ಹೊರಡಲು ದಿನಗಳನ್ನು ಎದುರು ನೋಡುತ್ತಿದ್ದೆವು.

ನಾವು ನಮ್ಮ ಬಜೆಟ್ ಮಿತಿಯಲ್ಲಿಯೇ ಪ್ರತಿಯೊಬ್ಬರನ್ನು ಪ್ರವಾಸದ ಪ್ಲ್ಯಾನಿಂಗ್ ಪ್ರಕ್ರಿಯೆಯಲ್ಲಿ ಭಾಗಿಯಾಗಿಸಿಕೊಳ್ಳುವುದು ಮುಖ್ಯವಾಗುತ್ತದೆ. ಒಂದು ಸಲ ನಮ್ಮ ಕಂಪನಿಯ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥರಾದ ಆನಿ ಅವರು ಆಕೆಯ ಮಗ ಆರವ್‌ಗೆ ಅತ್ಯುತ್ತಮವಾದ ಈಜುಕೊಳ ಯಾವ ಹೋಟೆಲ್‌ನಲ್ಲಿ ಇದೆ ಎಂದು ಕೇಳಿದರು. ಆರವ್ ದೃಷ್ಟಿಯಲ್ಲಿ ಪ್ರವಾಸವೆಂದರೆ ಗಂಟೆಗಟ್ಟಲೆ ನೀರಿನಲ್ಲಿ ಮೋಜು ಮಾಡುವುದು ಎಂಬುದಾಗಿತ್ತು. ಹೋದ ಜಾಗದಲ್ಲಿ ಒಂದು ಒಳ್ಳೆಯ ಸ್ವಿಮ್ಮಿಂಗ್ ಪೂಲ್ ಇದ್ದರಾಯ್ತು ಎಂಬುದನ್ನು ಬಿಟ್ಟರೆ ಪ್ರವಾಸ ಸ್ಥಳದ ಆಯ್ಕೆ ಬಗ್ಗೆ ಅವನು ಬೇರೇನೂ ತಲೆಕೆಡಿಸಿಕೊಳ್ಳುವುದಿಲ್ಲ. ವೀಣಾ ವರ್ಲ್ಡ್‌ನಲ್ಲಿರುವ ನಮ್ಮ ಕಸ್ಟಮೈಸ್ಡ್ ಹಾಲಿಡೇಸ್ ತಂಡದವರು ಒಳ್ಳೆಯ ಈಜುಕೊಳವಿರುವ ಹೋಟೆಲ್‌ಗಳನ್ನು ಪಟ್ಟಿ ಮಾಡಿ ಆನಿ ಅವರಿಗೆ ನೀಡಿದರು. ಜೊತೆಗೆ, ಪೋಷಕರಿಗೆ ತಮ್ಮ ಆದ್ಯತೆಯ ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳುವುದಕ್ಕೂ ಅವಕಾಶ ಕಲ್ಪಿಸಿದರು.

ತುಂಬಾ ಚಿಕ್ಕ ಮಕ್ಕಳ ಸಮೇತ ಪ್ರಯಾಣಿಸುವುದು ಸ್ವಲ್ಪ ಬೇರೆಯದೇ ಸವಾಲನ್ನು ಮುಂದಿರಿಸುತ್ತದೆ. ಒಂದರ್ಥದಲ್ಲಿ ಅದು ಸುಲಭ ಕೂಡ. ಏಕೆಂದರೆ, ಇಂಥದ್ದೇ ಸ್ಥಳ ಬೇಕು ಎಂದು ಎಳೆಯ ವಯಸ್ಸಿನ ಮಕ್ಕಳು ಯಾವುದೇ ತಕರಾರು ಮಾಡುವುದಿಲ್ಲ. ಆದರೆ ಅವರು ಪ್ರವಾಸದ ಸಂದರ್ಭದಲ್ಲಿ ಏನಾದರೂ ಒಂದು ಚಟುವಟಿಕೆಯಲ್ಲಿ ಇರುವಂತೆ ನೋಡಿಕೊಳ್ಳುವುದು ಹಾಗೂ ಅವರು ಕಿರಿಕಿರಿಗೊಳ್ಳದಂತೆ ಇರಿಸಲು ಆಹಾರ ಸೇವನೆಗೆ ತೊಂದರೆಯಾಗದಂತೆ ನೋಡಿಕೊಳ್ಳುವುದು ಮುಖ್ಯವಾಗುತ್ತದೆ. ಇದರ ಬಗ್ಗೆ ಹೇಳುವಾಗ ನಾನು ನನ್ನ ಮಗಳೊಂದಿಗೆ ಅವಳು ಕೇವಲ ಹನ್ನೊಂದು ತಿಂಗಳ ಮಗುವಾಗಿದ್ದಾಗ ಮೊದಲ ಪ್ರವಾಸ ತೆರಳಿದ್ದು ನೆನಪಾಗುತ್ತದೆ. ಇದು ಎರಡು ದಶಕಗಳ ಹಿಂದಿನ ಘಟನೆ. ಅಂದರೆ, ಜಿಪಿಎಸ್ ಹಾಗೂ ಸ್ಮಾರ್ಟ್ ಫೋನ್‌ಗಳು ಕಾಲಿಡುವ ಮುನ್ನ ಪ್ರವಾಸ ತೆರಳಿದ ಸಂದರ್ಭ ಅದು. ಏನಿಲ್ಲವೆಂದರೂ ಕನಿಷ್ಠ ಜಜ್ಜಿದ ಆಲೂಗೆಡ್ಡೆ, ಅನ್ನ ಮತ್ತು ಯೋಗರ್ಟ್ ಎಲ್ಲಿ ಬೇಕೆಂದರೂ ಸಿಗುತ್ತದೆ ಎಂಬುದನ್ನು ತಿಳಿದಿದ್ದ ನಾವು ಜಾಣ್ಮೆಯಿಂದ ಪ್ರವಾಸ ಯೋಜನೆ ರೂಪಿಸಿ ಕೇವಲ ಅಗತ್ಯ ಔಷಧಿಗಳನ್ನು ಮಾತ್ರ ಆಗ ನಮ್ಮೊಂದಿಗೆ ಕೊಂಡೊಯ್ದಿದ್ದೆವು.

ಪ್ರವಾಸದ ಸಂದರ್ಭದಲ್ಲಿ ಮಕ್ಕಳಿಗೆ ಮನರಂಜನೆ ಲಭ್ಯವಾಗಿಸಲು ಆಟಗಳು ಅತ್ಯುತ್ತಮ ಮಾರ್ಗೋಪಾಯಗಳಾಗಿರುತ್ತವೆ. ಪೋರ್ಟೆಬಲ್ ಬೋರ್ಡ್‌ಗೇಮ್‌ಗಳು, ಕಾರ್ಡ್ ಗೇಮ್‌ಗಳು ಮತ್ತು ಇಂಟರ್‍ಯಾಕ್ಟಿವ್ ಆಪ್‌ಗಳು ದೀರ್ಘ ಪ್ರಯಾಣದ ಸಂದರ್ಭದಲ್ಲಿ ಬಹಳ ಉಪಯುಕ್ತ. 'ಐ ಸ್ಪೈ', '20 ಕ್ವೆಶ್ಚನ್ಸ್' ಮತ್ತು 'ಸ್ಕ್ಯಾವೆಂಜರ್ ಹಂಟ್ಸ್'ನಂತಹ ಕ್ಲಾಸಿಕ್ ಗೇಮ್‌ಗಳನ್ನು ಯಾವುದೇ ಜಾಗದಲ್ಲಿ ಆಡಬಹುದಾಗಿರುತ್ತದೆ. ಇವುಗಳ ಜೊತೆಗೆ, ಮಕ್ಕಳನ್ನು ಚಟುವಟಿಕೆಯಲ್ಲಿ ತೊಡಗಿಸಲು ಟ್ರಾವೆಲ್ ಜರ್ನಲ್‌ಗಳು ಅಥವಾ ಅವರಿಗಾಗುವ ಅನುಭವಗಳನ್ನು ಸೃಜನಾತ್ಮಕವಾಗಿ ದಾಖಲಿಸಲು ಸ್ಕೆಚ್ ಬುಕ್ಕುಗಳು ಅವಕಾಶ ಮಾಡಿಕೊಡುತ್ತವೆ. ಡಿಜಿಟಲ್ ಮನರಂಜನೆಗಾಗಿ ಟ್ಯಾಬ್‌ಗಳನ್ನು ಅಥವಾ ಸ್ಮಾರ್ಟ್ ಫೋನ್‌ಗಳನ್ನು ಶೈಕ್ಷಣಿಕ ಆಪ್‌ಗಳು ಮತ್ತು ಗೇಮ್‌ಗಳಿಂದ ಲೋಡ್ ಮಾಡಿಕೊಳ್ಳಬೇಕಾಗುತ್ತದೆ. ಇವು ಮಕ್ಕಳಿಗೆ ಮನರಂಜನೆ ನೀಡುವ ಜೊತೆಗೆ ಹೊಸ ಕಲಿಕೆಗೆ ಕೂಡ ವೇದಿಕೆಯಾಗುತ್ತವೆ. ವಿವಿಧ ಚಟುವಟಿಕೆಗಳನ್ನು ಹೊಂದಿರುವುದು ಬೇಸರವನ್ನು ಕಡಿಮೆಗೊಳಿಸಲು ಸಹಕಾರಿಯಷ್ಟೇ ಅಲ್ಲದೆ ಪ್ರತಿಯೊಬ್ಬರನ್ನು ಪ್ರವಾಸದುದ್ದಕ್ಕೂ ಚೈತನ್ಯದಿಂದ ಇರಿಸಲು ಅನುವು ಮಾಡಿಕೊಡುತ್ತದೆ.

ಸಿಂಗಪುರ, ಥಾಯ್ಲೆಂಡ್ ಮತ್ತು ಮಲೇಷ್ಯಾದಂತಹ ಕೆಲವು ತಾಣಗಳು ವಿಶೇಷವಾಗಿ ಕುಟುಂಬ ಸಮೇತ ಪ್ರವಾಸಕ್ಕೆ ಹೇಳಿ ಮಾಡಿಸಿದಂತಿರುತ್ತವೆ. ಇಲ್ಲೆಲ್ಲಾ ಮಕ್ಕಳನ್ನು ಆಕರ್ಷಿಸುವಂತಹ ತಾಣಗಳು ಮತ್ತು ಪಾರ್ಕುಗಳು ಬಹಳಷ್ಟಿವೆ. ಈ ಸ್ಥಳಗಳು ಮಕ್ಕಳ ಸಹಜ ಕುತೂಹಲ ತಣಿಸಲು ಹಾಗೂ ಅವರ ಲವಲವಿಕೆಗೆ ಸೂಕ್ತವಾಗಿದ್ದು ಕುಟುಂಬ ಸಮೇತ ಪ್ರವಾಸವನ್ನು ಸ್ಮರಣೀಯವಾಗಿಸಲು ಪ್ರಶಸ್ತವಾಗಿವೆ.

ಉದಾಹರಣೆಗೆ, ಥಾಯ್ಲೆಂಡ್‌ನಲ್ಲಿ ಮಕ್ಕಳು ಪ್ರಾಣಿಗಳಿಂದ ಸಹಜವಾಗಿಯೇ ಆಕರ್ಷಿತರಾಗುತ್ತಾರೆ. ಇಲ್ಲಿ ಸಫಾರಿ ವರ್ಲ್ಡ್‌ಗೆ ನೀಡುವ ಭೇಟಿಯು ಅವರಿಗೆ ಎಂದೆಂದೂ ಮರೆಯಲಾಗದ ಅನುಭವವಾಗಿ ಮನಸ್ಸಿನಲ್ಲಿ ಉಳಿಯುತ್ತದೆ. ಈ ಥೀಮ್ ಪಾರ್ಕ್‌ನಲ್ಲಿ ರೋಮಾಂಚಕ ವೈಲ್ಡ್‌ಲೈಫ್ ಷೋಗಳ ಜೊತೆಗೆ ಎಳೆಯ ಮನಸ್ಸುಗಳನ್ನು ಸೆಳೆಯುವಂತಹ ಸಫಾರಿಗಳು ಕೂಡ ಇವೆ. ಅದೇ ರೀತಿಯಾಗಿ ಯೂನಿವರ್ಸಲ್ ಸ್ಟುಡಿಯೋಸ್, ಡಿಸ್ನಿಲ್ಯಾಂಡ್ ಮತ್ತು ಲೆಗೋ ಲ್ಯಾಂಡ್‌ಗಳನ್ನು ವರ್ಷದ ಯಾವುದೇ ಅವಧಿಯಲ್ಲಾದರೂ ಮನರಂಜನೆ ನೀಡುವಂತೆ ವಿನ್ಯಾಸಗೊಳಿಸಲಾಗಿದೆ. ಇಲ್ಲಿನ ರೋಮಾಂಚಕ ರೋಲರ್ ಕೋಸ್ಟರ್‌ಗಳು, ವಿವಿಧ ಸವಾರಿಗಳು ಹಾಗೂ ಗೇಮ್‌ಗಳು ಮಕ್ಕಳಿಗೆ ಗಂಟೆಗಟ್ಟಲೆ ಮನರಂಜನೆ ಒದಗಿಸುತ್ತವೆ.

ಈ ಪಾರ್ಕುಗಳ ಮತ್ತೊಂದು ಮಾಂತ್ರಿಕತೆ ಏನೆಂದರೆ, ಇವು ಮಕ್ಕಳಿಗೆ ತಮ್ಮ ನೆಚ್ಚಿನ ಸಿನಿಮಾಗಳ ಪಾತ್ರಧಾರಿಯಾಗಿ ತಾವೇ ಅಭಿನಯಿಸುತ್ತಿದ್ದೇವೇನೋ ಎಂಬ ಭಾವನೆ ಮೂಡಿಸುತ್ತವೆ. ಡಿಸ್ನಿ ಪಾರ್ಕಿನಲ್ಲಿ ನೀವು 'ಫ್ರೋಜನ್'ನ ಮನಮೋಹಕ ಜಗತ್ತನ್ನು ಹೊಕ್ಕಂತೆ ಭಾಸವಾಗುತ್ತದೆ. ಹಾಗೆಯೇ ಯೂನಿವರ್ಸಲ್ ಸ್ಟುಡಿಯೋಸ್‌ನಲ್ಲಿ ಹುರುಪು ಮೂಡಿಸುವ 'ಟ್ರಾನ್ಸ್‌ಫಾರ್ಮರ್ಸ್ ರೈಡ್' ಲಭ್ಯವಾಗುತ್ತದೆ. ಈ ಅನುಭವಗಳು ಸಿನಿಮಾದ ಮಾಂತ್ರಿಕತೆ ಹಾಗೂ ಅಮ್ಯೂಸ್‌ಮೆಂಟ್ ಪಾರ್ಕುಗಳ ರೋಮಾಂಚನದೊಂದಿಗೆ ಮಕ್ಕಳನ್ನು ಮಾತ್ರವಲ್ಲದೆ ವಯಸ್ಕರನ್ನು ಕೂಡ ಮುದಗೊಳಿಸುವ ವಾತಾವರಣ ಸೃಷ್ಟಿಸುತ್ತವೆ. ಹೀಗೆ ಎಲ್ಲರನ್ನೂ ತೊಡಗಿಸಿಕೊಳ್ಳುವಂತಹ ಆಕರ್ಷಣೆಗಳ ನೆರವಿನಿಂದ ಈ ತಾಣಗಳು ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೂ ಏನಾದರೊಂದು ಖುಷಿ ಕಾಣಲು ಅವಕಾಶ ಮಾಡಿಕೊಟ್ಟು ಪ್ರವಾಸದ ಅನುಭವವು ಸದಾ ನೆನಪಿನಲ್ಲಿ ಉಳಿಯುವಂತೆ ಮಾಡುತ್ತವೆ.

ಇದು ಕೇವಲ ಮಾನವ ನಿರ್ಮಿತ ಆಕರ್ಷಣೆಗಳು ಅಥವಾ ಥೀಮ್ ಪಾರ್ಕುಗಳಿಗಷ್ಟೇ ಸೀಮಿತಗೊಳ್ಳಬೇಕೆಂದೇನೂ ಇಲ್ಲ. ಪ್ರಕೃತಿಯ ಅದ್ಭುತಗಳನ್ನು ಪರಿಚಯಿಸುವುದು ಮಕ್ಕಳಿಗೆ ಮುದ ನೀಡುವ ಜೊತೆಗೆ ಶೈಕ್ಷಣಿಕವಾಗಿಯೂ ಉಪಯುಕ್ತವಾಗುತ್ತದೆ. ಲಘು ಸಾಹಸಗಳನ್ನು ನಿಮ್ಮ ಪ್ರವಾಸದ ಭಾಗವಾಗಿಸುವುದು ಇದನ್ನು ಸಾಧಿಸುವ ಅತ್ಯುತ್ತಮ ಮಾರ್ಗೋಪಾಯವಾಗಿರುತ್ತದೆ. ಮಕ್ಕಳಿಗೆ ಸುರಕ್ಷಿತವಾಗಿ ಪರ್ವತಗಳ ಮೇಲೆ ತೇಲಾಡಿದ ಭಾವ ಮೂಡಿಸುವ 'ಜಿಪ್ ಲೈನಿಂಗ್'ನಂತಹ ಚಟುವಟಿಕೆಗಳು, ಅವರೊಳಗಿನ 'ಟಾರ್ಜಾನ್'ಅನ್ನು ಹೊರಹೊಮ್ಮಿಸಲು ಅನುವು ಮಾಡಿಕೊಟ್ಟು ಸಾಹಸ ಹಾಗೂ ಆತ್ಮವಿಶ್ವಾಸದ ಗುಣಗಳನ್ನು ಉತ್ತೇಜಿಸುತ್ತವೆ.

ಜಲಕ್ರೀಡೆಗಳ ರೋಮಾಂಚನವನ್ನು ಸುರಕ್ಷತೆಯೊಂದಿಗೆ ಅನುಭವಿಸಲು ಮೈಲ್ಡ್ ರ್‍ಯಾಪಿಡ್‌ಗಳ ಮೇಲಿನ ರ್‍ಯಾಫ್ಟಿಂಗ್ ಅವಕಾಶ ಕಲ್ಪಿಸುತ್ತದೆ. ಹಾಗೆಯೇ ಪ್ಯಾರಾ ಸೈಲಿಂಗ್ ಮತ್ತು ಬನಾನಾ ಬೋಟ್ ರೈಡ್‌ನಂತಹ ಚಟುವಟಿಕೆಗಳು ನೀರಿನ ಮೇಲೆ ಉಲ್ಲಾಸದಾಯಕ ಅನುಭವಗಳನ್ನು ನೀಡುತ್ತವೆ. ಸ್ನಾರ್ಕಲಿಂಗ್ ಮತ್ತೊಂದು ಅತ್ಯುತ್ತಮ ಆಯ್ಕೆಯಾಗಿದ್ದು ಕಡಲೊಳಗಿನ ಜೀವಸಂಕುಲವನ್ನು ಹತ್ತಿರದಿಂದ ನೋಡುವ ಅವಕಾಶ ಒದಗಿಸಿ ಸಾಗರದಾಳದ ಜೀವವೈವಿಧ್ಯದ ಬಗ್ಗೆ ಪ್ರೀತಿ ಹುಟ್ಟಿಸುವ ಚಟುವಟಿಕೆಯಾಗಿರುತ್ತದೆ.

ಸಮುದ್ರದ ದಡದಲ್ಲಿ ಮರಳಿನಲ್ಲಿ ಗೂಡು ಕಟ್ಟುವಂತಹ ಸರಳ ಚಟುವಟಿಕೆ ಕೂಡ ಮಕ್ಕಳನ್ನು ಆನಂದದಲ್ಲಿ ತಲ್ಲೀನಗೊಳಿಸಬಲ್ಲದು. ಇಂತಹ ಚಟುವಟಿಕೆಗಳು ಮಕ್ಕಳಿಗೆ ಮನರಂಜನೆ ನೀಡುವ ಜೊತೆಗೆ ತಮ್ಮ ಸುತ್ತಲ ನಿಸರ್ಗವನ್ನು ಮೆಚ್ಚಿ ಅದರೊಂದಿಗೆ ಸಂಪರ್ಕ ಕಲ್ಪಿಸಿಕೊಳ್ಳಲು ಪ್ರೋತ್ಸಾಹಿಸುತ್ತವೆ. ಇವು ಹೊರಾಂಗಣ ಅನ್ವೇಷಣೆ ಬಗ್ಗೆ ಪ್ರೀತಿ ಹುಟ್ಟಿಸುವ ಜೊತೆಗೆ ಅಚ್ಚಳಿಯದ ನೆನಪುಗಳನ್ನು ಕೂಡ ಮನಸ್ಸಿನಲ್ಲಿ ಮೂಡಿಸುತ್ತವೆ.

ಪ್ರವಾಸದ ವೇಳೆ ಕೆಲವರು ತಾವು ಸಂಪೂರ್ಣ ವಿಶ್ರಾಂತಿಯಿಂದಿರುವ ಜೊತೆಗೆ ಆ ಸಂದರ್ಭದಲ್ಲಿ ಖುಷಿ ಅನುಭವಿಸುವ ಸಲುವಾಗಿ ಪ್ರತಿಯೊಂದು ನಿರ್ವಹಣೆಯನ್ನೂ ಯಾರಿಗಾದರೂ ವಹಿಸುವ ಆಲೋಚನೆಯಲ್ಲಿ ಇರುತ್ತಾರೆ. ಪ್ರವಾಸದ ವೇಳೆ ತಮ್ಮ ಮಕ್ಕಳೊಂದಿಗೆ ಆಟವಾಡಲು ಗೆಳೆಯರಿರಬೇಕು ಹಾಗೂ ಅವರು ಉತ್ಸಾಹದಿಂದ ತೊಡಗಿಕೊಳ್ಳುವಂತಹ ಚಟುವಟಿಕೆಗಳು ಇರಬೇಕು ಎಂಬ ನಿರೀಕ್ಷೆಯೂ ಅವರಲ್ಲಿರುತ್ತದೆ. ಪುಣೆಯಲ್ಲಿರುವ ನಮ್ಮ ಕಚೇರಿಯ ಸಂದೀಪ್‌ರವರು ಈ ಕಾರಣಕ್ಕಾಗಿ ವೀಣಾ ವರ್ಲ್ಡ್ ಕುಟುಂಬ ಸಮೇತ ಪ್ರವಾಸಗಳನ್ನು ನೆಚ್ಚಿಕೊಳ್ಳುತ್ತಾರೆ. ಇದರಿಂದ ಅವರ ಮಗಳು ಸಾಯಿಗೆ ಪ್ರವಾಸಗಳ ವೇಳೆ ಯಾವಾಗಲೂ ಉತ್ತಮ ಗೆಳೆಯರನ್ನು ಪಡೆಯಲು ಸಾಧ್ಯವಾಗುತ್ತಿದೆ. ಇದು ಅವರಿಗೆ ಪ್ರವಾಸಗಳಿಂದ ನಿರೀಕ್ಷಿಸುವ ಖುಷಿ ಹಾಗೂ ತೃಪ್ತಿಯನ್ನು ನೀಡುತ್ತಿದೆ. ವೀಣಾ ವರ್ಲ್ಡ್ ಟೂರ್ ಮ್ಯಾನೇಜರ್‌ರವರು ಎಲ್ಲಾ ಪೀಳಿಗೆಯವರಿಗೂ ಸರಿಹೊಂದುವಂತಹ ವಿವಿಧ ಆಟಗಳು ಮತ್ತು ಚಟುವಟಿಕೆಗಳ ಮೂಲಕ ಪ್ರವಾಸವು ಸಂತಸದಾಯಕವೂ ಮೋಜಿನಿಂದ ಕೂಡಿದ್ದೂ ಆಗಿರುವಂತೆ ಪ್ರವಾಸ ಪಟ್ಟಿಯನ್ನು ಸಂಯೋಜನೆಗೊಳಿಸುತ್ತಾರೆ.

ಅಂತಿಮವಾಗಿ, ಒಂದು ಯಶಸ್ವಿ ಕುಟುಂಬಸಮೇತ ಪ್ರವಾಸವೆಂದರೆ ಸದಸ್ಯರೆಲ್ಲರ ಬಯಕೆಗಳನ್ನು ಸಮತೋಲನಗೊಳಿಸುವ, ಆಲೋಚನಾಶೀಲವಾಗಿ ಯೋಜನೆ ರೂಪಿಸುವ ಹಾಗೂ ಪ್ರಯಾಣದ ಅನುಭವವನ್ನು ಸಮೃದ್ಧಗೊಳಿಸುವ ಅನಿರೀಕ್ಷಿತ ಕ್ಷಣಗಳಿಗೆ ಹೊಂದಿಕೊಳ್ಳುವಂತಹ ಮನೋಧರ್ಮವಾಗಿರುತ್ತದೆ.

Email: travel@veenaworld.com | ಪ್ರತಿವಾರವೂ ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾಗುವ ಸುನೀಲಾ ಪಾಟೀಲ್, ವೀಣಾ ಪಾಟೀಲ್ ಮತ್ತು ನೀಲ್ ಪಾಟೀಲ್ ಅವರ ಲೇಖನಗಳನ್ನು ವೀಣಾ ವರ್ಲ್ಡ್ ವೆಬ್ಸೈಟ್ www.veenaworld.com ನಲ್ಲೂ ಓದಬಹುದು.



ಜಾನಪದ ಪರಿಷತ್ತಿಗೆ ಯುನೆಸ್ಕೊ ಮಾನ್ಯತೆಯ ಗರಿ

ಓದೇಶ ಸಕಲೇಶಪುರ

ಅದು 1979ರ ಫೆಬ್ರುವರಿ 11ನೇ ದಿನ. ಐಎಎಸ್ ಅಧಿಕಾರಿಯಾಗಿ ನಲವತ್ತು ವರ್ಷಗಳ ಸುದೀರ್ಘ ಸಾರ್ವಜನಿಕ ಸೇವೆಯಿಂದ ನಿವೃತ್ತರಾಗಿದ್ದ ಎಚ್.ಎಲ್.ನಾಗೇಗೌಡ ಅವರಿಗೆ ಹಿತೈಷಿಗಳು ಬೆಂಗಳೂರಿನಲ್ಲಿ ಅಭಿನಂದನಾ ಸಮಾರಂಭ ಹಮ್ಮಿಕೊಂಡಿದ್ದರು. ಅಭಿಮಾನದೊಂದಿಗೆ ₹1.15 ಲಕ್ಷ ಮೊತ್ತವನ್ನು ಗೌಡರಿಗೆ ಕಾಣಿಕೆಯಾಗಿ ಕೊಟ್ಟರು. ಜಾನಪದ ಕ್ಷೇತ್ರದ ಸಂಶೋಧನಾ ಕೃಷಿಯಲ್ಲಿ ಅದಾಗಲೇ ತೊಡಗಿದ್ದ ನಾಗೇಗೌಡರು, ಆ ಹಣವನ್ನು ಸ್ವಂತಕ್ಕೆ ಬಳಸಿಕೊಳ್ಳದೆ ಜಾನಪದವನ್ನು ಉಳಿಸಿ-ಬೆಳೆಸುವ ಕಾಯಕಕ್ಕೆ ವಿನಿಯೋಗಿಸುವ ಆಲೋಚನೆ ಮಾಡಿದರು.

ಕನ್ನಡನಾಡಿನ ಜಾನಪದ ಪರಂಪರೆಯ ಸಂವರ್ಧನೆ, ಸಂರಕ್ಷಣೆ, ಪ್ರಸರಣ, ದಾಖಲಾತಿ ಹಾಗೂ ಪ್ರಚಾರ ಪ್ರಧಾನ ಆಶಯಗಳೊಂದಿಗೆ ಮಾರ್ಚ್ 21, 1979ರಲ್ಲಿ ಕರ್ನಾಟಕ ಜಾನಪದ ಪರಿಷತ್ತನ್ನು ಸ್ಥಾಪಿಸಿದರು. ರಾಗಿ ಬೀಸುತ್ತಾ ಹಾಡುವ ಹೆಣ್ಣಿನ ಚಿತ್ರವನ್ನೇ ಪರಿಷತ್ತಿನ ಚಿಹ್ನೆಯಾಗಿ ರೂಪಿಸಿದ ಅವರು, ಪರಿಷತ್ತಿನ ಭವಿಷ್ಯದ ಚಟುವಟಿಕೆಗಳು ಹಾದಿ ತಪ್ಪದಂತೆ ಭದ್ರ ಅಡಿಪಾಯ ಹಾಕಿದರು. ಹೀಗೆ ಮಹಾನ್ ಆಶಯದೊಂದಿಗೆ ಶುರುವಾಗಿ ಕಳೆದ 45 ವರ್ಷಗಳಿಂದ ಜಾನಪದ ಪರಂಪರೆ, ಸಂಸ್ಕೃತಿ ಹಾಗೂ ಕಲೆಗಳನ್ನು ಉಳಿಸಿ ಪೋಷಿಸುತ್ತಾ ಬಂದಿರುವ ಪರಿಷತ್ತಿಗೆ ಇದೀಗ ಯನೆಸ್ಕೊ ಮಾನ್ಯತೆ ಸಿಕ್ಕಿದೆ. ದೇಶದ ಪ್ರಮುಖ ಸಾಂಸ್ಕೃತಿಕ ಕೇಂದ್ರವಾದ ಪರಿಷತ್ತಿಗೆ ವಿಶ್ವಸಂಸ್ಥೆಯ ಅಂಗಸಂಸ್ಥೆ ನೀಡಿರುವ ಈ ಮಾನ್ಯತೆಯು, ಪರಿಷತ್ತಿನ ಕಾರ್ಯಚಟುವಟಿಕೆಗಳಿಗೆ ಜಾಗತಿಕ ಮುದ್ರೆ ಒತ್ತಿದೆ. ವಿಶ್ವದಲ್ಲಿರುವ 58 ಸಾರ್ವಜನಿಕ ಸೇವಾ ಸಂಸ್ಥೆಗಳ ಪೈಕಿ, ಪರಿಷತ್ತು ಸಹ ಒಂದಾಗಿ ಗುರುತಿಸಲ್ಪಟ್ಟಿದೆ. ಅಮೂರ್ತ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಗೆ ಸಂಬಂಧಿಸಿದ ಯುನೆಸ್ಕೊದ ಆಂತರಿಕ ಸಮಿತಿಗೆ ಸಲಹೆಗಳನ್ನು ನೀಡುವ ಗೌರವವು ಪರಿಷತ್ತಿಗೆ ಸಿಕ್ಕಿದೆ.

ಜಾನಪದ ಲೋಕ

ಯುನೆಸ್ಕೊ ಮಾನ್ಯತೆ ಸಿಗುವಂತಹ ಕೆಲಸವನ್ನು ಪರಿಷತ್ತು ಏನು ಮಾಡಿದೆ? ಎಂಬ ಪ್ರಶ್ನೆ ಯಾರಲ್ಲಾದರೂ ಮೂಡಿದರೆ, ಒಮ್ಮೆ 'ಜಾನಪದ ಲೋಕ'ಕ್ಕೆ ಭೇಟಿ ನೀಡಬೇಕು. ಬೆಂಗಳೂರು–ಮೈಸೂರು ಹೆದ್ದಾರಿಯ ರಾಮನಗರದ ಬಳಿ ಸುಮಾರು 15 ಎಕರೆ ಪ್ರದೇಶದಲ್ಲಿರುವ ಈ ಲೋಕವು ಪರಿಷತ್ತು ಮಾಡಿಕೊಂಡು ಬಂದಿರುವ ಕೆಲಸಕ್ಕೆ ಬಹುದೊಡ್ಡ ಸಾಕ್ಷ್ಯವೆನಿಸುತ್ತದೆ. ನಾಗೇಗೌಡ ಅವರ ಕನಸಿನ ಕೂಸಾದ ಈ ಲೋಕ 1994ರಲ್ಲಿ ಶುರುವಾಗಿದ್ದು, ಬೃಹತ್ ಜಾನಪದ ವಸ್ತು ಸಂಗ್ರಹಾಲಯವಾಗಿದೆ. ಜನಪದ ಕಲೆಗಳು, ಸಂಸ್ಕೃತಿ, ಆಚರಣೆ, ಬದುಕಿನ ಅನಾವರಣ, ಅಧ್ಯಯನ, ಸಂಶೋಧನೆ, ಕಲೆಗಳ ತರಬೇತಿ ಸೇರಿದಂತೆ ಬಹುಮುಖಿ ಕಾರ್ಯಗಳನ್ನು ಮಾಡುತ್ತಿರುವ ಸಾಂಸ್ಕೃತಿಕ ಕೇಂದ್ರವಾಗಿದೆ.

'ಸಾವಿರಕ್ಕೂ ಹೆಚ್ಚು ಗಂಟೆಗಳು ಕೇಳಬಹುದಾದ ಜನಪದ ಗೀತೆಗಳ ಧ್ವನಿಮುದ್ರಣ, 800 ಗಂಟೆ ವೀಕ್ಷಿಸಬಹುದಾದ ಜಾನಪದ ಕಲೆಗಳ ವಿಡಿಯೊ ಪರಿಷತ್ತಿನ ಸಂಗ್ರಹದಲ್ಲಿದೆ. ಗ್ರಾಮೀಣ ಬದುಕಿನ ಹಳ್ಳಿಗಳಲ್ಲಿ ಬಳಸುವ ವಸ್ತುಗಳು, ನಾಗೇಗೌಡರ ಬದುಕು ಮತ್ತು ಸಾಧನೆ ಹೇಳುವ ಬದುಕು ಚಿತ್ರಕುಟೀರ, ಇತಿಹಾಸವನ್ನು ಹೇಳುವ ಶಿಲ್ಪಮಾಳ, ಹಬ್ಬ-ಆಚರಣೆ- ಸಾಂಸ್ಕೃತಿಕ ಪರಿಕರಗಳ ದರ್ಶನದ ಲೋಕಮಹಲ್, ಜನಪದರ ಕರಕುಶಲತೆ ಹಾಗೂ ಬದುಕು ಹೇಳುವ ಆಯಗಾರರ ಮಾಳ, ಜಾನಪದ ಕಲೆಗಳಿಗೆ ಸಂಬಂಧಿಸಿದ ಲೋಕಸಿರಿ, ಕಲಾ ಪ್ರದರ್ಶನಕ್ಕೆ ಬಯಲು ರಂಗಮಂದಿರ, ವಿಡಿಯೊ ಸ್ಕೋಪ್ ಥಿಯೇಟರ್, ಜಾನಪದ ಗ್ರಂಥಾಲಯ, ದೊಡ್ಡಮನೆ, ಬುಡಕಟ್ಟು ಸಮುದಾಯಗಳ ಬದುಕು ಪರಿಚಯಿಸುವ ಗಿರಿಜನ ಲೋಕವು ನೋಡುಗರಿಗೆ ಜಾನಪದ ಜಗತ್ತಿನ ದರ್ಶನ ಮಾಡಿಸುತ್ತದೆ' ಎಂದು ಪರಿಷತ್ತಿನ ಆಡಳಿತಾಧಿಕಾರಿ ಡಾ.ನಂದಕುಮಾರ ಹೆಗಡೆ 'ಪ್ರಜಾವಾಣಿ'ಗೆ ತಿಳಿಸಿದರು.

ರಾಮನಗರದಲ್ಲಿರುವ ಜಾನಪದ ಪರಿಷತ್ತಿನ ಜಾನಪದ ಲೋಕದ ಆವರಣದಲ್ಲಿ ಗಮನ ಸೆಳೆಯುವ ಗಿರಿಜನ ಶಿಲ್ಪಗಳು

ಜಾನಪದ ಶೈಕ್ಷಣಿಕ ಚಟುವಟಿಕೆ

'ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಜಾನಪದ ಲೋಕದಲ್ಲಿ ಡಿಪ್ಲೊಮಾ ಕೋರ್ಸ್ ನಡೆಯುತ್ತಿದೆ. ಎಚ್.ಎಲ್. ನಾಗೇಗೌಡ ಸಂಶೋಧನಾ ಕೇಂದ್ರದಿಂದ ಕಳೆದೆರಡು ವರ್ಷಗಳಿಂದ ಸಂಶೋಧನಾ ವಿದ್ಯಾರ್ಥಿಗಳಿಗೆ ಫೆಲೋಶಿಪ್ ನೀಡಲಾಗುತ್ತಿದ್ದು, ಈ ಸಾಲಿನಿಂದ ಪಿಎಚ್.ಡಿ ಪ್ರವೇಶಕ್ಕೆ ಮಾನ್ಯತೆ ಸಿಕ್ಕಿದೆ. ರಾಜ್ಯಮಟ್ಟದ ಜಾನಪದ ಗೀತ ಗಾಯನ ಸ್ಪರ್ಧೆ, ವರ್ಷಕ್ಕೊಮ್ಮೆ ಮೂರು ದಿನ ಲೋಕೋತ್ಸವದಲ್ಲಿ ಜಾನಪದ ಕಲೆಗಳ ಪ್ರದರ್ಶನ, ವಿವಿಧ ಕಲಾ ಪ್ರಕಾರಗಳಲ್ಲಿ ಸಾಧನೆ ಮಾಡಿದ 30 ಸಾಧಕರಿಗೆ 'ಲೋಕೋತ್ಸವ ಪ್ರಶಸ್ತಿ', ರಾಷ್ಟ್ರಮಟ್ಟದ ಜಾನಪದ ಸಾಧಕರಿಗೆ 'ನಾಡೋಜ ಎಚ್.ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ' ಹಾಗೂ ಕಲಾಶಾಲೆಯಲ್ಲಿ ಜಾನಪದ ಕಲೆಗಳ ತರಬೇತಿಯನ್ನು ನೀಡಲಾಗುತ್ತಿದೆ. ತಿಂಗಳಿಗೊಮ್ಮೆ ನಡೆಯುವ ಲೋಕಸಿರಿ ಕಾರ್ಯಕ್ರಮದಲ್ಲಿ, ವೈವಿಧ್ಯಮಯ ಕಲಾ ಪ್ರಕಾರಗಳ ಅಪರೂಪದ ಸಾಧಕರನ್ನು ಜಾನಪದ ಲೋಕಕ್ಕೆ ಆಹ್ವಾನಿಸಿ ಅವರೊಂದಿಗೆ ಮಾತುಕತೆ ಹಾಗೂ ಸನ್ಮಾನ ಕಾರ್ಯಕ್ರಮ ಮಾಡಿಕೊಂಡು ಬರಲಾಗುತ್ತಿದೆ. ದಸರಾ ಗೊಂಬೆ ಪ್ರದರ್ಶನ, ನವರಾತ್ರಿ ಬನ್ನಿ ಪೂಜೆ, ಸಂಕ್ರಾಂತಿ ಸುಗ್ಗಿ ಸಂಭ್ರಮ, ಹಳ್ಳಿ ಆಟಗಳ ಪ್ರದರ್ಶನ ಮತ್ತ ಸ್ಪರ್ಧೆ, ರಾಜ್ಯಮಟ್ಟದ ಗಾಳಿಪಟ ಉತ್ಸವವನ್ನು ಪರಿಷತ್ತು ಆಯೋಜಿಸುತ್ತಾ ಬಂದಿದೆ. ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದಂತೆ 130ಕ್ಕೂ ಹೆಚ್ಚು ಪುಸ್ತಕಗಳು ಪರಿಷತ್‌ನಿಂದ ಪ್ರಕಟವಾಗಿದ್ದು, ಅವುಗಳ ಪ್ರದರ್ಶನ ಮತ್ತು ಮಾರಾಟ ನಿರಂತರವಾಗಿ ನಡೆಯುತ್ತಿದೆ' ಎಂದು ಜಾನಪದ ಲೋಕದ ಕ್ಯುರೇಟರ್ ಡಾ. ರವಿ ಯು.ಎಂ ಪರಿಷತ್ತಿನ ಶೈಕ್ಷಣಿಕ ಚಟುವಟಿಕೆಗಳನ್ನು ಸಂಕ್ಷಿಪ್ತವಾಗಿ ಹಂಚಿಕೊಂಡರು.

'ಕಾರ್ಯಚಟುವಟಿಕೆಗೆ ಉತ್ತೇಜನ'

'ಅಮೂರ್ತ ಸಾಂಸ್ಕತಿಕ ಪರಂಪರೆಯ ಸಂರಕ್ಷಣೆಯ ಉದ್ದೇಶಕ್ಕಾಗಿ ಪರಿಷತ್‌ಗೆ ಯುನೆಸ್ಕೊ ಮಾನ್ಯತೆ ಸಿಕ್ಕಿದೆ. ಇದು ಎಚ್.ಎಲ್. ನಾಗೇಗೌಡರ ಶ್ರಮಕ್ಕೆ ಸಿಕ್ಕಿರುವ ಅತಿ ದೊಡ್ಡ ಗೌರವ. ಇದರಿಂದ ಜಾನಪದ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ, ಸಂವರ್ಧನೆ ಮತ್ತು ಪ್ರಸಾರ, ಪ್ರಚಾರ, ದಾಖಲಾತಿ ಮಾಡುತ್ತಿರುವ ಪರಿಷತ್ತಿನ ಕಾರ್ಯಗಳಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಸಿಕ್ಕಂತಾಗಿದೆ. ಪರಿಷತ್ತು ಜಾನಪದ ಕಲಾ ಪ್ರಕಾರಗಳನ್ನು ಹಾಗೂ ಕಲಾವಿದರನ್ನು ಗುರುತಿಸಿ ಪೋಷಿಸುವ ಕೆಲಸವನ್ನು ನಿರಂತರವಾಗಿ ಮಾಡಿಕೊಂಡು ಬರುತ್ತಿದೆ. ಮುಂದೆ ನಮ್ಮ ಪರಂಪರೆಗೆ ಸಂಬಂಧಿಸಿದಂತೆ ಪರಿಷತ್ತು ಅಧ್ಯಯನ ಅಥವಾ ಸಂಶೋಧನೆಗೆ ಮುಂದಾದರೆ ಯುನೆಸ್ಕೊ ನೆರವು ಸಿಗುತ್ತದೆ. ಜಾಗತಿಕ ಮಟ್ಟದಲ್ಲಿ ಸಾಂಸ್ಕೃತಿಕ ಪರಂಪರೆ ಉಳಿಸುವ ಕಾರ್ಯದಲ್ಲಿ ತೊಡಗಿರುವ ಸಂಸ್ಥೆಗಳ ಸಹಯೋಗದಲ್ಲಿ ಸಂಶೋಧನೆ ಮತ್ತು ಅಧ್ಯಯನ ಕೈಗೊಳ್ಳಲು ಹಾಗೂ ಕಾರ್ಯಕ್ರಮಗಳನ್ನು ರೂಪಿಸಲು ಮಾನ್ಯತೆ ನೆರವಾಗುತ್ತದೆ. ಪರಿಷತ್ತಿನ ಕಾರ್ಯಚಟುವಟಿಕೆ ಆಧರಿಸಿ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಹೆಚ್ಚು ಅನುದಾನ ಕೇಳಲು ಮತ್ತಷ್ಟು ಬಲ ಬಂದಿದೆ. ಪರಿಷತ್ತಿನ ಚಟುವಟಿಕೆಗಳನ್ನು ವಿಸ್ತರಿಸುವ ಜೊತೆಗೆ, ಜಾನಪದ ಲೋಕವನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ಕಾರ್ಪೊರೇಟ್ ಸಂಸ್ಥೆಗಳಿಂದಲೂ ಅನುದಾನ ಕೋರಬಹುದು. ಪರಿಷತ್ತಿನ ಜಾನಪದ ಸಂಗ್ರಹಾಲಯದಂತಿರುವ ಜಾನಪದ ಲೋಕಕ್ಕೆ ದೇಶ-ವಿದೇಶಗಳ ಪ್ರವಾಸಿಗರ ಆಕರ್ಷಣೆಯೂ ಹೆಚ್ಚಾಗುತ್ತದೆ' ಎಂದು ಪರಿಷತ್ತಿನ ಅಧ್ಯಕ್ಷ ಪ್ರೊ.ಹಿ.ಚಿ. ಬೋರಲಿಂಗಯ್ಯ ಹೇಳಿದರು.

ಮೊದಲ ಓದು

ರುದ್ರಪ್ಪನವರ ಬದುಕಿನ ದರ್ಶನ

ಡಿ.ವಿ.ಎಸ್ ಕಾಲೇಜು ಸಮಿತಿ ಅಧ್ಯಕ್ಷ ಕೆ.ಎನ್.ರುದ್ರಪ್ಪ ಅವರ ಬದುಕಿನ ದರ್ಶನ ಮಾಡಿಸುವ ಕೃತಿ 'ಕೊಳಲೆ ಕೆ.ಎನ್.ರುದ್ರಪ್ಪ ಮತ್ತು ಮಲೆನಾಡು ಕಥಾನಕ'. ಕೆ.ಎನ್.ರುದ್ರಪ್ಪನವರ ಕುಟುಂಬದ ಸದಸ್ಯರು, ಆಪ್ತರು ಅವರ ಕುರಿತಾಗಿ ಬರೆದ ಲೇಖನಗಳೆಲ್ಲ ಒಟ್ಟಾಗಿ ಈ ಕೃತಿ ರೂಪುಗೊಂಡಿದೆ. ಡಾ.ಎಚ್.ಟಿ.ಕೃಷ್ಣಮೂರ್ತಿ ಕೃತಿಯನ್ನು ಸಂಪಾದಿಸಿದ್ದಾರೆ.

'ನೀವು ಯಾರ ರೀತಿ ಆಗಬೇಕೆಂದು ಇಷ್ಟಪಡುವಿರೋ ಅವರಂತೆ ಆಗುವ ಮೊದಲ ಹೆಜ್ಜೆಯೆಂದರೆ; ಅವರ ಪ್ರವೃತ್ತಿಗಳನ್ನು ಗುರುತಿಸುವುದು. ಬಹುಶಃ ಕೊಳಲೆ ರುದ್ರಪ್ಪಗೌಡರು ಈ ಆದರ್ಶವಾಕ್ಯವನ್ನು ತಮ್ಮ ಬದುಕಿನಲ್ಲಿ ಘೋಷವಾಕ್ಯವನ್ನಾಗಿ ಅಳವಡಿಸಿಕೊಂಡಿದ್ದರೋ ಏನೋ! ಇಲ್ಲದಿದ್ದಲ್ಲಿ ಇಂತಹ ಆದರ್ಶಮಯ ಜೀವನ ಕಥಾನಕ ನಮಗಿಂದು ಪ್ರಾಪ್ತಿಯಾಗುತ್ತಿರಲಿಲ್ಲ. ಒಳ್ಳೆಯ ಸಂದರ್ಭಗಳಲ್ಲಿ ಕೈಕುಲುಕುವುದರಿಂದ ಸಂಬಂಧ ಗಟ್ಟಿಯಾಗುವುದಿಲ್ಲ. ಬಿಕ್ಕಟ್ಟಿನ ಸ್ಥಿತಿಯಲ್ಲಿ ಹೃದಯಕ್ಕೆ ಹತ್ತಿರವಾಗುವುದರಿಂದ ಅದು ಗಟ್ಟಿಯಾಗುವುದು. ಬೇರೆಯವರ ಕಷ್ಟದಲ್ಲಿ ನೆರವಾಗುವುದರಿಂದ ತಪ್ಪಿಸಿಕೊಳ್ಳದೆ ತಮ್ಮ ಜೀವನಯಾನಕ್ಕೆ ಒಂದು ಸಾರ್ಥಕತೆಯನ್ನು ಕಂಡುಕೊಂಡವರು ಕೊಳಲೆ ರುದ್ರಪ್ಪಗೌಡರು' ಎಂದು ಬಿ.ಎಲ್.ಶಂಕರ್ ತಮ್ಮ ಲೇಖನದಲ್ಲಿ ಕೆ.ಎನ್.ರುದ್ರಪ್ಪನವರ ವ್ಯಕ್ತಿತ್ವ ದರ್ಶನ ಮಾಡಿಸುತ್ತಾರೆ.

ರುದ್ರಪ್ಪನವರ ಬೆಳವಣಿಗೆಯಲ್ಲಿ, ಅಭಿವೃದ್ಧಿಯಲ್ಲಿ, ಪ್ರಜ್ಞೆ ಮೂಡುವಲ್ಲಿ ಬಹುಪಾಲು ಪಡೆದ ಅವರ ಕುಟುಂಬ, ಪರಿಸರದ ಕುರಿತು ಬರಹಗಳು ಕೃತಿಯ ಮೊದಲ ಭಾಗ 'ಕೆ.ಎನ್. ರುದ್ರಪ್ಪ ಕಥಾನಕ'ದಲ್ಲಿದೆ. ಇಲ್ಲಿ ರುದ್ರಪ್ಪನವರ ಕುಟುಂಬದವರು, ಸಂಬಂಧಿಕರು ರುದ್ರಪ್ಪನವರ ಜೊತೆಗಿನ ತಮ್ಮ ಒಡನಾಟದ ಕುರಿತು ಬರೆದಿದ್ದಾರೆ. ಶೃಂಗೇರಿಯ ಶಾರದೆ ಸಂಬಂಧ ಕಾಶ್ಮೀರದವರೆಗೂ ಇದೆ. ಜಗತ್ತಿನಲ್ಲಿಯೇ ಅತ್ಯುತ್ತಮವಾದ ಕಾಫಿ ಬೆಳೆಯುವ ನಾಡು. ಸಾಹಿತ್ಯ, ಶಿಲ್ಪಕಲೆಗಳ ಬೀಡು ಹೌದು. ಇಂಥ ಶೃಂಗೇರಿ ಕ್ಷೇತ್ರವನ್ನು ಕೇಂದ್ರವಾಗಿರಿಸಿ ಕೃತಿಯ ಎರಡನೇ ಭಾಗ 'ಮಲೆನಾಡು ಕಥಾನಕ' ಹೆಣೆಯಲಾಗಿದೆ.

ಹಾಗಂತ ಇಡೀ ಕೃತಿ ವ್ಯಕ್ತಿ ಚಿತ್ರಣದಂತೆಯೋ, ಆತ್ಮಕಥೆಯಾಗಿಯೋ ಭಾಸವಾಗುವುದಿಲ್ಲ. ಇಂದಿನ ಪೀಳಿಗೆಗೆ ಸ್ಫೂರ್ತಿಯಾಗುವಂತಹ ರುದ್ರಪ್ಪನವರ ಸಾಧನಾ ಬದುಕಿನ ಅನಾವರಣ ಇಲ್ಲಿದೆ. ಮಲೆನಾಡಿನ ಸಮಸ್ಯೆ, ಹೋರಾಟ, ಶೈಕ್ಷಣಿಕ ಕ್ರಾಂತಿಯ ಕುರಿತಾದ ಸಾಕಷ್ಟು ವಿಚಾರಗಳು ಅಲ್ಲಲ್ಲಿ ಓದಲು ಸಿಗುತ್ತವೆ. ಒಟ್ಟಾರೆ 60 ಲೇಖನಗಳಿದ್ದು, ಆಪ್ತವಾಗುವ ಭಾಷೆಯಿದೆ. ಮಲೆನಾಡಿನ ಸೊಗಡು ಕಾಣುತ್ತದೆ.



ಪು: 284
₹300

ಕೊಳಲೆ
ಸಂ: ಡಾ.ಎಚ್.ಟಿ.ಕೃಷ್ಣಮೂರ್ತಿ
ಪ್ರ: ಗೀತಾಂಜಲಿ ಪುಸ್ತಕ
ಸಂ:9449886390

ಕಥೆ
ವಿಶ್ವನಾಥ ಎನ್ ನೇರಳಕಟ್ಟೆ
ಅವರ
ಕೃತಕ ಬುದ್ಧಿಮತ್ತೆ

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/short-story

ಕವನ
ತೇಜಾವತಿ ಎಚ್. ಡಿ.
ಅವರ
ಮಾಯಾ ಜೋಳಿಗೆ

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://www.prajavani.net/poetry

ಸಾದರ ಸ್ವೀಕಾರ

ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಡಣ್ಣ ಚಕ್ಕು ಕೋಶ್ರಪ್ಪು ಕಥೆಯ — ಗಾಳಿಪಟದಲ್ಲೇ ಗೂಡು!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ರಜಾ ದಿನಗಳಲ್ಲಿ ಗಾಳಿಪಟ ಹಾರಿಸುವ ಹವ್ಯಾಸ ಹೊಂದಿದ್ದ. ಪ್ರತಿ ಬಾರಿಯೂ ಆತ ಹಾರಿಸುತ್ತಿದ್ದ ಗಾಳಿಪಟದ ದಾರವನ್ನು ಹಕ್ಕಿಯೊಂದು ಕೊಕ್ಕಿನಲ್ಲಿ ತುಂಡರಿಸಿ, ಗಾಳಿಪಟವನ್ನು ಹೊತ್ತೊಯ್ಯುತ್ತಿತ್ತು. ಒಂದು ದಿನ ಗಾಳಿಪಟವನ್ನು ಒಯ್ದ ಹಕ್ಕಿಯನ್ನು ಗುಂಡ ಹಿಂಬಾಲಿಸಿದ. ಆ ಹಕ್ಕಿಯು ಆ ಗಾಳಿಪಟಗಳನ್ನು ಒಟ್ಟು ಮಾಡಿ ಗೂಡನ್ನು ಕಟ್ಟಿತ್ತು. ಅದನ್ನು ಕಂಡು ಗುಂಡ ಆಶ್ಚರ್ಯಗೊಂಡ.



ಅಕ್ಷರ ಆಟ

ಇಲ್ಲಿ ಕೊಟ್ಟಿರುವ 'ತ್ತ' ಒತ್ತಕ್ಷರಗಳಿಗೆ 'ತ'ಕಾರ ಬಳ್ಳಿಯ ಅಕ್ಷರ ತುಂಬಿ ಎರಡಕ್ಷರಗಳ ಪದ ಮಾಡಿ

1		ತ್ತೆ
2		ತ್ತು
3		ತ್ತು
4		ತ್ತು
5		ತ್ತಿ

ಗಣಿತದಲ್ಲಿ ಗರ್ದಿ ಗಮ್ಮತ್ತು

ಚಮತ್ಕಾರ ಗುಣಕಾರಗಳು

1. 593593 X 593593
= 352352649349
2. 1953125 X 512
= 1000000000
3. 34227 X 36070
=1234567890

ಈ ಲೆಕ್ಕಗಳ ಉತ್ತರಗಳು ಸರಿ ಇವೆಯೇ ಎಂದು ಪರಿಶೀಲಿಸಲು ಲೆಕ್ಕ ಮಾಡಿ ನೋಡಿ.

ಮೋಜಿನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ ಹತ್ತು ಇಂಗ್ಲಿಷ್ ಪದಗಳಿಗೆ ಪಟ್ಟಿಯಲ್ಲಿ ಕೊಟ್ಟಿರುವ ಹತ್ತು ಪದಗಳನ್ನು ಹೊಂದಿಸಿ ಎರಡು ಪದಗಳನ್ನು ಸೇರಿಸಿ ಒಂದೇ ಪದ ಆಗುವಂತೆ ಮಾಡಿ.

ಪದ ಪಟ್ಟಿ				
FORD	HER	GO	DOWN	KEY
SIDE	GET	SOME	ICE	US

1	MAN	
2	OFF	
3	FOR	
4	HAND	
5	OX	
6	GO	
7	LOT	
8	FAT	
9	BE	
10	DON	

ಬ್ರೇನ್‌ವೀಟಾ ಆಟ

ಇಲ್ಲಿ ಕೊಟ್ಟಿರುವ ಐದು ಸ್ವರಗಳು ಒಳಗೊಂಡಂತೆ ಒಂದು ಸಂಖ್ಯೆಯನ್ನು ಬರೆಯಬೇಕು. ಬಿಟ್ಟಿರುವ ಚೌಕಗಳಲ್ಲಿ ಯಾವ ವ್ಯಂಜನಾಕ್ಷರ ತುಂಬಬೇಕು ಯೋಚಿಸಿ.

		O		U			E		A			I	

ಪ್ರಾಸಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ			
ಸ	ಭಂ	ಪ್ರ	ಉ
ನ	ನಿ	ವಿ	ಮು
ಗುಂ	ಸು	ಬೆ	ಖ

ಸಂಖ್ಯೆ			
1		ಕೃ	ತಿ
		ಕೃ	ತಿ
2		ನ್ನು	ಡಿ
		ನ್ನು	ಡಿ
3		ಚಿ	ತ್ತ
		ಚಿ	ತ್ತ
4		ಡಾ	ರ
		ಡಾ	ರ
5		ಲಿ	ಗೆ
		ಲಿ	ಗೆ
6		ನ	ಗೆ
		ನ	ಗೆ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದ ಬಂಧ: 1.ಘೋರ್ಪಡೆ-ಸೇರ್ಪಡೆ 2.ಪತ್ತಾರ-ಚಿತ್ತಾರ 3.ಕೊಸರು-ಹೆಸರು 4.ಬಡಿತ-ಕಡಿತ 5.ಕವಳಿ-ಜವಳಿ 6.ಸರದಿ-ವರದಿ

ಮೋಜಿನ ಇಂಗ್ಲಿಷ್: 1.COLD 2.MILK 3.RISK 4.BLOW 5.COIN 6.BELT 7.BEST 8.SLIM 9.BOOK 10.MOST

ಪದಶೋಧ: ಕತ್ತೆಕಿರುಬ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಎಂ. ರಿಶಾನ್ ಅಹಮದ್
ಸಿರುಗುಪ್ಪ

ಸನ್ನಿಧಿ ಕವಳಿಕಟ್ಟಿ
ಬೆಂಗಳೂರು

ಅರ್ನವ್ ಸೂರ್ಯ ಎಸ್.
ದೊಡ್ಡಕಲ್‌ಸಂದ್ರ

ಮುತ್ತವ್ವ ವೈ.ಸಿ.
ನರಗುಂದ

ಹಾರ್ದಿಕ್ ಬಾಲಾಜಿ ಎಚ್.ಜಿ.
ಬೆಂಗಳೂರು

ಸೋನಾಕ್ಷಿ ಜೆ.ಎಚ್.ಗೌಡ
ಜವರನಹಳ್ಳಿ

ಪ್ರಜಾವಾಣಿ ನವವರ್ಣ

ಭಾಗವಹಿಸಿದ ಎಲ್ಲರಿಗೂ ಧನ್ಯವಾದಗಳು. ಈ ರೀತಿಯ ಇನ್ನೂ ಹಲವಾರು ಚಟುವಟಿಕೆಗಳಲ್ಲಿ ಭಾಗವಹಿಸಲು ಈ ವಾಟ್ಸಾಪ್ ಸಂಖ್ಯೆಗೆ ನಿಮ್ಮ ಸಂದೇಶ / ಭಾವಚಿತ್ರಗಳನ್ನು ಕಳುಹಿಸಿ.

7338018541

ಹೆಚ್ಚಿನ ಮಾಹಿತಿಗೆ ಪ್ರಜಾವಾಣಿಯನ್ನು ಪ್ರತಿನಿತ್ಯ ತಪ್ಪದೇ ಓದಿರಿ

Sri Krishna Pure Ghee

ನವರಾತ್ರಿ ನವಖಾದ್ಯ ಸ್ಪರ್ಧೆ

ಭಾಗವಹಿಸಿದ ಎಲ್ಲರಿಗೂ
ಧನ್ಯವಾದಗಳು
ಸ್ಪರ್ಧೆಯ ಫಲಿತಾಂಶ ಶೀಘ್ರದಲ್ಲಿ ತಿಳಿಸಲಾಗುವುದು!

ಕೋಮಲಾ ಮತ್ತು ಗೆಳತಿಯರು

ಲೀಲಾವತಿ ಮತ್ತು ಕುಟುಂಬ

ವಿಸ್ಮಯ

ಧಮ್ಮನಾಗಿ ಸುಮೋ ಲೀವ್ಸ್

ವಿದ್ಯಾ ಯೋಗೀಶ್

ಶ್ರಾವ್ಯ & ಗೆಳತಿಯರು

ಆಶಾ

ಪ್ರೀತಿ & ಇಂದಿರಾ

ಇಂದಿರಾ ಮತ್ತು ಗೆಳತಿಯರು

ಸುಧಾ, ವರ್ಷ


ಐಶಾನಿ ಮತ್ತು ಸಹೋದರಿಯರು

ಭಾರತಿ ಮತ್ತು ಗೆಳತಿಯರು


ಅನುಷ್ಕಾ

ಎಂಪಿಎಂ ಕಿಟ್ಟಿ ಗ್ರೂಪ್

ಶ್ರೀ ಕೃಷ್ಣ ತುಪ್ಪ
ಆನ್‌ಲೈನ್ ನಲ್ಲಿ ಕೊಳ್ಳಲು
ಸ್ಕ್ಯಾನ್ ಮಾಡಿ

ಸಾಕ್ಷಿ

ರೂಪಾ ಮತ್ತು ಗೆಳತಿಯರು

ಮರಿಯಮ್ಮ ಮತ್ತು ಗೆಳತಿಯರು

ನಯನಾ

ಅನಿಕಾ

ಗ್ರೀಷ್ಮಾ ಮತ್ತು ತಂಡ

ರುಚಿ
ಆರೋಗ್ಯ
ಪರಿಮಳ
ಎಲ್ಲಕ್ಕೂ ಸೈ

ಸ್ನೇಹವೃಂದ ತಂಡ

ಶಿಲ್ಪಾ ಮತ್ತು ಗೆಳತಿಯರು

ಹರಿಣಿ ಮತ್ತು ಗೆಳತಿಯರು

ರಮಾದೇವಿ ಕುಟುಂಬ

ಧನ್ಯಾ ಮತ್ತು ಧೃತಿ

ನಿತ್ಯಾ ಮತ್ತು ಗೆಳತಿಯರು

ಅನ್ನಪೂರ್ಣ ಮತ್ತು ಗೆಳತಿಯರು

ನಾಡಿನಾದ್ಯಂತ ಸಾವಿರಾರು ಜನರು ಶ್ರೀ ಕೃಷ್ಣ ತುಪ್ಪ ಬಳಸಿ ಮಾಡಿದ ಅಡುಗೆಯಿಂದ ಬಹುಮಾನಗಳು ಗೆದ್ದಿದ್ದಾರೆ*

ಮಾನಸಿಕ ಆರೋಗ್ಯದ ಬಗ್ಗೆ ಇಲ್ಲಿನ ವೈದ್ಯರ ಜತೆಗೆ ಡಾ.ವಿವೇಕ್ ಮೂರ್ತಿ ಚರ್ಚೆ

ಅಮೆರಿಕದ ಸರ್ಜನ್ ಜನರಲ್ ನಗರದ ಆಸ್ಪತ್ರೆಗೆ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕದ 'ಸರ್ಜನ್ ಜನರಲ್' ಆಗಿ ಕಾರ್ಯನಿರ್ವಹಿಸುತ್ತಿರುವ ಡಾ. ವಿವೇಕ್ ಮೂರ್ತಿ ಅವರು ಇಲ್ಲಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಹಾಗೂ ಜಯದೇವ ಹೃದ್ರೋಗ ಸಂಸ್ಥೆಗೆ ಭೇಟಿ ನೀಡಿ, ಮಾನಸಿಕ ಆರೋಗ್ಯದ ಬಗ್ಗೆ ಚರ್ಚಿಸಿದರು.

ಮೂರ್ತಿ ಅವರು ಕರ್ನಾಟಕ ಮೂಲದವರಾಗಿದ್ದು, ಅವರ ಪಾಲಕರು ಮಂಡ್ಯ ಜಿಲ್ಲೆಯವರಾಗಿದ್ದಾರೆ. ವಿಶ್ವ ಮಾನಸಿಕ ಆರೋಗ್ಯ ದಿನದ ಪ್ರಯುಕ್ತ ಅವರು ಜಾಗತಿಕ ಪ್ರವಾಸ ಕೈಗೊಂಡಿದ್ದಾರೆ. ನಿಮ್ಹಾನ್ಸ್‌ಗೆ ಭೇಟಿ ನೀಡಿದ ಅವರಿಗೆ ಸಂಸ್ಥೆಯ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ ಅವರು ಟೆಲಿ ಮನಸ್ ಕೇಂದ್ರ, ನಿಮ್ಹಾನ್ಸ್ ಡಿಜಿಟಲ್ ಅಕಾಡೆಮಿ ಸೇರಿ ವಿವಿಧ ವ್ಯವಸ್ಥೆಗಳ ಬಗ್ಗೆ ಮಾಹಿತಿ ನೀಡಿದರು. ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನದ ಬಗ್ಗೆ ಭಾರತ-ಅಮೆರಿಕ ನಡುವಿನ ಸಹಭಾಗಿತ್ವದ ಬಗ್ಗೆಯೂ ಅವರು ಚರ್ಚಿಸಿದರು.

ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಟೆಲಿ ಮನಸ್ ಬಗ್ಗೆ ಮಾಹಿತಿ ನೀಡಿದ ಡಾ. ಪ್ರತಿಮಾ ಮೂರ್ತಿ, 'ಆರೋಗ್ಯ ಕ್ಷೇತ್ರದ ಗಮನಾರ್ಹ ಸಾಧನೆಗೆ ವಿಶ್ವ ಆರೋಗ್ಯ ಸಂಸ್ಥೆಯಿಂದ ಪ್ರತಿಷ್ಠಿತ ನೆಲ್ಸನ್ ಮಂಡೇಲಾ ಪ್ರಶಸ್ತಿಯನ್ನು ಸಂಸ್ಥೆ ಈ ವರ್ಷ ಪಡೆದಿದೆ. ಟೆಲಿ ಮನಸ್ ಸಹಾಯವಾಣಿಯ ಮೂಲಕ ಮಾನಸಿಕ ಸಮಸ್ಯೆಗಳಿಗೆ ಪರಿಹಾರೋಪಾಯ ಒದಗಿಸಲಾಗುತ್ತಿದೆ. ಈಗಾಗಲೇ ದೇಶದ ವಿವಿಧೆಡೆಯಿಂದ 14 ಲಕ್ಷಕ್ಕೂ ಹೆಚ್ಚು ಕರೆಗಳನ್ನು ಸ್ವೀಕರಿಸಲಾಗಿದೆ. ಮಾನಸಿಕ ಆರೋಗ್ಯ, ನರವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನೆಗೆ ಆದ್ಯತೆ ನೀಡಲಾಗುತ್ತಿದೆ' ಎಂದರು.

ಜಯದೇವ ಹೃದ್ರೋಗ ಸಂಸ್ಥೆಯಲ್ಲಿ ಮಾತನಾಡಿದ ಡಾ. ವಿವೇಕ್ ಮೂರ್ತಿ, 'ಮಾನಸಿಕ ಆರೋಗ್ಯ ಕ್ಷೇತ್ರದ ಬಲವರ್ಧನೆಗೆ ಒಟ್ಟಾಗಿ ಕಾರ್ಯನಿರ್ವಹಿಸಬೇಕಿದೆ. ಆಗ ಮಾನಸಿಕ ಆರೋಗ್ಯದ ಬಿಕ್ಕಟ್ಟನ್ನು ಎದುರಿಸಬಹುದು' ಎಂದು ಹೇಳಿದರು.

ನಿಮ್ಹಾನ್ಸ್‌ನ ಟೆಲಿ ಮನಸ್ ವ್ಯವಸ್ಥೆಯ ಬಗ್ಗೆ ಡಾ.ವಿವೇಕ್ ಮೂರ್ತಿ ಅವರಿಗೆ ಸಂಸ್ಥೆಯ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ ವಿವರಿಸಿದರು

ಫೇಸ್‌ಬುಕ್‌ನಲ್ಲಿ ನಕಲಿ ಖಾತೆ: ದೂರು

ಬೆಂಗಳೂರು: ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೆಸರಿನಲ್ಲಿ ಫೇಸ್‌ಬುಕ್‌ನಲ್ಲಿ ನಕಲಿ ಖಾತೆ ತೆರೆದಿರುವ ಬಗ್ಗೆ ದೂರು ದಾಖಲಿಸಲಾಗಿದೆ.

ನಕಲಿ ಖಾತೆ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ಅಕ್ಟೋಬರ್ 11ರಂದು ಸಿಇಎನ್ ಪೊಲೀಸ್ ಠಾಣೆಯಲ್ಲಿ (ಕೇಂದ್ರ ವಿಭಾಗ) ಎಫ್‌ಐಆರ್ ದಾಖಲಿಸಲಾಗಿದೆ. ಸಾಮಾಜಿಕ ಜಾಲತಾಣಗಳ ವಂಚಕರು ಪಾಲಿಕೆಯ ಮುಖ್ಯ ಆಯುಕ್ತರ ಭಾವಚಿತ್ರ, ಹೆಸರು, ಹುದ್ದೆ ಮತ್ತು ಸಂಸ್ಥೆಯ ಹೆಸರನ್ನು ದುರುಪಯೋಗ ಪಡಿಸಿಕೊಂಡು ನಕಲಿ ಖಾತೆ ತೆರೆದಿದ್ದಾರೆ ಎಂದು ಮುಖ್ಯ ಆಯುಕ್ತರ ಪರವಾಗಿ ಸಾರ್ವಜನಿಕ ಸಂಪರ್ಕಾಧಿಕಾರಿ ಈರಣ್ಣ ಅವರು ದೂರು ನೀಡಿದ್ದಾರೆ.

ನ.15ರಿಂದ ವೀರಲೋಕ 'ಪುಸ್ತಕ ಸಂತೆ'

ಬೆಂಗಳೂರು: ವೀರಲೋಕ ಪ್ರಕಾಶನ ಸಂಸ್ಥೆಯು ನ.15ರಿಂದ ನ.17ರವರೆಗೆ ಜಯನಗರದ ಶಾಲಿನಿ ಮೈದಾನದಲ್ಲಿ 'ಪುಸ್ತಕ ಸಂತೆ' ಹಮ್ಮಿಕೊಂಡಿದೆ.

ಸಂಸ್ಥೆ ನಡೆಸುತ್ತಿರುವ ಎರಡನೇ ಪುಸ್ತಕ ಸಂತೆ ಇದಾಗಿದೆ. ಮೂರು ದಿನಗಳು ನಡೆಯುವ ಈ ಪುಸ್ತಕ ಸಂತೆಯಲ್ಲಿ ರಾಜ್ಯದ ವಿವಿಧೆಡೆಯ ನೂರಕ್ಕೂ ಅಧಿಕ ಪ್ರಕಾಶಕರು ಪಾಲ್ಗೊಳ್ಳಲಿದ್ದಾರೆ. ಕನ್ನಡ ಪುಸ್ತಕಗಳ ಪ್ರದರ್ಶನ ಹಾಗೂ ಮಾರಾಟ ಸಂತೆಯಲ್ಲಿ ನಡೆಯಲಿದೆ. ಪುಸ್ತಕ ಮಳಿಗೆಗಳ ಜತೆಗೆ ಆಹಾರ, ಕರಕುಶಲ ವಸ್ತುಗಳು ಸೇರಿ ವಿವಿಧ ಮಳಿಗೆಗಳು ಇರಲಿವೆ. ಮಕ್ಕಳಿಗಾಗಿ ಆಟ ಹಾಗೂ ಮನೋರಂಜನೆಯ ಪರಿಕರಗಳನ್ನು ವ್ಯವಸ್ಥೆ ಮಾಡಲಾಗುತ್ತದೆ ಎಂದು ಸಂಸ್ಥೆಯ ಮುಖ್ಯಸ್ಥ ವೀರಕಪುತ್ರ ಶ್ರೀನಿವಾಸ ತಿಳಿಸಿದ್ದಾರೆ.

ಪುಸ್ತಕ ಮಳಿಗೆಗಳಲ್ಲಿ ಲೇಖಕರನ್ನು ಭೇಟಿ ಮಾಡುವ ಅವಕಾಶ ಒದಗಿಸಲಾಗುತ್ತದೆ. ಅವರೊಂದಿಗೆ ಸಂವಾದ ನಡೆಸಿ, ಹಸ್ತಾಕ್ಷರವನ್ನೂ ಪಡೆಯಬಹುದಾಗಿದೆ. ಮೂರು ದಿನಗಳು ಸಂಗೀತ ಸಂಜೆ ಇರಲಿದ್ದು, ವೀರಲೋಕ ಪ್ರಕಟಣೆಯ ವಿವಿಧ ಪ್ರಕಾರಗಳ ಇಪ್ಪತ್ತು ಪುಸ್ತಕಗಳನ್ನು ಈ ಅವಧಿಯಲ್ಲಿ ಲೋಕಾರ್ಪಣೆ ಮಾಡಲಾಗುತ್ತದೆ. ಮೂರು ದಿನಗಳಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆಯಿದೆ ಎಂದಿದ್ದಾರೆ.

ಈ ಪುಸ್ತಕ ಸಂತೆಯಲ್ಲಿ ಭಾಗವಹಿಸಲು ಅಥವಾ ಭಾಗವಾಗಲು 7022122121, 8861212172 ದೂರವಾಣಿ ಸಂಖ್ಯೆಗೆ ಸಂಪರ್ಕಿಸಿ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Agricultural Land Converted

Out-Station

HUBLI AGRICULTURAL LAND FOR SALE
Measuring 23 acres
Located at 11km on Hubli-Karwar Road with mango plantation, well, 2 borewell.
Also suitable for any Industry, Education centre, Resort or Convert to NA.
Location: Opposite to Hubli Water World, Anchatageri Village
Brokers excuse.
Genuine Party Contact
9108133206

Commercial Building

J P Nagar

J.P.NAGAR 3RD Phase, Commerical near Mini Forest 60' Road, 42x75 Corner 5 floors Building, 12,00,00,000/-. 9731775536.

Commercial Land

Kanakapura Road

"KANAKAPURA EXACT opp.Bus stand 3500 Sq.ft total area Commercial Site sale, Genuine Buyers Contact: 9902973903"

Mysore Road

FOR SALE

COMMERCIAL LAND
Warehouse Converted Land, Main road attach @ Chikallur fully compound covered, 22000 sqft. Available.Rs. 2500 /sqft (FIXED) M : 9900040216

Commerical

Basavanagudi

COMMERCIAL LEASE (65 years). Corner 8000 sft. Builtup 18000 sft. RENTAL POTENTIAL Rs 3 CR YEARLY. Whatsapp (message only) 99029-15651. Price Rs 15 cr. Brokers excuse.

Mysore

MYSORE, 50X80 commercial site, 2nd phase, Vijayanagar 4th Stage. East facing and on NPS International school Road. Serious buyers Contact @ 919880413134, 6362718455.

Flat

Domlur

FOR SALE 2 BHK Flat 1450 sqft East facing, Semi furnished new flooring. Covered parking. Brokers Excuse. Contact: 9449008834.

Uttarahalli

3/4 BHK New Luxurious Flat Sale, A khatha, Ready-move. 75L/ 1cr. Carparking, Cauvery. Vaasthu. 9844394444, 9019110623.

Banashankari

DUPLEX THREE and Half Bedroom Luxurious Penthouse Title Clear OC 3118 sqft Rs 2.53Cr Vegetarians 9845228595 9844021380

Rajajinagar

PURVA BLUBELLE Adjacent to Magadi road Metro station Rajajinagar Centre of the City 3 Bedroom & Exclusive 5Bedroom Flats +servant room with all luxurious Amenities, Only few units for Sale. Contact: 9844027560

Farm House/ Land/ Resorts

Multiple Locations

NANDI HILLS road 1/2 acre gated ekhata 15 furnished rooms 9.25Cr, 60x43 plot 50L Ph: 9677002197

House

BEL Layout

SALE 60X40 WITH 4 BHK duplex house prime location BEL layout S/F-15500/sq.ft 9844264852 / 9449059015

Frazer Town

NEW HOUSE for Sale. 2 BHK 950 sqft, #19, Bourdillon Road, Frazer Town near Hajee Ismail Sait Masjid. 9845797687, 6362064085.

Wilson Garden

WILSON GARDEN BDA,40' Road Residential 50x80 East facing Old house, Sale 25,000/- sft. 9731775536.

Hubblli

'HOUSE FOR SALE Located Near SHIRUR PARK CIRCLE, Vidyanagar HUBLI. Contact: 8618010421'

Andrahalli

FOR SALE 25x33 feet 3000 sqft 2 & 1 BHK 5 house building, good rent income. E Katha. Andrahalli, Bangalore. Price 99 laks. Call : 9901889675

T C Palya

"TC.PALYA GATED Community BBMP Independent House with Ground and First Floor 1.60`Crore. Owner. 9449008336"

Industrial & Factory

Tumkur Road

SALE 45000 SFT Commercial Land Yeshwanthpur Ring Road Facing. Near Dabaspet 9.5 Acres Industrial. 9141326819

Sites

Anjanapura

BDA E-AUCTION East-South Corner Site No 902`for Sale`at Further Extension`of Anjanapura 11th`Block Bannerghatta`Rd 2645sqft Rs.14500/- Call:9448138640 9731125533

Banashankari

BDA-SITES Available @ Banashankari 6th Stage, Anjanapura All Measurement 20x30, 30x40, 40x60, 50x80 Call Rajesh: 9945610779

KANAKAPURA ROAD, Banashankari 6th Stage, 50x80 Site, And Concorde Napa Vally Villa For Sale: 9916817739

Hennur

40*50 N/F Site 'B' Khata for Sale 7000/-, 30*40 E/F Site 'B' Khata. 9972849555/ 7259678555.

Jayanagar

INDEPENDENT houses/ Sites in Jayanagar 4th T Block 50x56, 40x65 & 40x60 at attractive prices call Farid consultants 9880178659, 6366864478

Nagarabhavi

"NAGARABHAVI NEAR BDA Complex 30x45 North 40x60 South 100% Vasthu BDA Site Sale. 9448432633/ 7022218837"

R T Nagar

WANTED SITES -Rtnagar, Anandnagar, Sultanpalya, Kanakanagar .Ph. 9845575731

Sanjaynagar

RMV BHOOPASANDRA BDA Site 29'x57' E/F 40' Road, Near Central Excise, Off Chawla Rd. 289 Lakhs (@17500/Sq.ft.) Owner: 9980555558

Vishweshwariah Layout

AVAILABLE/WANTED. DIRECT Owner 20x30, 30x40/ House. Vishweswaraiah Layout, Near Vidyanikethan School. Contact: 8971851966, 9880781399

"50X80 NORTH Vishveshwaraiah 1st Block 80`ft parallel`Road &`6th Block KLE Law College 80`ft`Road. 9448432633/ 7022218837"

Akshaynagar

SALE COMMERCIAL 1.27 Acres at Akshaya Nagar on DLF Road 80feet Road ct: 9844134068 9066399102

Chennapatna

BMICAPA APPROVED Residential DC Converted 3Acre Land for Sale, Channapatna Town Limits, Price 4.25Cr per Acre, Call- 9845188137

REAL ESTATE BUYING

Commercial Land

General

REQUIRED, LANDS from Wise land owners for JV Apartments, Villas & Layouts for our Reputed builders in Bangalore & Mysore. Dev: 8861214913

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact:9902038118, 9449060605

WANTED BDA & BBMP SITES. Anjanapura, JP.Nagar,Banashankari 6th Stage, Vishweshwaraiah Layout. Any Measurements Immediate Settlement Genuine Sellers Contact: 9972223222, 9606632777

Kanakapura Road

WANTED SITE 30x40, 40x60, Anjanapura BDA, Banashankri 6th Stage, BCCHS Layout, Investment Purpose. Agent Excuse. Call: 9663454878.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

"WANTED SITES Any measurement Vishveshwaraiah Layut, Nagarabhavi, RHBCS, MPM, Sorrounding, Genuine Sellers/ Oweners Contact: 7259675150"

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology and Painting work. Call-9880916988

RENTAL PROPERTIES

Accommodation Available

Commercial

BENKI NAWAB STREET S.P.ROAD 250SQ FT COMMERCIAL SPACE AVAILABLE ON 2nd & 3rd FLOOR CONTACT 9885532271 / 9900503980

'11000 SQUARE feet warehouse available for rent near Tin Factory, Old Madras Road, Bangalore contact 9243109977'

Flats

KASTURINAGAR FLAT, Gopalan Apts, Large Luxury 1 BHK, Monthly rent Rs 35000 plus Maintenance fee. No Car park. Not Negotiable. Contact @ 919880413134, 6362718455.

Industrial And Factory

AVAILABLE OF Industrial Shed of 95000 sqft at Soukya Road, Whitefield. Contact:9341234288/ 9663224353/ 9845417487.

VACANT LAND 6300 SFT SUITABLE FOR GODOWN/ INDUSTRY IN BANASHANKARI INDUSTRIAL AREA, BSK 2ND STAGE NEAR KRISHNA GRAND HOTEL: 9845582152

Villas/Bunglows

KASTURINAGAR VILLA Bungalow, Clean and modern design with 2 car park, 2 BHK GF, 2 BHK FF, 1+1/2 BHK SF + Den Pent house with Terrace access. Monthly rent Rs 35,000 per unit OR Full building at 1 Rs Lakh per month. Not Negotiable. Contact @ 919880413134, 6362718455.

BUSINESS

Business Offers

Finance

WE ARE doing Unsecured Business loan from 1Crore and above.Home Loan, Mortgage Loan, Commercial buildings purchase loan forContractors-Schools & Colleges, Hospitals, Medical shops . OD - Term Loans for industries etc., from financial Institutions, Contact Mrs. Jyothi,8971132289.

General

BUSINESS OPPORTUNITY to Earn 50k/m part/ Full time, in Property Development co. Interested call me 9663391355.

OTHERS

Classifieds Billboards

Fitness Equipments

BRAND NEW Automatic foot Massager for immediate SALE 9900084198

PUBLIC NOTICE

ಸಾರ್ವಜನಿಕ ಸೂಚನೆ
Apollo Cradle & Children's Hospital
ಅಪೋಲೊ ಕ್ರ್ಯಾಡ್ಲ್ ಮತ್ತು ಚಿಲ್ಡ್ರನ್ ಹಾಸ್ಪಿಟಲ್, ಕೋರಮಂಗಲ
ಈ ಮೂಲಕ ತಿಳಿಸುವುದು ಏನೆಂದರೆ, 1ನೇ ಅಕ್ಟೋಬರ್ 2011 ರಿಂದ 31ನೇ ಸೆಪ್ಟೆಂಬರ್ 2014 ರವರೆಗಿನ ಅವಧಿಗೆ ಸಂಬಂಧಿತ ಒಳರೋಗಿ ವೈದ್ಯಕೀಯ ದಾಖಲಾತಿಗಳನ್ನು (ಕರಡು ಪ್ರತಿಗಳು) ನವೆಂಬರ್ 10, 2024 ರೊಳಗೆ ನಾಶಗೊಳಿಸಲಾಗುತ್ತದೆ.
ಈ ಕುರಿತಂತೆ ಯಾವುದೇ ರೋಗಿಯು ಅಥವಾ ಅವರ ಉತ್ತರಾಧಿಕಾರಿಯು (ರೋಗಿಯ ಲಿಖಿತ ಅಧಿಕೃತತೆಯ ಅಡಿಯಲ್ಲಿ) ವೈದ್ಯಕೀಯ ದಾಖಲೆಗಳ ಒಂದು ಪ್ರತಿಯನ್ನು ಪಡೆಯಲು ಬಯಸುವುದಾದಲ್ಲಿ, ಅಂತಹವರು 10 ನವೆಂಬರ್, 2024 ರೊಳಗೆ ವೈದ್ಯಕೀಯ ಸೇವೆಗಳ ಮುಖ್ಯಸ್ಥರಿಗೆ ಲಿಖಿತ ಮನವಿ ಸಲ್ಲಿಸಿ ಪಡೆದುಕೊಳ್ಳಬಹುದು.

JOB OPPORTUNITIES

General

ACCOUNTANT AND DATA ENTRY Specialist required, Himanshu Transport at Basavanagudi, send your Resume at himanshutransport1@gmail.com /Call: 9886292780. Vacancy- 2.

EARN MORE than Rs:50,000/- per month, Part/ Full time, Age above 30 Years, Call: 9343616020

Hotel

WANTED IMMEDIATELY ADMIN MANAGER, RESTAURANT MANAGER, WAITERS, COOKS, COOLJOINT INCHARGE. Good Salary. UNCLE's KITCHEN: 99000-54468

Teachers/ Professors

ST JOSEPH'S BOYS' HIGH SCHOOL, Museum Road, Bengaluru
REQUIRES TEACHERS for the ISC (PG with B Ed) & ICSE (UG with B Ed) for all Subjects.
We are also looking for qualified and competent Teachers to join our Pre-Primary Team. Please send an email with your CV & recent photograph mentioning the post applied for in the subject line. Also, submit a hard copy of your CV to the school office at the earliest.
School Name and Address: St Joseph's Boys' High School, 27, Museum Road, Bengaluru 560025.
Phone: 8884200548
Email:recruitment@sjbhs.edu.in
Website: www.sjbhs.edu.in

Part-Time Jobs

BEST JOB Opportunity Looking for Retired, VRS, Homemakers, Age Minimum 40 Years Income 50K Monthly: 9886641282/ 6362220162

Marketing & Sales

NEW INDIA ELECTRICALS LTD, (A 55 Year Old Company) JC Road,Bangalore-02. WANTED CUSTOMER SUPPORT EXECUTIVES/ SALES EXECUTIVES/ BUSINESS DEVELOPMENT EXECUTIVES, For Immediate Appointment. (MALE/ FEMALE). Qualification: Commerce/ BSc/ ITI Graduate, Skills: Basic Computer/ Good Communication, Experience: 2-4 Years Preferred, Salary: 20,000- 30,000/- Ph: 9343833300 Mail: jatinshah@newindiaelectricals.com

WANTED EXPERIENCED Salesman having vehicle for outdoor canvassing from Industries. Attractive salary. 'MAHAVEER CHEMICALS' 280,1st Main Road, Chamrajpet, Bangalore-18

PROPERTY CORNER

ಕ್ಲಾಸಿಫೈಡ್ಸ್

ನಾಡಿನ ಸಮಸ್ತ ಜನತೆಗೆ ನವರಾತ್ರಿಯ ಶುಭಾಷಯಗಳು
DC CONVERSION E KHATA
SITES FOR SALE
ಯಲಹಂಕ
ಬಾಗಲೂರು Circle to Budigere Road
• REVA University
• Delhi Public School
• Country Club
• Attached SEZ
₹3,800 ₹3,600 per sqft
ನವರಾತ್ರಿಯ ವಿಶೇಷ ಕೊಡುಗೆ
ಯಲಹಂಕ ಬಾಗಲೂರು
SEZ Road, Vidya Nagar Cross, Venkateswara Engg. College
UPCOMING BBMP LIMITS
₹4,200 ₹4,000 per sqft
ನಿರ್ಮಾಣಕ್ಕೆ ಸಿದ್ಧವಾಗಿದೆ ಬ್ಯಾಂಕ್ ಸಾಲ @ LIC HFL ICICI Bank
9880 149 159 | 9900 698 748

Commercial Property FOR SALE & RENT
IMMIDIATE POSSESSION

VACANT PROPERTY
North East Corner Commercial Property located in the heart of MALLESHWARAM In the Densely Populated Market Area
11th cross, Sampige road, Malleshwaram.
Property is spread on 3600 sqft area offers around 18 SHOPS on the ground & basement,
it has 4 levels
Basement, Ground, 1st and 2nd floor.
interested parties please contact:
97408 00003 / 74118 10970
OPENING A GATEWAY TO VARIOUS BUSINESS OPPORTUNITIES
YIELD HIGH RENTAL INCOME

WEEKEND CORNER

ಕ್ಲಾಸಿಫೈಡ್ಸ್

PERSONAL

Change of Name

CHANGE OF NAME
I, Heera Raju Boregowda D/o Raju Boregowda & Malathi Krishnegowda , residing at 39, Sajju Veedu, 3rd Main, Malagala 2nd Stage, Nagarabhavi, Bengaluru- 91, have changed my name to HEMA RAJU holds aadhaar, vide affidavit dt.10.09.2024 before Notary H.R.Karunakara, Bengaluru. Henceforth I shall be called as Hema Raju only.

I MEGHANA, R/o. Muthyala Nagar Bangalore, changed my name as Meghana M.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಅಧಿಕೃತ ನೈಸರ್ಗಿಕ ಎಳೆಗಳ ಬಟ್ಟೆ ರೇಷ್ಮೆ, ಕಾಟನ್, ಲಿನೆನ್ ಸೀರೆ, ಕುರ್ತಿಗಳು ಮತ್ತು ಇನ್ನೂ ಅನೇಕ ಉತ್ಪನ್ನಗಳು
ನ್ಯಾಷನಲ್ ಸಿಲ್ಕ್ ಎಕ್ಸ್‌ಪೋ
ನೇರವಾಗಿ ನೇಕಾರರಿಂದ ಪ್ರದರ್ಶನ ಮತ್ತು ಮಾರಾಟ
11-20 ಅಕ್ಟೋಬರ್ ಸಮಯ: ಬೆಳಗ್ಗೆ 11 ರಿಂದ ರಾತ್ರಿ 9
ಸ್ಥಳ: ಶಿಲ್ಪಕಲಾ ಮಂಟಪ
9ನೇ ಅಡ್ಡರಸ್ತೆ, ಜೆಪಿ ನಗರ, 3ನೇ ಹಂತ, ಬನ್ನೇರಘಟ್ಟ ಮುಖ್ಯರಸ್ತೆ, ಶಾಪರ್ಸ್ ಸ್ಟಾಪ್ ಎದುರು, ಜಯದೇವ ಆಸ್ಪತ್ರೆ ಸಮೀಪ, ಬೆಂಗಳೂರು.
ಭಾಗವಹಿಸುವ ರಾಜ್ಯಗಳು:
ಬಿಹಾರ, ಅಸ್ಸಾಂ, ಉತ್ತರಪ್ರದೇಶ, ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ರಾಜಸ್ಥಾನ, ಕರ್ನಾಟಕ, ತಮಿಳುನಾಡು, ಪಂಜಾಬ್, ತೆಲಂಗಾಣ, ಒಡಿಶಾ, ಛತ್ತೀಸ್‌ಗಢ್, ಜಮ್ಮು & ಕಾಶ್ಮೀರ, ಆಂಧ್ರಪ್ರದೇಶ ಮತ್ತು ಇನ್ನಿತರ ರಾಜ್ಯಗಳು



UP TO 50% DISCOUNT BY WEAVERS
ENTRY FREE • M:9441987009 • ALL DEBIT & CREDIT CARDS ACCEPTED

DH Classifieds More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com
BOOK NOW
Book your ad with us now! For more details contact:
+91 9845114560 | +91 9901641752 | 080-45557163/164
*Conditions apply

ಪ್ರಜಾವಾಣಿ ನವವರ್ಣ

ಭಾಗವಹಿಸಿದ ಎಲ್ಲರಿಗೂ ಧನ್ಯವಾದಗಳು. ಈ ರೀತಿಯ ಇನ್ನೂ ಹಲವಾರು ಚಟುವಟಿಕೆಗಳಲ್ಲಿ ಭಾಗವಹಿಸಲು ಈ ವಾಟ್ಸಾಪ್ ಸಂಖ್ಯೆಗೆ ನಿಮ್ಮ ಸಂದೇಶ / ಭಾವಚಿತ್ರಗಳನ್ನು ಕಳುಹಿಸಿ.

7338018541

ಹೆಚ್ಚಿನ ಮಾಹಿತಿಗೆ ಪ್ರಜಾವಾಣಿಯ ಪ್ರತಿನಿತ್ಯ ತಪ್ಪದೇ ಓದಿರಿ

ಅನುಷಾ ಮತ್ತು ಸಹೋದರಿಯರು

ರತ್ನ

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಿಬ್ಬಂದಿ

ವಿಜಯಲಕ್ಷ್ಮಿ ಮತ್ತು ಗೆಳತಿಯರು


ಭೂಮಿಕಾ ಮತ್ತು ಸಂಧ್ಯಾ

ನವಶಕ್ತಿ ಮಹಿಳಾ ವೇದಿಕೆ

ಜಯಶ್ರೀ ಮತ್ತು ಗೆಳತಿಯರು

ರಶ್ಮಿ ಮತ್ತು ಗೆಳತಿಯರು

ದೀಪಾ ಮತ್ತು ಗೆಳತಿಯರು

ರೇಣು ಮತ್ತು ಮಗಳು


ಮೈರಾ

ಕಿಟ್ಟಿ ಗೆಳತಿಯರ ತಂಡ

ಶ್ರೀದೇವಿ ಮತ್ತು ತಂಡ

ಸರಸ್ವತಿ ಸಂಗೀತ ಶಾಲೆ

ಅನಿತಾ


ಹರ್ಷಿತಾ ಮತ್ತು ಸವಿತಾ

ಲೇಖಾ ಮತ್ತು ಗೆಳತಿಯರು

ಸೌಮ್ಯಾ ಮತ್ತು ಕುಟುಂಬ

ಕವಿತಾ ಮತ್ತು ಗೆಳತಿಯರು

ಅಂಬಾ ಭವಾನಿ ಭಜನಾ ಮಂಡಳಿ

ಶಕುಂತಲಾ ಮತ್ತು ಕುಟುಂಬ

ಉಷಾಲಕ್ಷ್ಮಿ ಮತ್ತು ಗೆಳತಿಯರು

ಹಂಸ ಮತ್ತು ಮಂಜು

ಸಖು ರಮೇಶ್

ಶ್ವೇತಾ ಪಾಟೀಲ್

ಹೇಮಲತಾ ಮತ್ತು ಮಗಳು

ಲಕ್ಷ್ಮಿ ಮತ್ತು ಗೆಳತಿಯರು

Dr ಅರ್ಚನಾ

ಶಾಂತಾ ಮೋಹನ್

ಕವಿತಾ

ಮಂಜುಳ

ಸುಧಾ

ಸಿಂಧು

ಪ್ರಿಯಾ ಸೋನಿಯಾ ಮಂಜುನಾಥ್

OSNC ಗೆಳತಿಯರು

ಶ್ವೇತಾ ಸೌಮ್ಯ

ದಿವ್ಯಶ್ರೀ ನಿಹಾ

ತನಿಶ್ತಾ ವೀಣಾ, ಸರೋಜಾ

ನ್ಯೂಜಿಲೆಂಡ್ ಟೆಸ್ಟ್ ಸರಣಿ: ಬೂಮ್ರಾ ಉಪನಾಯಕ

ಬೂಮ್ರಾ

ನವದೆಹಲಿ (ಪಿಟಿಐ): ಅಗ್ರ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರನ್ನು ನ್ಯೂಜಿಲೆಂಡ್ ವಿರುದ್ಧ ಮೂರು ಟೆಸ್ಟ್ ಪಂದ್ಯಗಳ ಸರಣಿಯನ್ನು ಆಡಲಿರುವ ಭಾರತ ಕ್ರಿಕೆಟ್ ತಂಡಕ್ಕೆ ಉಪನಾಯಕನನ್ನಾಗಿ ನೇಮಕ ಮಾಡಲಾಗಿದೆ. ಆ ಮೂಲಕ ಮುಂದಿನ ತಿಂಗಳ ಆಸ್ಟ್ರೇಲಿಯಾ ಪ್ರವಾಸಕ್ಕೆ ಹೊರಡಲಿರುವ ತಂಡದಲ್ಲಿ ಅವರಿಗೆ ಹೆಚ್ಚಿನ ಸ್ಥಾನಮಾನ ನೀಡುವ ಸಂಕೇತವನ್ನು ಆಯ್ಕೆ ಮಂಡಳಿ ರವಾನಿಸಿದೆ.

ನ್ಯೂಜಿಲೆಂಡ್ ವಿರುದ್ಧ ಟೆಸ್ಟ್ ಸರಣಿಯ ಮೊದಲ ಪಂದ್ಯ ಬೆಂಗಳೂರಿನಲ್ಲಿ ಇದೇ 16ರಂದು ಆರಂಭವಾಗಲಿದೆ. ಎರಡನೇ ಟೆಸ್ಟ್ ಪುಣೆ ಯಲ್ಲಿ 24 ರಂದು ಮತ್ತು ಮೂರನೇ ಟೆಸ್ಟ್ ಮುಂಬೈನಲ್ಲಿ ನ. 1ರಂದು ಆರಂಭವಾಗಲಿವೆ. ಈಗಾಗಲೇ ವರದಿಯಾಗಿರುವಂತೆ ರೋಹಿತ್ ಶರ್ಮಾ ಅವರು ವೈಯಕ್ತಿಕ ಕಾರಣಗಳಿಂದ ಆಸ್ಟ್ರೇಲಿಯಾ ಪ್ರವಾಸದ ಮೊದಲ ಎರಡು ಟೆಸ್ಟ್‌ಗಳಲ್ಲಿ ಒಂದನ್ನು ಕಳೆದುಕೊಳ್ಳಲಿದ್ದಾರೆ. ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್ ಸರಣಿ ನವೆಂಬರ್ 22ರಂದು ಪರ್ತ್‌ನಲ್ಲಿ ಆರಂಭವಾಗಲಿದೆ.

ಇತ್ತೀಚಿನ ಬಾಂಗ್ಲಾ ವಿರುದ್ಧದ ಟೆಸ್ಟ್, ಟಿ20 ಪಂದ್ಯಗಳಿಗೆ ಭಾರತ ತಂಡವು ಉಪನಾಯಕನನ್ನು ಹೆಸರಿಸಿರಲಿಲ್ಲ. 30 ವರ್ಷ ವಯಸ್ಸಿನ ಬೂಮ್ರಾ ಈ ಹಿಂದೆ ಒಮ್ಮೆ– 2022ರ ಜುಲೈನಲ್ಲಿ ಎಜ್‌ಬಾಸ್ಟನ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಐದನೇ ಟೆಸ್ಟ್ ಪಂದ್ಯದಲ್ಲಿ ತಂಡದ ನಾಯಕತ್ವ ವಹಿಸಿದ್ದರು. ಕಳೆದ ವರ್ಷ ಐರ್ಲೆಂಡ್ ವಿರುದ್ಧ ಟಿ20 ಸರಣಿಗೂ ಅವರು ಪ್ರವಾಸಿ ಭಾರತ ತಂಡದ ನಾಯಕತ್ವ ವಹಿಸಿದ್ದರು.

ಪಾದದ ಶಸ್ತ್ರಚಿಕಿತ್ಸೆಯಿಂದ ಚೇತರಿಸಿಕೊಳ್ಳುತ್ತಿರುವ ಮೊಹಮ್ಮದ್ ಶಮಿ ಅವರು ಸ್ಥಾನ ಪಡೆದಿಲ್ಲ. ಉಳಿದಂತೆ 15 ಆಟಗಾರರ ಈ ಹಿಂದಿನ ತಂಡವನ್ನು ಉಳಿಸಿಕೊಳ್ಳಲಾಗಿದೆ.

ತಂಡ ಹೀಗಿದೆ: ರೋಹಿತ್ ಶರ್ಮಾ (ನಾಯಕ), ಜಸ್‌ಪ್ರೀತ್ ಬೂಮ್ರಾ (ಉಪ ನಾಯಕ), ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಕೆ.ಎಲ್.ರಾಹುಲ್, ಸರ್ಫರಾಜ್ ಖಾನ್, ರಿಷಭ್ ಪಂತ್ (ವಿಕೆಟ್ ಕೀಪರ್), ಧ್ರುವ್ ಜುರೇಲ್ (ವಿಕೆಟ್ ಕೀಪರ್), ರವಿಚಂದ್ರನ್ ಅಶ್ವಿನ್, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್ ಮತ್ತು ಆಕಾಶ್ ದೀಪ್.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾವಪೂರ್ಣ ಶ್ರದ್ಧಾಂಜಲಿ

ಸಿ. ಪದ್ಮಾವತಿ
W/o ಎನ್. ಸಂಪಂಗಿ ರಾಮಯ್ಯ
ಜನನ: 05.11.1961 – ನಿಧನ: 12.10.2024
ಪದ್ಮಾಲಯ ನರ್ಸರಿ, BIAL ಟೋಲ್ ಪ್ಲಾಜಾ, ಕನ್ನಮಂಗಲ, ದೇವನಹಳ್ಳಿ ತಾಲ್ಲೂಕ್, ಬೆಂಗಳೂರು.
ಇವರು ದಿ: 12.10.2024 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ದಿ: 13.10.2024ರಂದು ಮಧ್ಯಾಹ್ನ 1.00 ಗಂಟೆಗೆ ದೇವನಹಳ್ಳಿ ಬೈಪಾಸ್ ಹಿಂದೆ, ದೇವನಹಳ್ಳಿ ಕೋಟೆ ಇಲ್ಲಿ ನೆರವೇರಿಸಲಾಗುವುದು.
ಇಂತಿ ದುಃಖತಪ್ತರು
ಪತಿ, ಮಗ, ಹೆಣ್ಣು ಮಕ್ಕಳು, ಅಳಿಯಂದಿರು, ಸೊಸೆ, ಮತ್ತು ಮೊಮ್ಮಕ್ಕಳು
ಮೊ: 99001 23459 / 99459 90099

ಭಾರತದ ದಾಖಲೆ ಮೊತ್ತ • ಸೂರ್ಯಕುಮಾರ್, ಹಾರ್ದಿಕ್ ಮಿಂಚು • ಮೂರನೇ ಪಂದ್ಯದಲ್ಲೂ ಭರ್ಜರಿ ಗೆಲುವು

ಸ್ಯಾಮ್ಸನ್ ಅಬ್ಬರಕ್ಕೆ ಬೆಚ್ಚಿದ ಬಾಂಗ್ಲಾ

ಟಿ20 ಕ್ರಿಕೆಟ್: ತಂಡವೊಂದರ ಗರಿಷ್ಠ ರನ್

ತಂಡ	ರನ್	ಎದುರಾಳಿ	ವರ್ಷ
ನೇಪಾಳ	314ಕ್ಕೆ3	ಮಂಗೋಲಿಯಾ	2023
ಭಾರತ	297ಕ್ಕೆ6	ಬಾಂಗ್ಲಾದೇಶ	2024
ಅಫ್ಘಾನಿಸ್ತಾನ	278ಕ್ಕೆ3	ಐರ್ಲೆಂಡ್	2016
ಝೆಕ್ ರಿಪಬ್ಲಿಕ್	278ಕ್ಕೆ4	ಟರ್ಕಿ	2019
ಮಲೇಷ್ಯಾ	268ಕ್ಕೆ4	ಥಾಯ್ಲೆಂಡ್	2023

• ಭಾರತದ ಇನಿಂಗ್ಸ್‌ನಲ್ಲಿ ದಾಖಲೆಯ 22 ಸಿಕ್ಸರ್, 25 ಬೌಂಡರಿ

• 7.2 ಓವರ್‌ಗಳಲ್ಲಿ 100, 14 ಓವರ್‌ಗಳಲ್ಲಿ 200 ರನ್ ಗಡಿ ದಾಟಿದ ಭಾರತ

ಸೂರ್ಯಕುಮಾರ್ ಯಾದವ್ ಮತ್ತು ಸಂಜು ಸ್ಯಾಮ್ಸನ್ –ಎಎಫ್‌ಪಿ ಚಿತ್ರ

ಹೈದರಾಬಾದ್ (ಪಿಟಿಐ): ಸಂಜು ಸ್ಯಾಮ್ಸನ್ ಅವರ ಸಿಡಿಲಬ್ಬರದ ಶತಕ ಹಾಗೂ ಅನುಭವಿ ಬ್ಯಾಟರ್‌ಗಳ ಮಿಂಚಿನ ಆಟದ ನೆರವಿನಿಂದ ಭಾರತ ತಂಡ ಟಿ20 ಕ್ರಿಕೆಟ್ ಇತಿಹಾಸದಲ್ಲಿ ತನ್ನ ಅತ್ಯಧಿಕ ಮೊತ್ತ ದಾಖಲಿಸಿತು. ಶನಿವಾರ ಬಾಂಗ್ಲಾದೇಶ ವಿರುದ್ಧ ನಡೆದ ಮೂರನೇ ಹಾಗೂ ಅಂತಿಮ ಟಿ20 ಪಂದ್ಯವನ್ನು ಭಾರತ 133 ರನ್‌ಗಳಿಂದ ಸುಲಭವಾಗಿ ಗೆದ್ದುಕೊಂಡಿತು.

ಭಾರತ 20 ಓವರುಗಳಲ್ಲಿ 6 ವಿಕೆಟ್‌ಗೆ 297 ರನ್‌ಗಳ ಭಾರಿ ಮೊತ್ತ ಗಳಿಸಿತು. ಇಷ್ಟು ದೊಡ್ಡ ಮೊತ್ತ ಗಳಿಸಿದ ನಂತರ, ಭಾರತದ ಗೆಲುವಿನ ಅಂತರದ ಬಗ್ಗೆಯಷ್ಟೇ ಆಸಕ್ತಿ ಉಳಿದಿತ್ತು.

ಇದು ಅಂತರ ರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ದಾಖಲಾದ ಎರಡನೇ ಅತ್ಯಧಿಕ ಮೊತ್ತ. ನೇಪಾಳ, ಕಳೆದ ವರ್ಷ ಏಷ್ಯನ್ ಗೇಮ್ಸ್‌ನಲ್ಲಿ ಮಂಗೋಲಿಯಾ ವಿರುದ್ಧ 3 ವಿಕೆಟ್‌ಗೆ 314 ರನ್ ಗಳಿಸಿದ್ದು ದಾಖಲೆಯಾಗಿದೆ. ಆದರೆ ಟೆಸ್ಟ್ ಆಡುವ ತಂಡಗಳ ಪೈಕಿ ಇದು ದಾಖಲೆಯ ಮೊತ್ತ. 2019ರಲ್ಲಿ ಡೆಹ್ರಾಡೂನ್ ನಲ್ಲಿ ಅಫ್ಘಾನಿಸ್ತಾನ, ಐರ್ಲೆಂಡ್ ವಿರುದ್ಧ 3 ವಿಕೆಟ್‌ಗೆ 278 ರನ್ ಗಳಿಸಿದ್ದು, ಇದುವರೆಗಿನ ಅತ್ಯಧಿಕ ಮೊತ್ತವಾಗಿತ್ತು.

ಭಾರತದ ಈ ಹಿಂದಿನ ಗರಿಷ್ಠ ಮೊತ್ತ 5 ವಿಕೆಟ್‌ಗೆ 260 ರನ್‌ಗಳಾಗಿತ್ತು. ಇದನ್ನು ಶ್ರೀಲಂಕಾ ವಿರುದ್ಧ 2017ರಲ್ಲಿ ಇಂದೋರ್‌ನಲ್ಲಿ ಗಳಿಸಿತ್ತು.

ಭಾರತದ ಆಕ್ರಮಣದ ಆಟದೆದುರು ಕಂಗಾಲಾದ ಬಾಂಗ್ಲಾದೇಶ 20 ಓವರುಗಳಲ್ಲಿ 7 ವಿಕೆಟ್‌ಗೆ 164 ರನ್ ಗಳಿಸಿ ಸವಾಲು ಮುಗಿಸಿತು. ವೇಗದ ನವತಾರೆ ಮಯಂಕ್ ಯಾದವ್ (32ಕ್ಕೆ2) ಮತ್ತು ಲೆಗ್ ಸ್ಪಿನ್ನರ್ ರವಿ ಬಿಷ್ಣೋಯಿ (30ಕ್ಕೆ3) ಪರಿಣಾಮಕಾರಿ ಎನಿಸಿದರು. ಭಾರತ ಸರಣಿಯನ್ನು 3–0 ಯಿಂದ ಗೆದ್ದುಕೊಂಡಿತು.

ಬಾಂಗ್ಲಾದೇಶ ಮೊದಲ ಎಸೆತದಲ್ಲೇ ಪರ್ವೇಜ್ ಹುಸೇನ್ ಅವರನ್ನು ಕಳೆದುಕೊಂಡಿತು. ಮಯಂಕ್ ಈ ವಿಕೆಟ್ ಪಡೆದರು. ನಂತರ ಹೇಳಿಕೊಳ್ಳುವಂಥ ಹೋರಾಟ ಕಂಡುಬರಲಿಲ್ಲ. ತೌಹಿದ್ ಹೃದಯ್ (ಅಜೇಯ 63, 42ಎ, 4x5, 6x3) ಮತ್ತು ಲಿಟನ್ ದಾಸ್ (42, 25ಎ, 4x8) ಸ್ವಲ್ಪ ಪ್ರತಿರೋಧ ತೋರಿಸಿದರಷ್ಟೇ.

ಆರಂಭ ಆಟಗಾರನಾಗಿ ಸ್ಯಾಮ್ಸನ್ ಮೊದಲ ಎರಡು ಅವಕಾಶಗಳನ್ನು ಹೇಳಿಕೊಳ್ಳುವ ರೀತಿ ಸದುಪಯೋಗ ಪಡಿಸಿಕೊಂಡಿರಲಿಲ್ಲ. ಹೀಗಾಗಿ ಅವರ ಮೇಲೆ ಒತ್ತಡವಿತ್ತು. ಈ ಪಂದ್ಯದಲ್ಲಿ ಆ ಹಿನ್ನಡೆಗಳನ್ನು ಬಡ್ಡಿಸಮೇತ ತೀರಿಸುವಂತೆ ಕೇವಲ 47 ಎಸೆತಗಳಲ್ಲಿ 111 ರನ್ (4x11, 6x8) ಚಚ್ಚಿದರು. ಇದು ಟಿ20 ಕ್ರಿಕೆಟ್‌ನಲ್ಲಿ ಭಾರತದ ಪರ ಎರಡನೇ ಅತಿ ವೇಗದ ಶತಕ. ವೇಗದ ಶತಕದ ದಾಖಲೆ ರೋಹಿತ್ ಶರ್ಮಾ (35 ಎಸೆತ) ಹೆಸರಿನಲ್ಲಿದೆ. ಸಂಜು ಅವರು ನಾಯಕ ಸೂರ್ಯಕುಮಾರ್ ಯಾದವ್ (75, 4x8, 6x5) ಜೊತೆ ಎರಡನೇ ವಿಕೆಟ್‌ಗೆ 173 ರನ್ ಸೇರಿಸಿ ತಂಡಕ್ಕೆ 'ಕನಸಿನ ಆರಂಭ' ಒದಗಿಸಿದರು.

ಅಭಿಷೇಕ್ ಶರ್ಮಾ ಎರಡನೇ ಓವರಿನಲ್ಲೇ ನಿರ್ಗಮಿಸಿದರು. ಆದರೆ ಬಾಂಗ್ಲಾ ದೇಶದ ಸಂಭ್ರಮ ಕ್ಷಣಾರ್ಧದಲ್ಲಿ ಕರಗಿ ಹೋಯಿತು. ನಂತರದ್ದೆಲ್ಲಾ ಬೌಂಡರಿ, ಸಿಕ್ಸರ್‌ಗಳ ಸುರಿಮಳೆಯದ್ದೇ ಆಟ.

ತಸ್ಕಿನ್ ಅಹ್ಮದ್ ಬೌಲಿಂಗ್‌ನಲ್ಲಿ (ಇನಿಂಗ್ಸ್‌ನ ಎರಡನೇ ಓವರ್) ಅವರು ಸತತ ನಾಲ್ಕು ಬೌಂಡರಿಗಳನ್ನು ಬಾರಿಸಿ ಆಕ್ರಮಣದಾಟಕ್ಕೆ ಚಾಲನೆ ನೀಡಿದರು. ಇದರಲ್ಲಿ ಎರಡು ಕವರ್ ಡ್ರೈವ್, ಎರಡು ಫ್ಲಿಕ್ ಸೇರಿದ್ದವು. ಪವರ್ ಪ್ಲೇ ಅವಧಿಯಲ್ಲೇ 86 ರನ್‌ಗಳು ಹರಿದುಬಂದವು. 10 ಓವರುಗಳ ನಂತರ ಮೊತ್ತ 1 ವಿಕೆಟ್‌ಗೆ 152.

ಬಾಂಗ್ಲಾದ ಯಾವುದೇ ಬೌಲರ್ ದಂಡನೆಯಿಂದ ಪಾರಾಗಲಿಲ್ಲ. ರಿಷದ್ ಹುಸೇನ್ ಮಾಡಿದ ಇನಿಂಗ್ಸ್‌ನ ಹತ್ತನೇ ಓವರಿನಲ್ಲಿ ಸಂಜು ಸತತ ಐದು ಸಿಕ್ಸರ್ ಗಳನ್ನು ಎತ್ತಿ ತೋಳ್ಬಲ ಮೆರೆದರು. ಮುಸ್ತಫಿಝುರ್ ಬೌಲಿಂಗ್‌ನಲ್ಲಿ ಬ್ಯಾಕ್ ಫುಟ್‌ನಲ್ಲಿ ಎಕ್ಸ್‌ಟ್ರಾ ಕವರ್ ಮೇಲೆ ಸಿಕ್ಸರ್ ಎತ್ತಿದ ಅವರು, ಆಫ್ ಸ್ಪಿನ್ನರ್ ಮೆಹೆದಿ ಹಸನ್ ಬೌಲಿಂಗ್‌ನಲ್ಲಿ ಬೌಂಡರಿ ಮೂಲಕ 40 ಎಸೆತಗಳಲ್ಲಿ ಶತಕ ಪೂರೈಸಿದರು. ಒಂದೆಡೆ ಸಂಜು ಆರ್ಭಟ ಮೇರೆಮೀರಿದರೆ, ಇನ್ನೊಂದೆಡೆ ಸೂರ್ಯಕುಮಾರ್ ತುಂಬಾ ಹಿಂದೆ ಬೀಳಲಿಲ್ಲ. ತಂಜಿಮ್ ಒಂದೇ ಓವರಿನಲ್ಲಿ ಮೂರು ಬೌಂಡರಿ, ಒಂದು ಸಿಕ್ಸರ್ ಎತ್ತಿದ ಅವರು ಕೇವಲ 23 ಎಸೆತಗಳಲ್ಲಿ ಅರ್ಧ ಶತಕ ಪೂರೈಸಿದರು.

ಇಬ್ಬರೂ ಅಲ್ಪ ಅಂತರದಲ್ಲಿ ಪೆವಿಲಿಯನ್‌ಗೆ ಮರಳಿದರೂ, ಅಷ್ಟರೊಳಗೆ ಬಾಂಗ್ಲಾ ತಂಡ ಅತೀವ ಒತ್ತಡಕ್ಕೆ ಒಳಗಾಗಿತ್ತು. ಆಗ ತಂಡದ ಮೊತ್ತ 15ನೇ ಓವರಿನಲ್ಲಿ 3 ವಿಕೆಟ್‌ಗೆ 206 ರನ್. ಆದರೆ ಆತಿಥೇಯರ ಬೀಸಾಟ ಎಗ್ಗಿಲ್ಲದೇ ಮುಂದುವರಿಯಿತು. ಹಾರ್ದಿಕ್ (47, 18ಎ, 4x4, 6x4) ಮತ್ತು ರಿಯಾನ್ ಪರಾಗ್ (34, 13ಎ, 4x1, 6x4) ಅವರು ತಂಡವನ್ನು 300ರ ಗಡಿಯ ಸಮೀಪ ತಲುಪಿಸಲು ನೆರವಾದರು.

ಸ್ಕೋರ್ ಕಾರ್ಡ್

ಭಾರತ: 20 ಓವರುಗಳಲ್ಲಿ 6 ವಿಕೆಟ್‌ಗೆ 297
ಸ್ಯಾಮ್ಸನ್ ಸಿ ಮೆಹದಿ ಬಿ ಮುಸ್ತಫಿಝುರ್ 111 (47ಎ, 4x11, 6x8)
ಅಭಿಷೇಕ್ ಸಿ ಮೆಹದಿ ಬಿ ತಂಜಿಮ್ 4 (4ಎ, 4x1)
ಸೂರ್ಯಕುಮಾರ್ ಸಿ ರಿಷದ್ ಬಿ ಮಹಮುದುಲ್ಲಾ 75 (35ಎ, 4x8, 6x5)
ಪರಾಗ್ ಸಿ ದಾಸ್ ಬಿ ತಸ್ಕಿನ್ 34 (13ಎ, 4x1, 6x4)
ಹಾರ್ದಿಕ್ ಸಿ ರಿಷದ್ ಬಿ ತಂಜಿಮ್ 47 (18ಎ, 4x4, 6x4)
ರಿಂಕು ಸಿಂಗ್ ಔಟಾಗದೇ 8 (4ಎ, 6x1)
ನಿತೀಶ್ ಕುಮಾರ್ ಸಿ ಮಹದಿ ಬಿ ತಂಜಿಮ್ 0 (1ಎ)
ಸುಂದರ್ ಔಟಾಗದೇ 1 (1ಎ)
ಇತರೆ: 17(ಬೈ 5, ಲೆಗ್‌ಬೈ 6,ವೈಡ್ 3,ನೋಬಾಲ್ 3)
ವಿಕೆಟ್ ಪತನ: 1–23 (ಅಭಿಷೇಕ್ ಶರ್ಮಾ, 2.1), 2–196 (ಸಂಜು ಸ್ಯಾಮ್ಸನ್ 13.4), 3–206 (ಸೂರ್ಯಕುಮಾರ್ ಯಾದವ್, 14.3), 4–276 (ರಿಯಾನ್ ಪರಾಗ್, 18.4), 5–289 (ಹಾರ್ದಿಕ್ ಪಾಂಡ್ಯ, 19.3), 6–289 (ನಿತೀಶ್ ಕುಮಾರ್ ರೆಡ್ಡಿ, 19.4).
ಬೌಲಿಂಗ್: ಮೆಹದಿ ಹಸನ್ 4–0–45–0; ತಸ್ಕಿನ್ ಅಹ್ಮದ್ 4–0–51–1; ತಂಜಿಮ್ ಹಸನ್ ಸಕಿಬ್ 4–0–66–3; ಮುಸ್ತಫಿಝುರ್ ರಹಮಾನ್ 4–0–52–1; ರಿಷದ್ ಹುಸೇನ್ 2–0–46–0; ಮಹಮದುಲ್ಲಾ 2–0–26–1

ಬಾಂಗ್ಲಾದೇಶ 20 ಓವರ್‌ಗಳಲ್ಲಿ 7ಕ್ಕೆ 164
ತಂಜಿದ್ ಸಿ ವರುಣ್ ಬಿ ಸುಂದರ್ 15 (12ಎ, 4x3)
ಶಾಂತೊ ಸಿ ಸ್ಯಾಮ್ಸನ್ ಬಿ ಬಿಷ್ಣೋಯಿ 14 (11ಎ, 4x1, 6x1)
ಲಿಟನ್ ಸಿ ತಿಲಕ್ ಬಿ ಬಿಷ್ಣೋಯಿ 42 (25ಎ, 4x8)
ತೌಹಿದ್ ಹೃದಯ್ ಔಟಾಗದೇ 63 (42ಎ, 4x5, 6x3)
ಮಹಮ್ಮದುಲ್ಲಾ ಸಿ ಪರಾಗ್ ಬಿ ಯಾದವ್ 8 (9ಎ, 4x1)
ಮೆಹದಿ ಸಿ ಪರಾಗ್ ಬಿ ನಿತೀಶ್ 3 (9ಎ)
ರಿಷದ್ ಸಿ ಅಭಿಷೇಕ್ ಬಿ ಬಿಷ್ಣೋಯಿ 0 (4ಎ)
ತಂಜಿಮ್ ಹಸನ್ ಸಕಿಬ್ ಔಟಾಗದೇ 8 (8ಎ, 4x1)
ಇತರೆ: 11 (ಲೆಗ್‌ಬೈ 4, ನೋಬಾಲ್ 1, ವೈಡ್ 6)
ವಿಕೆಟ್ ಪತನ: 1-0 (ಪರ್ವೇಜ್ ಹುಸೇನ್, 0.1), 2-35 (ತಂಜಿದ್ ಹಸನ್, 3.1), 3-59 (ನಜ್ಮುಲ್ ಹುಸೇನ್ ಶಾಂತೊ, 5.2), 4-112 (ಲಿಟನ್ ದಾಸ್, 11.4), 5-130 (ಮಹಮ್ಮದುಲ್ಲಾ, 14.2), 6-138 (ಮಹೆದಿ ಹಸನ್, 16.3), 7-139 (ರಿಷದ್ ಹುಸೇನ್, 17.2)
ಬೌಲಿಂಗ್: ಮಯಂಕ್ ಯಾದವ್ 4–0–32–2, ಹಾರ್ದಿಕ್ ಪಾಂಡ್ಯ 3–0–32–0, ವಾಷಿಂಗ್ಟನ್ ಸುಂದರ್ 1–0–4–1, ನಿತೀಶ್ ಕುಮಾರ್ ರೆಡ್ಡಿ 3–0–31–1, ರವಿ ಬಿಷ್ಣೋಯಿ 4–0–30–3, ವರುಣ್ ಚಕ್ರವರ್ತಿ 4–0–23–0, ಅಭಿಷೇಕ್ ಶರ್ಮಾ 1–0–8–0
ಪಂದ್ಯದ ಆಟಗಾರ: ಸಂಜು ಸ್ಯಾಮ್ಸನ್

ಫಲಿತಾಂಶ: ಭಾರತಕ್ಕೆ 133 ರನ್‌ಗಳ ಜಯ



With profound grief we inform the sad demise of
Dr. K. P. Vasantha Shetty
01-10-1939 - 11-10-2024
Director R&D
Indo-American Hybrid Seeds (India) Pvt. Ltd.
On behalf of the Board of Directors, Management and Staff,
Indo-American Hybrid Seeds (India) Pvt. Ltd.

ಲಂಕಾ ವಿರುದ್ಧ ಕಿವೀಸ್‌ಗೆ ಜಯ

ಜಾರ್ಜಿಯಾ ಪ್ಲಿಮ್ಮರ್ ಎಕ್ಸ್ ಚಿತ್ರ

ಶಾರ್ಜಾ (ಪಿಟಿಐ): ಜಾರ್ಜಿಯಾ ಪ್ಲಿಮ್ಮರ್ (53;44ಎ) ಅವರ ಅರ್ಧಶತಕದ ಬಲದಿಂದ ನ್ಯೂಜಿಲೆಂಡ್ ತಂಡವು ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನ ಎ ಗುಂಪಿನ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು 8 ವಿಕೆಟ್‌ಗಳಿಂದ ಸುಲಭವಾಗಿ ಮಣಿಸಿ, ಸೆಮಿಫೈನಲ್ ಕನಸನ್ನು ಜೀವಂತವಾಗಿರಿಸಿಕೊಂಡಿತು.

ಈ ಗೆಲುವಿನೊಂದಿಗೆ ನ್ಯೂಜಿಲೆಂಡ್ ಮತ್ತು ಭಾರತ ತಂಡಗಳ ಮಧ್ಯೆ ನಾಲ್ಕರ ಘಟ್ಟ ಪ್ರವೇಶಕ್ಕಾಗಿ ಪೈಪೋಟಿ ಏರ್ಪಟ್ಟಿದೆ. ಏಷ್ಯಾಕಪ್ ಚಾಂಪಿಯನ್ ಶ್ರೀಲಂಕಾ ತಂಡವು, ಟೂರ್ನಿಯಲ್ಲಿ ಸತತ ನಾಲ್ಕು ಸೋಲಿನೊಂದಿಗೆ ಅಭಿಯಾನ ಮುಗಿಸಿತು.

ಟಾಸ್ ಗೆದ್ದು ಬ್ಯಾಟಿಂಗ್‌ಗೆ ಇಳಿದ ಲಂಕಾ ತಂಡವು ನಾಯಕಿ ಚಾಮರಿ ಅಟಪಟ್ಟು (35;41) ಅವರ ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ 115 ರನ್ ಗಳಿಸಿತು. ನ್ಯೂಜಿಲೆಂಡ್ ತಂಡವು 15 ಎಸೆತ ಬಾಕಿ ಇರುವಂತೆ ಗೆಲುವು ಸಾಧಿಸಿತು. ಬೌಲಿಂಗ್‌ನಲ್ಲಿ ಮಿಂಚಿದ್ದ ಅಮೆಲಿಯಾ ಕೆರ್ (ಔಟಾಗದೇ 34; 31) ಬ್ಯಾಟಿಂಗ್‌ನಲ್ಲೂ ಗಮನ ಸೆಳೆದರು. ಅವರು ಸಿಕ್ಸರ್‌ನೊಂದಿಗೆ ತಂಡವನ್ನು ಗೆಲುವಿನ ದಡ ಸೇರಿಸಿದರು.

ಸಂಕ್ಷಿಪ್ತ ಸ್ಕೋರ್: ಶ್ರೀಲಂಕಾ: 20 ಓವರ್‌ಗಳಲ್ಲಿ 5ಕ್ಕೆ 115 (ಚಾಮರಿ ಅಟಪಟ್ಟು 35, ಅಮೆಲಿಯಾ ಕೆರ್ 13ಕ್ಕೆ 2, ಲೇ ಕಾಸ್ಪರೆಕ್ 27ಕ್ಕೆ 2). ನ್ಯೂಜಿಲೆಂಡ್: 17.3 ಓವರ್‌ಗಳಲ್ಲಿ 2ಕ್ಕೆ 118 (ಜಾರ್ಜಿಯಾ ಪ್ಲಿಮ್ಮರ್ 53, ಅಮೆಲಿಯಾ ಕೆರ್ ಔಟಾಗದೇ 34, ಚಾಮರಿ ಅಟಪಟ್ಟು 8ಕ್ಕೆ 1). **ಫಲಿತಾಂಶ:** ನ್ಯೂಜಿಲೆಂಡ್‌ಗೆ 8 ವಿಕೆಟ್‌ಗಳ ಜಯ **ಪಂದ್ಯದ ಆಟಗಾರ್ತಿ:** ಜಾರ್ಜಿಯಾ ಪ್ಲಿಮ್ಮರ್

ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ವಿರುದ್ಧ ಪಂದ್ಯ ಇಂದು

ಭಾರತಕ್ಕೆ ದೊಡ್ಡ ಗೆಲುವು ಅನಿವಾರ್ಯ

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2024

ಬೆತ್ ಮೂನಿ

ಪಂದ್ಯ ಆರಂಭ ರಾತ್ರಿ 7.30 ಸ್ಟಾರ್ ಸ್ಪೋರ್ಟ್ಸ್, ಹಾಟ್ ಸ್ಟಾರ್ ಆ್ಯಪ್

ಹರ್ಮನ್‌ಪ್ರೀತ್ ಕೌರ್ ಎಎಫ್‌ಪಿ ಚಿತ್ರ

ಶಾರ್ಜಾ (ಪಿಟಿಐ): ಶ್ರೀಲಂಕಾ ತಂಡದ ಸವಾಲನ್ನು ಸುಲಭವಾಗಿ ಅಡಗಿಸಿದ ಉತ್ಸಾಹದಲ್ಲಿರುವ ಭಾರತ ತಂಡಕ್ಕೆ ಮಹಿಳೆಯರ ಟಿ20 ವಿಶ್ವಕಪ್ ಕೊನೆಯ ಲೀಗ್ ಪಂದ್ಯದಲ್ಲಿ ಪ್ರಬಲ ಎದುರಾಳಿಯ ಸವಾಲು ಕಾದಿದೆ. ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ ವಿರುದ್ಧ ಭಾನುವಾರ ನಡೆಯಲಿರುವ ಅಂತಿಮ ಲೀಗ್ ಪಂದ್ಯ ನಾಕೌಟ್ ಪ್ರವೇಶದ ದೃಷ್ಟಿಯಿಂದ ಭಾರತದ ಪಾಲಿಗೆ ಮಾಡು–ಇಲ್ಲವೇ–ಮಡಿ ಎಂಬ ರೀತಿಯಲ್ಲಿದೆ.

ನ್ಯೂಜಿಲೆಂಡ್ ಎದುರು ಆರಂಭದ ಪಂದ್ಯ ಸೋತು ಹಿನ್ನಡೆ ಕಂಡಿದ್ದ ಭಾರತಕ್ಕೆ, ಲಂಕಾ ವಿರುದ್ಧ 82 ರನ್‌ಗಳ ಭರ್ಜರಿ ಗೆಲುವು ಸೆಮಿಫೈನಲ್ ಸಾಧ್ಯತೆಗೆ ಬಲತುಂಬಿದೆ. ಮುಖ್ಯವಾಗಿ ರೇಟ್ ಸುಧಾರಣೆಯಾಗಿದ್ದು 'ಎ' ಗುಂಪಿನಲ್ಲಿ ಎರಡನೇ ಸ್ಥಾನಕ್ಕೇರಿದೆ.

ಒಂದೆಡೆ, ಆಸ್ಟ್ರೇಲಿಯಾ ಮೂರು ಪಂದ್ಯಗಳಿಂದ ಆರು ಪಾಯಿಂಟ್ಸ್ ಸಂಗ್ರಹಿಸಿ (ನಿವ್ವಳ ರನ್ ದರ: +2.786) ನಾಕೌಟ್ ಖಚಿತಪಡಿಸಿಕೊಂಡಿದೆ. ಇನ್ನೊಂದೆಡೆ, ಗುಂಪಿನಿಂದ ಎರಡನೇ ತಂಡವಾಗಿ ಸೆಮಿಫೈನಲ್ ಸ್ಥಾನ ಪಡೆಯಲು ಭಾರತ, ನ್ಯೂಜಿಲೆಂಡ್ ಮತ್ತು ಪಾಕಿಸ್ತಾನ ತಂಡಗಳ ನಡುವೆ ಪೈಪೋಟಿಯಿದೆ.

ಆದರೆ, ಅಜೇಯ ಆಸ್ಟ್ರೇಲಿಯಾ ತಂಡಕ್ಕೆ ಗಾಯಾಳುಗಳ ಸಮಸ್ಯೆ ಕಾಡುತ್ತಿದೆ. ನಾಯಕಿ ಅಲಿಸಾ ಹೀಲಿ ಶುಕ್ರವಾರ ಪಾಕಿಸ್ತಾನ ವಿರುದ್ಧ ಪಂದ್ಯದಲ್ಲಿ ಬಲಗಾಲಿನಲ್ಲಿ ಕಾಣಿಸಿಕೊಂಡ ತೀವ್ರ ನೋವಿನ ಪರಿಣಾಮ ಅರ್ಧದಲ್ಲೇ ಫೀಲ್ಡ್‌ನಿಂದ ನಿರ್ಗಮಿಸಿದ್ದರು. ವೇಗದ ಬೌಲರ್ ಟೈಲಾ ವ್ಲೇಮಿಂಗ್ ಅವರಿಗೆ ಭುಜದ ಕೀಲುನೋವು ಕಾಡಿದೆ. ಇವರಿಬ್ಬರು ಈ ಪಂದ್ಯದಲ್ಲಿ ಆಡುವುದು ಅನುಮಾನ. ಹೀಗಾಗಿ ಆಸ್ಟ್ರೇಲಿಯಾದ 'ಬೆಂಚ್ ಸಾಮರ್ಥ್ಯ'ಕ್ಕೆ ಈ ಪಂದ್ಯ ಪರೀಕ್ಷೆಯಾಗಿದೆ.

ಪಾಕಿಸ್ತಾನ ತನ್ನ ಕೊನೆಯ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದ್ದು, ಆ ಪಂದ್ಯದಲ್ಲಿ ಪಾಕ್ ಗೆದ್ದರೆ ಮತ್ತು ಭಾರತವು, ಆಸ್ಟ್ರೇಲಿಯಾ ಎದುರು ಸೋತಲ್ಲಿ ಮೂರು ತಂಡಗಳ ನಡುವೆ ಸೆಮಿಫೈನಲ್ ಪೈಪೋಟಿ ಏರ್ಪಡಲಿದೆ. ಆಗ ನಿವ್ವಳ ರನ್ ದರ ನಿರ್ಣಾಯಕವಾಗಲಿದೆ.

ಹೀಗಾಗಿ ಹರ್ಮನ್‌ಪ್ರೀತ್ ಬಳಗ, ಗೆಲುವಿಗೆ ತೀವ್ರ ಪ್ರಯತ್ನ ನಡೆಸಬೇಕಾಗಿದೆ. ಜೊತೆಗೆ ನ್ಯೂಜಿಲೆಂಡ್ ಮಹಿಳೆಯರಿಂದ ಸಂಭವನೀಯ ಅಪಾಯ ನಿವಾರಿಸಲು ರನ್‌ರೇಟ್ ಕೂಡ ಸುಧಾರಿಸಬೇಕಾಗಿದೆ.

ಅಗ್ರ ಆಟಗಾರ್ತಿಯರಾದ ಶಫಾಲಿ ವರ್ಮಾ, ಸ್ಮೃತಿ ಮಂದಾನ, ನಾಯಕಿ ಹರ್ಮನ್‌ಪ್ರೀತ್ ಅವರು ಲಯ ಕಂಡುಕೊಂಡಿರುವುದು ಸಕಾರಾತ್ಮಕ ಅಂಶ. ಶಾರ್ಜಾದಲ್ಲಿ ಭಾರತ ಮೊದಲ ಬಾರಿ ಆಡುತ್ತಿದ್ದು, ಇಲ್ಲಿನ ಪಿಚ್‌ನಲ್ಲಿ ಬ್ಯಾಟರ್‌ಗಳಿಗೆ ಸವಾಲಿನದ್ದು. ಹೀಗಾಗಿ ಮೇಲಿನ ಮೂವರ ಜೊತೆ ರನ್ ಬರ ಎದುರಿಸುತ್ತಿರುವ ಜೆಮಿಮಾ ರಾಡ್ರಿಗಸ್ ಮೇಲೂ ಹೆಚ್ಚು ಹೊಣೆಯಿದೆ.

ಪಾಕ್ ಮತ್ತು ನ್ಯೂಜಿಲೆಂಡ್ ವಿರುದ್ಧ ಉತ್ತಮ ಪ್ರದರ್ಶನ ನೀಡಿದ ಬೌಲರ್‌ಗಳು ಉತ್ಸಾಹದಿಂದ ಇದ್ದಾರೆ.

ಆಲಿಸಾ ಹೀಲಿ ಅಲಭ್ಯರಾದಲ್ಲಿ, ಹೊಸ ನಾಯಕಿ, ವಿಕೆಟ್ ಕೀಪರ್, ಆರಂಭ ಆಟಗಾರ್ತಿಯರನ್ನು ತಂಡ ಕಂಡುಕೊಳ್ಳಬೇಕಿದೆ.

ಅನುಭವಿ ಬೆತ್ ಮೂನಿ ವಿಕೆಟ್ ಕೀಪಿಂಗ್ ಹೊಣೆ ವಹಿಸಲಿದ್ದಾರೆ. ತಹ್ಲಿಯಾ ಮೆಕ್‌ಗ್ರಾತ್ ತಂಡದ ನಾಯಕತ್ವ ವಹಿಸುವ ನಿರೀಕ್ಷೆಯಿದೆ.

'ಈ ಆಸ್ಟ್ರೇಲಿಯಾ ತಂಡದ ವಿಶೇಷವೆಂದರೆ ನಾವು ಹೊಂದಿರುವ ಪ್ರಬಲ ಬೆಂಚ್ ಪಡೆ. ಅದನ್ನು ಬಳಸಲು ಈಗ ಸಕಾಲ' ಎಂದು ತಹ್ಲಿಯಾ ಹೇಳಿದ್ದಾರೆ.

ಮಹಿಳಾ ಟಿ20 ವಿಶ್ವಕಪ್: ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಪಾಯಿಂಟ್ಸ್	ನೆಟ್ ರನ್‌ರೇಟ್
ಗುಂಪು ಎ					
ಆಸ್ಟ್ರೇಲಿಯಾ	3	3	0	6	2.786
ಭಾರತ	3	2	1	4	0.576
ನ್ಯೂಜಿಲೆಂಡ್	3	2	1	4	0.282
ಪಾಕಿಸ್ತಾನ	3	1	2	2	-0.488
ಶ್ರೀಲಂಕಾ	4	0	4	0	-2.173
ಗುಂಪು ಬಿ					
ದಕ್ಷಿಣ ಆಫ್ರಿಕಾ	4	3	1	6	1.382
ವೆಸ್ಟ್ ಇಂಡೀಸ್	3	2	1	4	1.708
ಇಂಗ್ಲೆಂಡ್	2	2	0	4	0.653
ಬಾಂಗ್ಲಾದೇಶ	4	1	3	2	-0.844
ಸ್ಕಾಟ್ಲೆಂಡ್	3	0	3	0	-2.671

ದಕ್ಷಿಣ ಆಫ್ರಿಕಾಕ್ಕೆ ಮಣಿದ ಬಾಂಗ್ಲಾ

ದುಬೈ (ಪಿಟಿಐ): ದಕ್ಷಿಣ ಆಫ್ರಿಕಾ ತಂಡವು ಐಸಿಸಿ ಮಹಿಳೆಯರ ಟಿ20 ವಿಶ್ವಕಪ್‌ನ ಬಿ ಗುಂಪಿನ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಶನಿವಾರ ಏಳು ವಿಕೆಟ್‌ಗಳಿಂದ ಮಣಿಸಿತು.

ನಾಲ್ಕು ಪಂದ್ಯಗಳಲ್ಲಿ ಮೂರನ್ನು ಗೆದ್ದು, ಬಿ ಗುಂಪಿನಲ್ಲಿ ಅಗ್ರಸ್ಥಾನದಲ್ಲಿರುವ ದಕ್ಷಿಣ ಆಫ್ರಿಕಾದ ಸೆಮಿಫೈನಲ್ ಭವಿಷ್ಯ ಇಂಗ್ಲೆಂಡ್ ಮತ್ತು ವೆಸ್ಟ್ ಇಂಡೀಸ್ ಕೈಯಲ್ಲಿದೆ. ವಿಂಡೀಸ್ ಮೂರು ಪಂದ್ಯಗಳಲ್ಲಿ ಎರಡನ್ನು ಗೆದ್ದು ಎರಡನೇ ಸ್ಥಾನದಲ್ಲಿದ್ದರೆ, ಆಡಿರುವ ಎರಡೂ ಪಂದ್ಯಗಳನ್ನು ಜಯಿಸಿದ ಇಂಗ್ಲೆಂಡ್ ಮೂರನೇ ಸ್ಥಾನದಲ್ಲಿದೆ.

ಬಾಂಗ್ಲಾ ತಂಡವು ಸೋಭಾನ ಮೊಸ್ತರಿ (38;43ಎ) ಮತ್ತು ನಾಯಕಿ ನಿಗರ್ ಸುಲ್ತಾನಾ (ಔಟಾಗದೇ 32; 38ಎ) ಅವರ ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ ಮೂರು ವಿಕೆಟ್‌ಗೆ 106 ಗಳಿಸಲಷ್ಟೇ ಶಕ್ತವಾಯಿತು. ಸುಲಭ ಗುರಿಯನ್ನು ಬೆನ್ನತ್ತಿದ ದಕ್ಷಿಣ ಆಫ್ರಿಕಾ ತಂಡ 16 ಎಸೆತ ಬಾಕಿ ಇರುವಂತೆ ಗೆಲುವಿನ ದಡ ಸೇರಿತು. ಗೆಲುವಿಗೆ ಉಪಯುಕ್ತ ಕೊಡುಗೆ ನೀಡಿದ ತಜ್ಮಿನ್ ಬ್ರಿಟ್ಸ್ (42;41ಎ) ಪಂದ್ಯದ ಆಟಗಾರ್ತಿ ಗೌರವಕ್ಕೆ ಪಾತ್ರವಾದರು.

ಸಂಕ್ಷಿಪ್ತ ಸ್ಕೋರ್: ಬಾಂಗ್ಲಾದೇಶ: 20 ಓವರ್‌ಗಳಲ್ಲಿ 3ಕ್ಕೆ 106 (ಸೋಭಾನ ಮೊಸ್ತರಿ 38, ನಿಗರ್ ಸುಲ್ತಾನಾ 32; ಮರಿಜಾನ್ ಕಪ್ 10ಕ್ಕೆ 1). ದಕ್ಷಿಣ ಆಫ್ರಿಕಾ: 17.2 ಓವರ್‌ಗಳಲ್ಲಿ 3ಕ್ಕೆ 107 (ತಜ್ಮಿನ್ ಬ್ರಿಟ್ಸ್ 42, ಅನ್ನೆಕೆ ಬಾಷ್ 25; ಫಾಹಿಮಾ ಖತುನ್ 19ಕ್ಕೆ 2). ಫಲಿತಾಂಶ: ದಕ್ಷಿಣ ಆಫ್ರಿಕಾಕ್ಕೆ 7 ವಿಕೆಟ್‌ಗಳ ಜಯ.

ಕ್ರಿಕೆಟ್: ಗೆಲುವಿನ ವಿಶ್ವಾಸದಲ್ಲಿ ಕರ್ನಾಟಕ

ಅನೀಶ್ವರ್

ಹುಬ್ಬಳ್ಳಿ: ಅನೀಶ್ವರ್ ಗೌತಮ್ ನಾಯಕತ್ವದ ಕರ್ನಾಟಕ ಭಾನುವಾರ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಆರಂಭವಾಗಲಿರುವ ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ತಮಿಳುನಾಡು ತಂಡವನ್ನು ಎದುರಿಸಲಿದೆ.

ಕಳೆದ ಬಾರಿ ಕರ್ನಾಟಕ ತಂಡವು ಮೊದಲ ಬಾರಿಗೆ ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಗೆದ್ದುಕೊಂಡಿತ್ತು. ಈ ಬಾರಿಯೂ ಗೆಲುವಿನೊಂದಿಗೆ ಶುಭಾರಂಭ ಮಾಡುವ ವಿಶ್ವಾಸದಲ್ಲಿದೆ. ಯುವ ಹಾಗೂ ಅನುಭವಿಗಳಾದ ಮ್ಯಾಕ್ನಿಲ್ ನೊರೊನ್ಹಾ, ಪ್ರಖರ್ ಚತುರ್ವೇದಿ, ಕೃತಿಕ್ ಕೃಷ್ಣ, ಪಾರಸ್ ಗುರುಬಕ್ಷ್ ಆರ್ಯ, ಯಶೋವರ್ಧನ್ ಪರಂತಾಪ್ ಮತ್ತು ಸ್ಥಳೀಯ ಪ್ರತಿಭೆ, ಕಳೆದ ಬಾರಿ ರಣಜಿ ಟೂರ್ನಿಯಲ್ಲಿ ಆಡಿದ್ದ ಶಶಿಕುಮಾರ್ ಕೆ., ತಂಡದಲ್ಲಿದ್ದಾರೆ. ಗುರುವಾರವೇ ನಗರಕ್ಕೆ ಬಂದಿದ್ದ ತಮಿಳುನಾಡು ತಂಡದ ಆಟಗಾರರು ಶುಕ್ರವಾರ ಬೆಳಿಗ್ಗೆ ಅಭ್ಯಾಸ ನಡೆಸಿದರು.

ಕರ್ನಾಟಕ ತಂಡ ಇಂತಿದೆ: ವಿಶಾಲ್ ಓನತ್, ಮ್ಯಾಕ್ನಿಲ್ ನೊರೊನ್ಹಾ, ಜಾಸ್ಪರ್ ಇ.ಜೆ., ಪ್ರಖರ್ ಚತುರ್ವೇದಿ, ಹರ್ಷಿಲ್ ಧರ್ಮಾನಿ, ಅನೀಶ್ವರ್ ಗೌತಮ್ (ನಾಯಕ), ಯಶೋವರ್ಧನ್ ಪರಂತಾಪ್ (ಉಪ ನಾಯಕ), ಕೃತಿಕ್ ಕೃಷ್ಣ, (ವಿಕೆಟ್ ಕೀಪರ್), ಮನ್ವಂತ ಕುಮಾರ್ ಎಲ್., ಮೋನಿಶ್ ರೆಡ್ಡಿ, ಶಶಿಕುಮಾರ್ ಕೆ., ಪಾರಸ್ ಗುರುಬಕ್ಷ್ ಆರ್ಯ, ನಥನ್ ಡಿಮೆಲ್ಲೊ, ಸಂಜಯ್ ಅಶ್ವಿನ್, ಧನುಷ್ ಗೌಡ.

ಪಾಕ್ ವಿರುದ್ಧ ಇಂಗ್ಲೆಂಡ್‌ಗೆ ಇನಿಂಗ್ಸ್ ಜಯ

ಮುಲ್ತಾನ್ (ಎಎಫ್‌ಪಿ): ಎಡಗೈ ಸ್ಪಿನ್ನರ್ ಜಾಕ್ ಲೀಚ್ (6.5–1–30–4) ನೇತೃತ್ವದಲ್ಲಿ ಇಂಗ್ಲೆಂಡ್ ಬೌಲರ್‌ಗಳು ಪಾಕಿಸ್ತಾನದ ಬ್ಯಾಟಿಂಗ್ ಪಡೆಯನ್ನು ಧ್ವಂಸಗೊಳಿಸಿದರು. ಮೊದಲ ಟೆಸ್ಟ್ ಪಂದ್ಯವನ್ನು ಇಂಗ್ಲೆಂಡ್ ತಂಡ ಅಂತಿಮ ದಿನವಾದ ಶುಕ್ರವಾರ ನಿರೀಕ್ಷೆಯಂತೆ ಇನಿಂಗ್ಸ್ ಮತ್ತು 47 ರನ್‌ಗಳಿಂದ ಸುಲಭವಾಗಿ ಗೆದ್ದುಕೊಂಡಿತು.

ನಾಲ್ಕನೇ ದಿನವಾದ ಗುರುವಾರ ಹ್ಯಾರಿ ಬ್ರೂಕ್ ಮತ್ತು ಜೋ ರೂಟ್ ಅವರ ದಾಖಲೆ ಜೊತೆಯಾಟ ಪಂದ್ಯವನ್ನು ಇಂಗ್ಲೆಂಡ್ ಕಡೆ ವಾಲಿಸಿತ್ತು. ಬ್ರೂಕ್ ತ್ರಿಶತಕ (317) ದಾಖಲಿಸಿದರೆ, ಜೋ ರೂಟ್ ದ್ವಿಶತಕ (262) ಬಾರಿಸಿದ್ದರು.

ಗುರುವಾರ ಎರಡನೇ ಇನಿಂಗ್ಸ್‌ನಲ್ಲಿ 6 ವಿಕೆಟ್‌ಗೆ 152 ರನ್ ಗಳಿಸಿದ್ದ ಆತಿಥೇಯ ತಂಡದ ಆಟ 220 ರನ್‌ಗಳಿಗೆ ಕೊನೆಗೊಂಡಿತು. ಇದರೊಂದಿಗೆ ಮೂರು ಪಂದ್ಯಗಳ ಸರಣಿಯಲ್ಲಿ ಇಂಗ್ಲೆಂಡ್ 1–0 ಮುನ್ನಡೆ ಪಡೆಯಿತು.ಎರಡನೇ ಟೆಸ್ಟ್ ಮಂಗಳವಾರದಿಂದ ಇದೇ ಕ್ರೀಡಾಂಗಣದಲ್ಲಿ ನಡೆಯಲಿದೆ. ಮೂರನೇ ಹಾಗೂ ಅಂತಿಮ ಟೆಸ್ಟ್ ಅ. 24ರಂದು ರಾವಲ್ಪಿಂಡಿಯಲ್ಲಿ ಆರಂಭವಾಗಲಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಾಕಿಸ್ತಾನ: 556; ಇಂಗ್ಲೆಂಡ್: 7 ವಿಕೆಟ್‌ಗೆ 823 ಡಿಕ್ಲೇರ್ಡ್; ಎರಡನೇ ಇನಿಂಗ್ಸ್: ಪಾಕಿಸ್ತಾನ: 54.5 ಓವರುಗಳಲ್ಲಿ 220 (ಸಲ್ಮಾನ್ ಆಘಾ 63, ಅಮೇರ್ ಜಮಾಲ್ ಔಟಾಗದೇ 55; ಗಸ್ ಅಟ್ಕಿನ್ಸನ್ 46ಕ್ಕೆ2, ಬ್ರೈಡನ್ ಕಾರ್ಸ್ 66ಕ್ಕೆ2, ಜಾಕ್ ಲೀಚ್ 30ಕ್ಕೆ4). ಪಂದ್ಯದ ಆಟಗಾರ: ಹ್ಯಾರಿ ಬ್ರೂಕ್.

ರಣಜಿ ಟ್ರೋಫಿ: ಮಧ್ಯಪ್ರದೇಶ ನೆರವಿಗೆ ಹರ್‌ಪ್ರೀತ್

ಎರಡನೇ ದಿನದಾಟ ಮಳೆ ಪಾಲು

ಇಂದೋರ್: ಮಧ್ಯಪ್ರದೇಶ ಮತ್ತು ಕರ್ನಾಟಕ ನಡುವಣ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ 'ಸಿ' ಗುಂಪಿನ ಪಂದ್ಯದ ಎರಡನೇ ದಿನದಾಟ ಶನಿವಾರ ಮಳೆ, ಕ್ರೀಡಾಂಗಣ ತೇವಗೊಂಡಿದ್ದರಿಂದ ನಡೆಯಲಿಲ್ಲ. ಮೊದಲ ದಿನವಾದ ಶುಕ್ರವಾರ ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಆತಿಥೇಯ ಮಧ್ಯಪ್ರದೇಶ 83 ಓವರುಗಳ ಆಟದಲ್ಲಿ 4 ವಿಕೆಟ್‌ಗೆ 232 ರನ್ ಗಳಿಸಿತ್ತು.

ಮಧ್ಯಮ ಕ್ರಮಾಂಕದ ಬ್ಯಾಟರ್ ಹರ್‌ಪ್ರೀತ್ ಸಿಂಗ್ ಭಾಟಿಯಾ ಅವರ ಅಜೇಯ 75 ರನ್‌ಗಳು (164 ಎಸೆತ, 4x8) ಮೊದಲ ದಿನದಾಟದಲ್ಲಿ ಗಮನ ಸೆಳೆಯಿತು. ಉಳಿದ ಆಟಗಾರರು ಉತ್ತಮ ಆರಂಭ ಮಾಡಿದರೂ ಅದನ್ನು ದೊಡ್ಡ-ಮೊತ್ತವಾಗಿ ಪರಿವರ್ತಿಸಲು ವಿಫಲರಾದರು.

ಆರಂಭ ಆಟಗಾರ ಹಿಮಾಂಶು ಮಂತ್ರಿ ಎರಡನೇ ಓವರಿನಲ್ಲೇ ವೇಗಿ ಪ್ರಸಿದ್ಧಕೃಷ್ಣ ಬೌಲಿಂಗ್‌ನಲ್ಲಿ ಎಲ್‌ಬಿ ಬಲೆಗೆ ಬಿದ್ದರು. ಯಶ್ ದುಬೆ (20), ಶುಭ್ರಾಂಶು ಸೇನಾಪತಿ (28) ಕೂಡ ಹೆಚ್ಚು ಹೊತ್ತು ನಿಲ್ಲಲಿಲ್ಲ.

ನಾಯಕ ಶುಭ್ರಾಂಶು ಸೇನಾಪತಿ 40 ರನ್ (88ಎ, 4x2) ಗಳಿಸಿದ್ದಾಗ ಕಾಲಿನ ಸ್ನಾಯು ಸೆಳೆತದಿಂದ ಹೊರನಡೆಯಬೇಕಾಯಿತು. ರಜತ್ ಪಾಟೀದಾರ್ 31 ರನ್ ಗಳಿಸಿದರೂ ಬೇರೂರಲಿಲ್ಲ. ಆದರೆ ಹರಪ್ರೀತ್ ಇನ್ನೊಂದು ತುದಿಯಲ್ಲಿ ತಂಡದ ರಕ್ಷಣೆಗೆ ನಿಂತು ಜೊತೆಯಾಟಗಳಲ್ಲಿ ಭಾಗಿಯಾದರು. ಅವರು ಮುರಿಯದ ಐದನೇ ವಿಕೆಟ್‌ಗೆ ವೆಂಕಟೇಶ ಅಯ್ಯರ್ (ಔಟಾಗದೇ 31) ಜೊತೆ 48 ರನ್ ಸೇರಿಸಿ ಮಧ್ಯಮ ಕ್ರಮಾಂಕ ಕುಸಿಯದಂತೆ ನೋಡಿಕೊಂಡರು.

ಪದಾರ್ಪಣೆ: ಬ್ಯಾಟರ್ ಆರ್.ಸ್ಮರಣ್ ಅವರು ಈ ಪಂದ್ಯದ ಮೂಲಕ ಕರ್ನಾಟಕ ತಂಡಕ್ಕೆ ಪದಾರ್ಪಣೆ ಮಾಡಿದರು. ರಾಜ್ಯ ತಂಡವನ್ನು ರಣಜಿಯಲ್ಲಿ ಪ್ರತಿನಿಧಿಸಿದ 311ನೇ ಆಟಗಾರ ಎನಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಮಧ್ಯಪ್ರದೇಶ: 83 ಓವರುಗಳಲ್ಲಿ 4 ವಿಕೆಟ್‌ಗೆ 232 (ಶುಭ್ರಾಂಶು ಸೇನಾಪತಿ 28, ಹರ್‌ಪ್ರೀತ್ ಸಿಂಗ್ ಔಟಾಗದೇ 75, ಶುಭಂ ಶರ್ಮಾ (ಗಾಯಾಳಾಗಿ ನಿವೃತ್ತ) 40, ರಜತ್ ಪಾಟೀದಾರ್ 31, ವೆಂಕಟೇಶ ಅಯ್ಯರ್ ಔಟಾಗದೇ 31; ವಾಸುಕಿ ಕೌಶಿಕ್ 44ಕ್ಕೆ1, ಪ್ರಸಿದ್ಧ ಕೃಷ್ಣ 20ಕ್ಕೆ1, ವೈಶಾಖ ವಿಜಯಕುಮಾರ್ 39ಕ್ಕೆ1, ಹಾರ್ದಿಕ್ ರಾಜ್ 38ಕ್ಕೆ1). ಕರ್ನಾಟಕ ವಿರುದ್ಧ

ಭಾರತ– ವಿಯೆಟ್ನಾಂ ಫುಟ್‌ಬಾಲ್ ಪಂದ್ಯ ಡ್ರಾ

ನಾಮ್ ದಿನ್ಹ್ (ವಿಯೆಟ್ನಾಂ), (ಪಿಟಿಐ): ಭಾರತ ತಂಡವು ಅಂತರರಾಷ್ಟ್ರೀಯ ಫುಟ್‌ಬಾಲ್ ಸೌಹಾರ್ದ ಪಂದ್ಯದಲ್ಲಿ ಶನಿವಾರ ವಿಯೆಟ್ನಾಂ ತಂಡದ ಎದುರು 1–1 ಗೋಲುಗಳ ಡ್ರಾ ಸಾಧಿಸಿತು.

ಮನೊಲೊ ಮಾರ್ಕ್ವೆಝ್ ಅವರು ಭಾರತ ತಂಡದ ಮುಖ್ಯ ಕೋಚ್ ಹೊಣೆ ವಹಿಸಿಕೊಂಡ ನಂತರ ಮೊದಲ ಗೆಲುವಿಗೆ ಕಾಯುವಂತಾಗಿದೆ. ಅವರು ತರಬೇತುದಾರರಾದ ಮೇಲೆ ಭಾರತ, ಮಾರಿಷಸ್ ಜೊತೆ ಡ್ರಾ ಮಾಡಿಕೊಂಡಿತ್ತು. ಕಳೆದ ತಿಂಗಳು ಹೈದರಾಬಾದಿನಲ್ಲಿ ನಡೆದ ಇಂಟರ್ ಕಾಂಟಿನೆಂಟಲ್ ಕಪ್ ಪಂದ್ಯದಲ್ಲಿ 0–3 ಗೋಲುಗಳಿಂದ ಸಿರಿಯಾ ಎದುರು ಸೋಲನುಭವಿಸಿತ್ತು. ವಿಯೆಟ್ನಾಂ ಫೀಫಾ ರ್‍ಯಾಂಕಿಂಗ್‌ನಲ್ಲಿ 116ನೇ ಸ್ಥಾನದಲ್ಲಿದ್ದರೆ, ಭಾರತ 126ನೇ ಸ್ಥಾನದಲ್ಲಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರೆಂಟಲ್ ಪ್ರಾಪರ್ಟೀಸ್
Accommodation Wanted
Flat
2BHK FLAT required in Malleshwaram with lift. No Agents/Brokers. Please Owners Contact: 8971676030

ರಿಯಲ್ ಎಸ್ಟೇಟ್ ಸೆಲ್ಲಿಂಗ್
Agricultural Land
General
3 ACRES Land facing Highway at Gopanpally situated 30 KM from Kodangal is for Sale. Contact. 08978862823 or 09441070427

Chitradurga
ಚಿಕ್ಕೇನಹಳ್ಳಿ ಸಿರಿಗೆರೆಯಿಂದ ಭೀಮಸಮುದ್ರ ಹೋಗುವ ರೋಡ್ ಹತ್ತಿರ 5ಎಕರೆ ಅಡಿಕೆ ತೋಟ ಮಾರಾಟಕ್ಕಿದೆ, 3300 ಅಡಿಕೆಗಿಡಗಳು, 4ಬೋರ್ವೆಲ್‌ಗಳು. 9590045633

ಉದ್ಯೋಗಾವಕಾಶ
Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಭವಿಷ್ಯ
Astrology
ಸ್ತ್ರೀವಶೀಕರಣ, ಪುರುಷ ವಶೀಕರಣ, ಮಾಟಮಂತ್ರ, ಶತ್ರುನಾಶ, ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ. ಸಂಪರ್ಕಿಸಿ: ಕೇರಳದ ಪ್ರಖ್ಯಾತ ಜ್ಯೋತಿಷ್ಯರು, ಪಂಡಿತ್ ಸುಮಂತ್ ಕುಮಾರ್ 8722756967.

★॥ಇಷ್ಟಪಟ್ಟವರು॥★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ವೈಯಕ್ತಿಕ
Change of Name
I MEGHANA, R/o. Muthyala Nagar Bangalore, changed my name as Meghana M.

ಪ್ರವಾಸ
Travel
★ಶ್ರೇಯಸ್ ಟೂರ್ಸ್★ 20.11.2024 12/15/21ದಿನಗಳು ಈಶಾನ್ಯ ಭಾರತ ರಾಜ್ಯಗಳ(ಸೆವೆನ್ ಸಿಸ್ಟರ್ಸ್)ಅಸ್ಸಾಂ,ಅರುಣಾಚಲ ಮೇಘಾಲಯ,ನಾಗಲ್ಯಾಂಡ್ ಮಣಿಪುರ,ತ್ರಿಪುರ,ಮಿಜೋರಾಂ 08.11.2024 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ ಪಾರೋ,ಪುನಕಾ,ಪೂಚಲಿಂಗ್. 01.12.2024 13ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ (ಅಮರಕಂಟಕ ಮಯ್ಯಾರ್ ಸಹಿತ). 20.12.2024 9ದಿನಗಳು ವಿಜಯವಾಡ,ಮಂಗಳಗಿರಿ ಪಂಚರಾಮ,ಪೀಠಾಪುರಂ ಅನ್ನಾವರಂ,ವಿಶಾಖಪಟ್ಟಣ ಅರಕು,ಶ್ರೀಕೂರ್ಮಂ 20.10.2024,21.11.2024, 20.12.2024 7ದಿನಗಳು ಕಾಶಿ ನೈಮಿಷ್ಯಾರಣ್ಯ,ಪ್ರಯಾಗ್ ಗಯಾ,ದೇವ್‌ಘರ್,ನಳಂದ 01.12.2024 10ದಿನಗಳು ಅಖಂಡ ರಾಜಸ್ಥಾನ ಪ್ರವಾಸ. 21.11.2024,20.12.2024 12ದಿನಗಳು ಅಖಂಡ ಗುಜರಾತ್ ರಾಜ್ಯ ಪ್ರವಾಸ (ಬುಜ್‌ಕಚ್ ಸಹಿತ)(ಉಜ್ಜೈನಿ ಓಂಕಾರ್ ಸಹಿತ).9743351212/ 9206979202

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Vittal Mallya

February 8, 1924 - October 13, 1983

A force to reckon with, he was a visionary who inspired many to dream big and realize their full potential.

We honor the memory of our founder, Mr. Vittal Mallya.

UNITED BREWERIES LIMITED

UB Tower, UB City, #24, Vittal Mallya Road, Bengaluru - 560 001

ಮೈಸೂರು ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದ ಪ್ರಶಸ್ತಿ ಗೆದ್ದ ಜೆಸ್ಸಿ ಆ್ಯನಿ ಹಾಗೂ ರಿಯಾ ಭಾಟಿಯಾ

ಟೆನಿಸ್: ಶ್ರೀವಲ್ಲಿ ಫೈನಲ್ ಪ್ರವೇಶ
'ಡಬಲ್' ಪ್ರಶಸ್ತಿ ತವಕದಲ್ಲಿ ಜೆಸ್ಸಿ

• ಆರ್. ಜಿತೇಂದ್ರ

ಮೈಸೂರು: ಅಮೆರಿಕದ ಆಟಗಾರ್ತಿ ಜೆಸ್ಸಿ ಆ್ಯನಿ ಇಲ್ಲಿ ನಡೆಯುತ್ತಿರುವ ಮೈಸೂರು ಓಪನ್ ಮಹಿಳೆಯರ ಐಟಿಎಫ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದು, ಸಿಂಗಲ್ಸ್‌ನಲ್ಲೂ ಫೈನಲ್ ತಲುಪಿದ್ದಾರೆ.

ಚಾಮರಾಜಪುರಂನ ಮೈಸೂರು ಟೆನಿಸ್ ಕ್ಲಬ್ (ಎಂಟಿಸಿ) ಅಂಗಳದಲ್ಲಿ ಶುಕ್ರವಾರ ನಡೆದ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಜೆಸ್ಸಿ 6–1, 6–0 ಅಂತರದಿಂದ ಲಕ್ಷ್ಮಿಪ್ರಭಾ ಅರುಣ್‌ಕುಮಾರ್ ಅವರನ್ನು ಮಣಿಸಿದರು.

ಎರಡನೇ ಶ್ರೇಯಾಂಕದ ಆಟಗಾರ್ತಿ ಜೆಸ್ಸಿ ಪಂದ್ಯದ ಮೊದಲ ಸೆಟ್‌ನ ಮೊದಲ ಗೇಮ್‌ನಿಂದಲೂ ಹಿಡಿತ ಸಾಧಿಸಿದರು. ಅರ್ಹತಾ ಸುತ್ತಿನಿಂದ ಸೆಮಿ ಫೈನಲ್‌ವರೆಗೆ ಅಚ್ಚರಿಯ ಪ್ರದರ್ಶನ ನೀಡಿದ್ದ ಲಕ್ಷ್ಮಿಪ್ರಭಾ, ಅಮೆರಿಕ ಆಟಗಾರ್ತಿಗೆ ಯಾವ ಹಂತದಲ್ಲೂ ಸಾಟಿಯಾಗಲಿಲ್ಲ.

ಮತ್ತೊಂದು ಸೆಮಿಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಆಟಗಾರ್ತಿ ತಮಿಳುನಾಡಿನ ಆರ್.ಬಿ. ಶ್ರೀವಲ್ಲಿ 6–3, 6–2 ರಿಂದ ರಿಯಾ ಭಾಟಿಯಾ ಅವರನ್ನು ಸುಲಭವಾಗಿ ಮಣಿಸಿ ಫೈನಲ್ ಪ್ರವೇಶಿಸಿದರು.

ಸೋಹಾಗೆ ನಿರಾಸೆ: ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ಜೆಸ್ಸಿ ಹಾಗೂ ರಿಯಾ ಭಾಟಿಯಾ ಜೋಡಿ 6–1, 6–1ರಲ್ಲಿ ಕರ್ನಾಟಕದ ಸೋಹಾ ಸಾದಿಕ್ ಹಾಗೂ ಆಕಾಂಕ್ಷಾ ನಿಟ್ಟೂರೆ ಜೋಡಿಯನ್ನು ಮಣಿಸಿ ಪ್ರಶಸ್ತಿ ಗೆದ್ದುಕೊಂಡಿತು.

ಜಾಮ್‌ನಗರ ರಾಜಮನೆತನ: ಉತ್ತರಾಧಿಕಾರಿಯಾಗಿ ಜಡೇಜ

ಅಜಯ್ ಜಡೇಜ

ಜಾಮ್‌ನಗರ (ಪಿಟಿಐ): ಗುಜರಾತ್‌ನ ಈ ಹಿಂದಿನ ಜಾಮ್‌ನಗರ ಸಂಸ್ಥಾನದ ರಾಜವಂಶದ ಮುಖ್ಯಸ್ಥ ಶತ್ರುಶಲ್ಯಸಿಂಹ ಜಡೇಜ ಅವರು ತಮ್ಮ ಸ್ಥಾನಕ್ಕೆ ಮಾಜಿ ಕ್ರಿಕೆಟಿಗ (ಹಾಗೂ ಸೋದರಿಯ ಪುತ್ರ) ಅಜಯ್ ಜಡೇಜ ಅವರನ್ನು ಉತ್ತರಾಧಿಕಾರಿಯಾಗಿ ಘೋಷಣೆ ಮಾಡಿದ್ದಾರೆ.

ಶನಿವಾರ, ದಸರೆಯ ದಿನ ಶತ್ರುಶಲ್ಯಸಿಂಹ ಅವರು ಈ ಘೋಷಣೆ ಮಾಡಿದ್ದಾರೆ. 53 ವರ್ಷ ವಯಸ್ಸಿನ ಜಡೇಜ ಅವರು 1992 ರಿಂದ 2000 ಅವಧಿಯಲ್ಲಿ ಭಾರತ ತಂಡದ ಪರ 196 ಏಕದಿನ ಪಂದ್ಯ ಹಾಗೂ 15 ಟೆಸ್ಟ್ ಪಂದ್ಯಗಳನ್ನು ಆಡಿದ್ದಾರೆ.

ಜಡೇಜ ಅವರ ತಂದೆ ದೌಲತ್‌ಸಿಂಹಜಿ ಜಡೇಜ ಅವರು ಜಾಮ್‌ನಗರದ ಮಹಾರಾಜ ಶತ್ರುಶಲ್ಯಸಿಂಹ ಜಡೇಜ ಅವರ ಚಿಕ್ಕಪ್ಪ. ದೌಲತ್‌ಸಿಂಹಜಿ ಅವರು ಮೂರು ಬಾರಿ (1971– 1984) ಜಾಮ್‌ನಗರ ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿದ್ದರು.

'ವನವಾಸ, ಅಜ್ಞಾತವಾಸ ಮುಗಿಸಿ ಪಾಂಡವರು ವಿಜಯಿಯಾದ ದಿನ ದಸರೆಯ ಹಬ್ಬ ಆಚರಿಸಲಾಗುತ್ತದೆ. ಈ ಶುಭದಿನ ನನ್ನ ಮುಂದಿದ್ದ ದ್ವಂದ್ವವೊಂದು ಕೊನೆಗೊಂಡಿದ್ದು, ಜಡೇಜ ಅವರು ನನ್ನ ಸ್ಥಾನಕ್ಕೆ ಉತ್ತರಾಧಿಕಾರಿಯಾಗಲಿದ್ದಾರೆ' ಎಂದು ಮಹಾರಾಜ ಜಾಮಸಾಹೇಬ ಎಂದೇ ಖ್ಯಾತರಾದ ಶತ್ರುಶಲ್ಯಸಿಂಹ ಹೇಳಿಕೆಯಲ್ಲಿ ಘೋಷಿಸಿದ್ದಾರೆ.

ಏಷ್ಯನ್ ಟಿಟಿ: ಮಹಿಳಾ ಡಬಲ್ಸ್‌ನಲ್ಲಿ ಭಾರತಕ್ಕೆ ಮೊದಲ ಪದಕ ಖಚಿತ

ಸೆಮಿಫೈನಲ್‌ಗೆ ಐಹಿಕಾ– ಸುತೀರ್ಥ

ಅಸ್ತಾನಾ (ಪಿಟಿಐ): ಐಹಿಕಾ ಮುಖರ್ಜಿ ಮತ್ತು ಸುತೀರ್ಥ ಮುಖರ್ಜಿ ಅವರು ಭಾರತದ ಟೇಬಲ್ ಟೆನಿಸ್ ಕ್ಷೇತ್ರದಲ್ಲಿ ಮತ್ತೊಂದು ಚಾರಿತ್ರಿಕ ಸಾಧನೆಗೆ ಹತ್ತಿರವಾದರು. ಮಹಿಳಾ ಡಬಲ್ಸ್‌ನಲ್ಲಿ ಶನಿವಾರ ಸೆಮಿಫೈನಲ್ ತಲುಪುವ ಮೂಲಕ ಭಾರತದ ಆಟಗಾರ್ತಿಯರು ಪದಕವನ್ನು ಖಚಿತಪಡಿಸಿಕೊಂಡರು.

ಕಳೆದ ವರ್ಷ ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ಮೊದಲ ಸಲ ಕಂಚಿನ ಪದಕ ಗೆಲ್ಲುವ ಹಾದಿಯಲ್ಲಿ ಮುಖರ್ಜಿದ್ವಯರು ಚೀನಾದ ವಿಶ್ವ ಚಾಂಪಿಯನ್‌ಷಿಪ್ ಆಟಗಾರ್ತಿಯರನ್ನು ಸೋಲಿಸಿದ್ದರು. ಶನಿವಾರ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಹಿನ್ನಡೆಯಿಂದ ಚೇತರಿಸಿದ ಐಹಿಕಾ– ಸುತೀರ್ಥ 10–12, 11–7, 11–9, 11–8 ರಿಂದ ದಕ್ಷಿಣ ಕೊರಿಯಾದ ಕಿಮ್ ನೆಯಿಯೊಂಗ್– ಲೀ ಯುನ್‌ಹ್ಯೇ ಅವರನ್ನು ಸೋಲಿಸಿದರು.

ವಿಶ್ವ ಕ್ರಮಾಂಕದಲ್ಲಿ 15ನೇ ಸ್ಥಾನದಲ್ಲಿರುವ ಭಾರತದ ಆಟಗಾರ್ತಿಯರು ಸೆಮಿಫೈನಲ್‌ನಲ್ಲಿ ಜಪಾನ್‌ನ ಮಿವಾ ಹರಿಮೊಟೊ– ಮಿಯು ಕಿಶಾರಾ ಅವರನ್ನು ಎದುರಿಸಲಿದ್ದಾರೆ. ಸೆಮಿಫೈನಲ್ ಹಾಗೂ ಫೈನಲ್– ಎರಡೂ ಪಂದ್ಯಗಳು ಭಾನುವಾರ ನಡೆಯಲಿದೆ.

ಸುತೀರ್ಥ ಮುಖರ್ಜಿ (ಎಡಗಡೆ) ಮತ್ತು ಐಹಿಕಾ ಮುಖರ್ಜಿ ಪಿಟಿಐ ಸಂಗ್ರಹ ಚಿತ್ರ

ಮಾನವ್– ಮಾನುಷ್ ಮುನ್ನಡೆ: ಪುರುಷರ ಸಿಂಗಲ್ಸ್‌ನಲ್ಲಿ ಮಾನವ್ ಠಕ್ಕರ್ ಮತ್ತು ಮಾನುಷ್ ಶಾ ಅವರು ನಿರೀಕ್ಷೆ ಮೀರಿ ಪ್ರಬಲ ಎದುರಾಳಿಗಳನ್ನು ಹಿಮ್ಮೆಟ್ಟಿಸಿ ಪ್ರಿಕ್ವಾರ್ಟರ್‌ಫೈನಲ್ ತಲುಪಿದರು.

60ನೇ ಕ್ರಮಾಂಕದ ಮಾನವ್ ತಮ್ಮ ವೃತ್ತಿ ಜೀವನದಲ್ಲೇ ದೊಡ್ಡ ಅನಿರೀಕ್ಷಿತ ಫಲಿತಾಂಶದಲ್ಲಿ 14ನೇ ಕ್ರಮಾಂಕದ ಜಾಂಗ್ ವೂಜಿನ್ (ದಕ್ಷಿಣ ಕೊರಿಯಾ) ಅವರಿಗೆ 5–11, 11–9, 5–11 11–9, 11–7 ರಿಂದ ಆಘಾತ ನೀಡಿ 16ರ ಸುತ್ತಿಗೆ ಮುನ್ನಡೆದರು.

ವಿಶ್ವ ಕ್ರಮಾಂಕದಲ್ಲಿ 115ನೇ ಸ್ಥಾನದಲ್ಲಿರುವ ಮಾನುಷ್ ಅಮೋಘವಾಗಿ ಆಟವಾಡಿ 11–9, 11–5, 11–6 ರಿಂದ 23ನೇ ಕ್ರಮಾಂಕದ ಆನ್ ಜೇಹ್ಯುನ್ (ದಕ್ಷಿಣ ಕೊರಿಯಾ) ವಿರುದ್ಧ ಜಯಗಳಿಸಿದರು. ಹರ್ಮೀತ್ ದೇಸಾಯಿ ಅವರ ಸಿಂಗಲ್ಸ್ ಸವಾಲು 32ರ ಸುತ್ತಿನಲ್ಲಿ ಅಂತ್ಯಗೊಂಡಿತು. ಅವರು ನೇರ ಆಟಗಳಿಂದ 30ನೇ ಕ್ರಮಾಂಕದ ಲಿಂಗ್ ಜೊಂಗ್‌ಹೂನ್ ಅವರಿಗೆ ಮಣಿದರು.

ಅನುಭವಿ ಆಟಗಾರ ಶರತ್ ಕಮಲ್ ಅವರೂ ಆಘಾತ ಅನುಭವಿಸಿದರು. 42ನೇ ಕ್ರಮಾಂಕದ ಶರತ್, 506ನೇ ಕ್ರಮಾಂಕದ ಮೊಹಮ್ಮದ್ ಅಲ್‌ಖಸಾಬ್ ಅವರಿಗೆ ಶುಕ್ರವಾರ ಮಣಿದರು. ಸಿಂಗಲ್ಸ್‌ನಲ್ಲಿ ಅವರು ಭಾರತದ ಅಗ್ರ ಆಟಗಾರರಾಗಿದ್ದಾರೆ. ಜಿ. ಸತ್ಯನ್ ಅವರು ಉತ್ತರ ಕೊರಿಯಾದ ಹ್ಯಾಮ್ ಯು ಸಾಂಗ್ ಅವರಿಗೆ ಮಣಿದರು. ಸಾಂಗ್ ಅವರು ರ‍್ಯಾಂಕಿಂಗ್ ಪಟ್ಟಿಯಲ್ಲಿ ಸ್ಥಾನ ಪಡೆದಿಲ್ಲ.

ಈಕ್ವೆಸ್ಟ್ರಿಯನ್: ಭಾರತದ ಸೂರ್ಯಗೆ ಬೆಳ್ಳಿ

ಬೆಂಗಳೂರು: ಭಾರತದ ಯುವ ಅಶ್ವಾರೋಹಿ ಪಟು ಸೂರ್ಯ ಆದಿತ್ಯ ಅವರು ಶನಿವಾರ ಏಷ್ಯನ್ ಯೂತ್ ಈಕ್ವೆಸ್ಟ್ರಿಯನ್ ಫೆಡರೇಷನ್ ಕಪ್ ಟೂರ್ನಿಯಲ್ಲಿ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು.

ಈಕ್ವೆಸ್ಟ್ರಿಯನ್ ಫೆಡರೇಷನ್ ಆಫ್ ಇಂಡಿಯಾ ವತಿಯಿಂದ ಬೆಂಗಳೂರಿನ ಸರ್ಜ್ ಸ್ಟೇಬಲ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ 18 ವರ್ಷ ವಯಸ್ಸಿನ ಸೂರ್ಯ 71.42 ಸೆಕೆಂಡ್‌ಗಳಲ್ಲಿ ಗುರಿ ಮುಟ್ಟಿದರು.

ಸೂರ್ಯ ಅವರಿಗಿಂತ 6.22 ಸೆಕೆಂಡ್ ವೇಗವಾಗಿ ಗುರಿ ಮುಟ್ಟಿದ ಇರಾನ್‌ನ ಮೊಲ್ಲಾಫ್ಜಲ್ ಚಿನ್ನದ ಪದಕ ಗೆದ್ದರೆ, ಹಾಂಗ್‌ಕಾಂಗ್‌ನ ಫ್ಯಾಬಿಯೊಲಾ ಚೊಂಗ್ (79.99 ಸೆ) ಕಂಚಿನ ಪದಕ ಜಯಿಸಿದರು.



Toll Free Number: 1800 266 0018 | India's First 5 Year Warranty *Conditions apply | $ADDITIONAL CASH DISCOUNT AVAILABLE ON Flipkart | amazon

Hero MotoCorp Ltd. Regd. Office: The Grand Plaza, Plot No.2, Nelson Mandela Road, Vasant Kunj Phase - II, New Delhi - 110070, India. | CIN: L35911DL1984PLC017354 | For further information, contact your nearest Hero MotoCorp authorised outlet visit us on www.HeroMotoCorp.com. Accessories and features shown may not be a part of standard fitment. Always wear a helmet while riding a two-wheeler. **As per the cumulative dispatch number till March 2023. ≠Highest sales for any 2 Wheeler Corporate Entity in the world for Calendar Year 2022 - Data source: DNA Consult & Advisory's report Assessment of Global Two Wheelers Market (CY22). ^^Based on offers from empanelled dealers on Wheels of Trust platform. ^Finance offer is at the sole discretion of the Financier, subject to its respective T&Cs. Available at select dealerships. *Offer amount and combination of offer may vary for model/variant and states and it is applicable on select models only. For more details, please visit your nearest authorised Hero outlet. ##Available on purchase of Hero Good Life membership. Applicable on select models only. $Flipkart offer is subject to the sole discretion & T&Cs of Flipkart. $Amazon offers are subject to the sole discretion & T&Cs of Amazon.

AUTHORISED DEALERS: BENGALURU - HOSUR ROAD: RT KRISHNA HERO - PH: 9289923177. JIGANI: RT KRISHNA HERO - PH: 8762860999. PEENYA: SAI HERO - PH: 9289922830. MAGADI ROAD: POORNA HERO - PH: 9289923212. BANASHANKARI: SAI HERO - PH: 9289922476. BANASWADI: BHAGATH HERO - PH: 9289922738. BYATARAYANAPURA: BIMAL HERO - PH: 9289922863. LALBAGH ROAD: PRAKASH HERO - PH: 9289922117. RAJAJI NAGAR: MAX HERO - PH: 9289923023. MARATHALLI: VAAYURATHA HERO - PH: 9289923811. KAMAKSHIPALYA: POORNA MOTORS - PH: 9606922534. JP NAGAR: SAI HERO - PH: 99002 36280. KANAKPURA ROAD: SAI HERO - PH: 8904677394. HOSKOTE: BHAGATH HERO - PH: 8884600051. K R PURAM: BHAGATH HERO - PH: 7829488706. RT NAGAR: BIMAL HERO - PH: 9535327710. DODDABALLAPURA: BIMAL HERO - PH: 9742202125. TUMKUR: SAI HERO - PH: 9289922986. B.H.ROAD: SAI HERO - PH: 7022752841. TIPTUR: SAI HERO - PH: 9164840456. KUNIGAL: SAI HERO - PH: 7022752858. KOLAR: SAI BALAJI HERO - PH. 9821745024.